# ಅಧ್ಯಾಯ-೧೩

# ಶಿಕ್ಷಣ ಮತ್ತು ಕ್ರೀಡೆ

ಸ್ವಾತಂತ್ರ್ಯ ಪೂರ್ವದ ಹಾಗೂ ಅನಂತರದ ಕೋಲಾರ ಜಿಲ್ಲೆಯ ಶೈಕ್ಷಣಿಕ ಪ್ರಗತಿಯನ್ನು ರಾಜ್ಯದ ಇತರೆ ಜಿಲ್ಲೆಗಳೊಡನೆ ತುಲನಾತ್ಮಕವಾಗಿ ಅವಲೋಕನ ಮಾಡಿದಾಗ, ಜಿಲ್ಲೆಯು ಶೈಕ್ಷಣಿಕವಾಗಿ ಅಭಿವೃದ್ಧಿಶೀಲವಲ್ಲದಿರುವುದು ಕಂಡು ಬಂದರೂ, ಇತ್ತೀಚಿನ ದಶಕಗಳಲ್ಲಿ ಶಿಕ್ಷಣ ಮತ್ತು ಕ್ರೀಡಾ ರಂಗಗಳಲ್ಲಿ ಗಣನೀಯ ಪ್ರಗತಿ ಸಾಧಿಸಿರುವುದನ್ನು ಗಮನಿಸಬಹುದಾಗಿದೆ. ಈ ಕ್ಷೇತ್ರಗಳಲ್ಲಿ ಜಿಲ್ಲೆಯ ಕೊಡುಗೆ ಗಮನಾರ್ಹವಾಗಿದೆ. ಸಾಕ್ಷರತೆ, ಶೈಕ್ಷಣಿಕ ಮಟ್ಟ, ಹಾಗೂ ಕ್ರೀಡಾ ಚಟುವಟಿಕೆಗಳು ಉತ್ತಮಗೊಂಡಿದ್ದು, ಈ ರಂಗಗಳಲ್ಲಿ ರಾಜ್ಯ ಹಾಗೂ ರಾಷ್ಟ್ರಮಟ್ಟದ ಮೇಧಾವಿಗಳನ್ನು ನೀಡಿರುವ ಹಿರಿಮೆಗೆ ಜಿಲ್ಲೆಯು ಪಾತ್ರವಾಗಿದೆಯಲ್ಲದೆ, ತನ್ನ ಸರಹದ್ದುಗಳಲ್ಲಿರುವ ಆಂಧ್ರಪ್ರದೇಶ ಹಾಗೂ ತಮಿಳುನಾಡುಗಳ ಪ್ರಭಾವದಿಂದ ಬಹುಭಾಷಾ ಭಾರತಿಗೆ ಉತ್ತಮ ಉದಾಹರಣೆಯಾಗಿದೆ. ಶಾಸನಗಳ ಕಾಲದಿಂದ ಮೊದಲುಗೊಂಡು ಕಂಪ್ಯೂಟರ್ ಯುಗದವರೆಗೆ ಮತ್ತು ಗ್ರಾಮೀಣ ಜಾನಪದೀಯ ಕ್ರೀಡೆಗಳಿಂದ ಮೊದಲುಗೊಂಡು ಜಾಗತಿಕ ಕ್ರೀಡೆಗಳವರೆಗೆ ಜಿಲ್ಲೆಯು ಸಾಧಿಸಿರುವ ಪ್ರಗತಿಯನ್ನು ಐತಿಹಾಸಿಕ ಹಿನ್ನೆಲೆಯಲ್ಲಿ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

**ಶಾಸನೋಕ್ತ ಶಿಕ್ಷಣ ಕೇಂದ್ರಗಳು:**

ಶೈಕ್ಷಣಿಕ ರಂಗದಲ್ಲಿ ಪ್ರಮುಖ ಪಾತ್ರ ವಹಿಸಿದ್ದ, 'ಅಗ್ರಹಾರ'ಗಳೆಂಬ ಹೆಸರಿನ ಶಿಕ್ಷಣ ಕೇಂದ್ರಗಳು ಜಿಲ್ಲೆಯ ಎಲ್ಲೆಡೆ ಕಾರ್ಯನಿರ್ವಹಿಸುತ್ತಿದ್ದ ಸಂಗತಿಯು ಜಿಲ್ಲೆಯಲ್ಲಿ ದೊರೆತಿರುವ ಶಾಸನಗಳ ಮೂಲಕ ತಿಳಿದುಬರುತ್ತದೆ. ಇಂತಹ ಶಿಕ್ಷಣ ಕೇಂದ್ರಗಳು, ಬ್ರಾಹ್ಮಣರಿಗೆ ದಾನರೂಪವಾಗಿ ನೀಡಲ್ಪಟ್ಟಿದ್ದರೆ 'ಅಗ್ರಹಾರ' ಗಳೆಂದೂ, ಶೈವರಿಗೆ ನೀಡಲ್ಪಟ್ಟಿದ್ದರೆ, 'ಶಿವಪುರಿ'ಗಳೆಂದೂ ಕರೆಯಲ್ಪಡುತ್ತಿದ್ದವು. ರಾಜ ಮಹಾರಾಜರು, ಹಾಗೂ ಶಿಕ್ಷಣದ ಬಗ್ಗೆ ಗೌರವಾದರಗಳನ್ನು ಹೊಂದಿದ ಹಣವಂತರು ಇಂತಹ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಿ ಪೋಷಿಸುತ್ತಿದ್ದರೆಂಬ ವಿಷಯವೂ ಶಾಸನಗಳಲ್ಲಿ ಉಕ್ತವಾಗಿದೆ.

ಮುಳಬಾಗಿಲು ತಾಲೂಕಿನ ಆವನಿಯ ೮೯೦ರ ಶಾಸನದಲ್ಲಿ ನೊಳಂಬ ಇಮ್ಮಡಿಪೊಳಲ್ಚೋಳರನ ಹಿರಿಯ ರಾಣಿ ದಿವ್ವಬ್ಬರಸಿಯು ತನ್ನ ಗಂಡನ ಹೆಸರಿನಲ್ಲಿ 'ಅವಿನಾಶಿ'ನಾಮಾಂಕಿತದ ಅಗ್ರಹಾರವನ್ನೂ, ನೊಳಂಬ ನಾರಯಣೇಶ್ವರ ದೇವಾಲಯವನ್ನೂ ಸ್ಥಾಪಿಸಿದಳೆಂದು ದಾಖಲಾಗಿದೆ. ಮಾಲೂರು ತಾಲೂಕಿನ ಶಿವಾರಪಟ್ಟಣದ ೯೨೫ರ ವೀರನೊಳಂಬನ ಕಾಲದ ಶಾಸನವು, ೧೬ ಗದ್ಯಾಣಗಳನ್ನು ಪಾವತಿಸಿ, 'ಅಗ್ರಹಾರ ಮೆಂಡಿಮಂಗಲ'ದ ಮಹಾಜನರಿಂದ ಭೂಮಿಯನ್ನು ಖರೀದಿಸಿ, ದಾನ ಬಿಟ್ಟಿದ್ದನ್ನು ದಾಖಲಿಸಿದೆ. ಬಂಗಾರುಪೇಟೆ ತಾಲೂಕಿನ ಬೇತಮಂಗಲವು ಹಿಂದೆ 'ಬಿಜಮಾದಿತ್ಯ ಮಂಗಲ'ವೆಂಬ ಪ್ರಮುಖ ಅಗ್ರಹಾರವಾಗಿದ್ದಿತೆಂದು ಅಲ್ಲಿ ಲಭ್ಯವಿರುವ ೯೪೦ ಹಾಗೂ ೯೫೦ರ ನೊಳಂಬ ಶಾಸನಗಳು ಉಲ್ಲೇಖಿಸುತ್ತವೆ. ಮುಳಬಾಗಲು ತಾಲೂಕಿನ ಉತ್ತನೂರಿನ

೯೬೯ರ ನೊಳಂಬರ ಶಾಸನವು, ಅದು ಮೊದಲಿಗೆ ೧೨ ಮಂದಿ ಮಹಾಜನರನ್ನು ಹೊಂದಿದ್ದ ಅಗ್ರಹಾರವಾಗಿದ್ದಿತೆಂದು ಸೂಚಿಸುತ್ತದೆ. ಇದೇ ಊರಿನಲ್ಲಿರುವ ೧೦೩೦ರ ಚೋಳ ಶಾಸನದಿಂದ, ಇದಕ್ಕೆ (ರಾಜೇಂದ್ರ) ಚೋಳ 'ಚತುರ್ವೇದಿ ಮಂಗಲ' ಎಂಬ ಅಭಿದಾನವೂ ಇದ್ದ ಅಂಶ ವೇದ್ಯವಾಗುತ್ತದೆ. ಕೋಲಾರ ತಾಲೂಕಿನ ನರಸಾಪುರದ ಚೋಳ ಕುಲೋತ್ತುಂಗನ ಶಾಸನದಲ್ಲಿ, ನೆರೆಯ ವೆಳ್ಳಿಯೂರಿಗೆ (ಬೆಳ್ಳೂರು) 'ಜನನಾಥ ಚತುರ್ವೇದಿ ಮಂಗಲ'ವೆಂಬ ಅಭಿದಾನವಿದ್ದಿತೆಂದು ದಾಖಲಾಗಿದೆ. ಶಿಡ್ಲಘಟ್ಟ ತಾಲೂಕಿನ ೧೧೨೦ರ ಸುಗಟೂರು ಶಾಸನದಿಂದ ಹಿಂದೆ ಇದು 'ಅರುಮೊಳಿದೇವ ಚತುರ್ವೇದಿ ಮಂಗಲ'ವೆಂಬ ಅಗ್ರಹಾರವಾಗಿದ್ದಿತೆಂಬ ಅಂಶ ತಿಳಿದುಬರುತ್ತದೆ. ಕೋಲಾರ ತಾಲೂಕಿನ ಮಲ್ಲಾಂಡಹಳ್ಳಿಯ ೧೨೬೯ರ ಶಾಸನವು ಶ್ರೀಪಟ್ಟಿ (ಸೀತೆ ಬೆಟ್ಟ)ಯು ಪೂರ್ವದಲ್ಲಿ 'ಮರೈಪುಕ್ಕರಾಮ ಚತುರ್ವೇದಿ ಮಂಗಲ' ಎಂಬ ಹೆಸರಿನ ಅಗ್ರಹಾರವಾಗಿದ್ದ ವಿಷಯವನ್ನು ತಿಳಿಸುತ್ತದೆ.

ಮುಳಬಾಗಿಲು ತಾಲೂಕಿನ ಕುರುಡುಮಲೆಗೆ 'ಕೂತಾಂಡುದೇವ ನಲ್ಲೂರು' ಎಂಬ ಹೆಸರಿದ್ದು, ಹಿಂದೆ ಇದೊಂದು ಅಗ್ರಹಾರವಾಗಿದ್ದಿತೆಂಬ ಅಂಶವು ಅಲ್ಲಿನ ೧೨೬೩ರ ಶಾಸನದಿಂದ ವೇದ್ಯವಾಗುತ್ತದೆ. ಇದೇ ತಾಲೂಕಿನ ಮುಡಿಯನೂರು ಗ್ರಾಮದ ೧೩೩೮ರ ಶಾಸನವು ಇದು ಪೂರ್ವದಲ್ಲಿ 'ಕೂತ್ತಾಂಡದೈವ ಚತುರ್ವೇದಿ ಮಂಗಲ'ವೆಂಬ ಅಗ್ರಹಾರವಾಗಿದ್ದಿತೆಂದು ತಿಳಿಸುತ್ತದೆ. ಬಂಗಾರುಪೇಟೆ ತಾಲೂಕಿನ ನಲ್ಲೂರಿನ ಇದೇ ಕಾಲದ, ಇನ್ನೊಂದು ಶಾಸನದಂತೆ, ಈ ಸ್ಥಳ 'ರೂಪನಾರಾಯಣ ವಲ್ಲಾಳ ನಲ್ಲೂರು' ಎಂದು ಹೊಯ್ಸಳ ಮೂರನೇ ಬಲ್ಲಾಳನ ಕಾಲದಲ್ಲಿ ಖ್ಯಾತಿ ಹೊಂದಿದ ಅಗ್ರಹಾರವಾಗಿದ್ದಿತೆಂದು ತಿಳಿದುಬರುತ್ತದೆ. ಬುಸನಹಳ್ಳಿಯ ೧೩೬೬ರ ಶಾಸನದಂತೆ, ಇಲ್ಲಿ 'ಅವಸರ'ದ ಅಂಕಪ್ಪನು ಅಗ್ರಹಾರ ದೇವಲಾಪುರವನ್ನು ರೂಪಿಸಿ, ಬ್ರಾಹ್ಮಣರಿಗೆ ದಾನ ಬಿಟ್ಟನು (ಅವಸರ–ದೇವಸ್ಥಾನದ ಒಂದು ಹೊತ್ತಿನ ಪೂಜೆಯ ವೆಚ್ಚ). ಇದೇ ತಾಲೂಕಿನ ಕೊಡಿಗೇಹಳ್ಳಿಯಲ್ಲಿ ದೊರೆತಿರುವ ೧೪೨೦ರ ಶಾಸನವು, ಆ ಗ್ರಾಮವು 'ಸೋಮನಾಥಪುರ'ವೆಂಬ ಅಗ್ರಹಾರವಾಗಿದ್ದು, ಸೋಮನಾಥ ದೇವರಿಗೆ ದಾನವಾಗಿ ಬಿಡಲ್ಪಟ್ಟಿದ್ದಿತೆಂದು ತಿಳಿಸುತ್ತದೆ. ಮುಳಬಾಗಿಲು ತಾಲೂಕಿನ ೧೪೩೧ರ ಶಾಸನದಂತೆ ಈ ಸ್ಥಳವೂ ಒಂದು ಅಗ್ರಹಾರವಾಗಿದ್ದಿತೆಂದು ವೇದ್ಯವಾಗುತ್ತದೆ.

ಕೋಲಾರ ತಾಲೂಕಿನ ಆಲಹಳ್ಳಿಯ ೧೪೯೬ರ ಇಮ್ಮಡಿ ನರಸಿಂಹನ ಕಾಲದ ಶಾಸನದಲ್ಲಿ ಮುಳುವಾಯ ಅಮೃತನಾಥ ಬಾಗರ ಮಠದ ಉಲ್ಲೇಖವಿದೆ. ಶಿಡ್ಲಘಟ್ಟ ತಾಲೂಕಿನ ೧೫೦೦ರ ಕುಂದರಗುರಿಕೆ ಶಾಸನ ಇದು ಹಿಂದೆ'ಸರ್ವನಮಸ್ಯದ ಅಗ್ರಹಾರ ರಾಮಸಮುದ್ರ'ವೆಂದು ಕರೆಯಲ್ಪಡುತ್ತಿದ್ದು, ಖ್ಯಾತ ಕಲಿಕಾ ಕೇಂದ್ರವಾಗಿದ್ದಿತೆಂದು ಉಲ್ಲೇಖಿಸಲಾಗಿದೆ. ಮುಳಬಾಗಿಲು ತಾಲೂಕಿನ ಗುಡಿಪಲ್ಲಿಯ ೧೫೨೫ ಶಾಸನದಂತೆ, ಅದು 'ಪ್ರತಾಪದೇವರಾಯಪುರ' ಎಂಬ ಅಭಿದಾನವನ್ನು ಹೊಂದಿದ ಅಗ್ರಹಾರವಾಗಿದ್ದಿತು. ಕೋಲಾರ ತಾಲೂಕಿನ ಟಮಕದ ೧೫೫೮ರ ಶಾಸನವು ಕೋಡಿ ರಾಮಸಮುದ್ರವನ್ನು ವೀರಯ್ಯನಿಗೆ 'ಭಟ್ಟ ಅಗ್ರಹಾರ'ವಾಗಿ ದಾನ ಬಿಟ್ಟಿದ್ದನ್ನು ದಾಖಲಿಸಿದೆ. ಕಲ್ಲಂಡೂರಿನ ೧೫೬೫ (?)ರ ಶಾಸನದಿಂದ ಈ ಊರಿಗೆ 'ಕನ್ನಡ ಭಾರತಿ ಅಗ್ರಹಾರ'ಎಂಬ ವಿಶೇಷಣವಿದ್ದ ಅಂಶ ತಿಳಿದುಬರುತ್ತದೆ.

ಮುಳಬಾಗಲು ತಾಲೂಕಿನ ಮುದವಾಡಿಯ ೧೫೬೯ರ ಶಾಸನವು ಮುಳುವಾಯಿ ರಾಜ್ಯದೊಳಗಣ ಮುದುವಾಡಿ ಅಗ್ರಹಾರವಾದ ದೇವಲಾಪುರವು 'ವಿದ್ಯಾವಿಹಾರ'ವಾಗಿದ್ದ ಅಂಶವನ್ನು ತಿಳಿಸುತ್ತದೆ. ಬಾಗೇಪಲ್ಲಿ ತಾಲೂಕಿನ ಗುಮ್ಮರೆಡ್ಡಿಪುರದ ೧೬೧೯ರ ಶಾಸನದ ಭಟ್ಟ ಅಗ್ರಹಾರದ ಉಲ್ಲೇಖ ಹಾಗೂ ಕೋಲಾರ ತಾಲೂಕಿನ ಹೂಳೂರಿನ ೧೬೨೮ ಮತ್ತು ೧೬೬೩ರ ಶಾಸನಗಳು ಇವೂ ಸಹ ಅಗ್ರಹಾರಗಳಾಗಿದ್ದ ಉಲ್ಲೇಖಗಳನ್ನು ಹೊಂದಿವೆ. ಕೋಲಾರ ತಾಲೂಕಿನ ೧೬೬೬ರ ಹುತ್ತೂರು ಶಾಸನದಲ್ಲಿ ಕೋಲಾರ ಚಾವಡಿಗೆ ಸೇರಿದ ಉತ್ತೂರು ಗ್ರಾಮವನ್ನು ಅಗ್ರಹಾರವನ್ನಾಗಿಸಿ ಸರ್ವನಮಸ್ಯವಾಗಿ ದಾನ ಬಿಟ್ಟ ಅಂಶವು ವೇದ್ಯವಾಗುತ್ತದೆ. ಅಣ್ಣೇನಹಳ್ಳಿಯ ೧೬೭೦ರ ಶಾಸನದಲ್ಲಿ ಇದು ಒಂದು ಅಗ್ರಹಾರವಾಗಿತ್ತೆಂಬ ಅಂಶವೂ ದಾಖಲಾಗಿದೆ.

### ಪ್ರಾಚೀನ ಕಾಲ

ಆದಿಯಿಂದಲೂ ಶಿಕ್ಷಣ ಮತ್ತು ಕಲಿಕೆಗಳು ಜಿಲ್ಲೆಯಲ್ಲಿ ಪ್ರಾಮುಖ್ಯತೆ ಹಾಗೂ ಗೌರವಾದರಗಳನ್ನು ಹೊಂದಿದ್ದರೂ, ಇದರ ನಿರ್ವಹಣೆಯಲ್ಲಿ ಸರಕಾರದ ನೇರ ಹಸ್ತಕ್ಷೇಪವಿರಲಿಲ್ಲ. ಮಠಗಳು ಮತ್ತು ಗುರುಕುಲಗಳು ಶಿಕ್ಷಣ ಕೇಂದ್ರಗಳಾಗಿದ್ದವು. ಕಲಿಕೆಯು ಒಂದು ಧಾರ್ಮಿಕ ಕರ್ತವ್ಯವೆಂಬ ಭಾವನೆಯಿಂದ ರಾಜಮಹಾರಾಜರು ಮತ್ತು ಸ್ಥಿತಿವಂತರು ವಿದ್ಯಾ ಪ್ರವರ್ಧನೆಗಾಗಿ ಧನ

ಸಹಾಯ ಮಾಡುತ್ತಿದ್ದರು ಹಾಗೂ ಖ್ಯಾತ ವಿದ್ವಾಂಸರನ್ನು ಇದರಲ್ಲಿ ತೊಡಗಿಸಿ, ವಿದ್ಯಾಪ್ರಸಾರದಲ್ಲಿ ಭಾಗವಹಿಸುತ್ತಿದ್ದರು. ಮಠಾಧಿಪತಿಗಳೂ ದೇವಸ್ಥಾನದ ಅರ್ಚಕರೂ ಬೋಧಕರಾಗಿದ್ದರು. ಮೂಲ ಶಿಕ್ಷಣವು ಓದು ಬರಹ ಹಾಗೂ ಗಣಿತಗಳನ್ನೊಳಗೊಂಡಿದ್ದು, ತದನಂತರ ವಿದ್ಯಾರ್ಥಿಗಳು ರಾಮಾಯಣ, ಮಹಾಭಾರತ ಹಾಗೂ ಗೀತೆಗಳಂತಹ ಉದ್ಗ್ರಂಥಗಳ ಮುಖ್ಯ ಭಾಗಗಳನ್ನು ಬಾಯಿಪಾಠ ಮಾಡಬೇಕಿದ್ದಿತು. ಗುರುಗಳ ಬಗ್ಗೆ ಅವರಲ್ಲಿ ಗೌರವ, ಭಯ ಹಾಗೂ ಭಕ್ತಿಗಳು ರಕ್ತಗತವಾಗಿದ್ದು, ತಪ್ಪಿತಸ್ಥರಿಗೆ ಉಗ್ರ ಶಿಕ್ಷೆ ವಿಧಿಸಲ್ಪಡುತ್ತಿತ್ತು. ತಾವು ಗುರುವಿನ ಗುಲಾಮರೆಂದೇ ಭಾವಿಸಿ, ಅವರನ್ನು ಕಾಯಾ, ವಾಚಾ, ಮನಸಾ ಪೂಜ್ಯ ಭಾವನೆಯಿಂದ ಶಿಷ್ಯರು ಸೇವಿಸುತ್ತಿದ್ದರು. ವರ್ಣಾಶ್ರಮ ಧರ್ಮದಡಿ ಬ್ರಾಹ್ಮಣ ವಿದ್ಯಾರ್ಥಿಗಳು ಕನಿಷ್ಠ ೧೨ ವರ್ಷಗಳ ಕಾಲ ವೇದ ವೇದಾಂಗಗಳಲ್ಲದೆ, ಸಾಹಿತ್ಯ, ವ್ಯಾಕರಣ, ಗಣಿತ, ತರ್ಕ, ಖಗೋಳ ಮುಂತಾದ ವಿಷಯಗಳಲ್ಲಿ ಮೇಲ್ಕಂಡ ರೀತಿಯಲ್ಲಿ ವಿದ್ಯಾರ್ಜನೆ ಮಾಡಬೇಕಿದ್ದಿತು.

ಕ್ಷತ್ರಿಯ ವಿದ್ಯಾರ್ಥಿಗಳಿಗೆ ಯುದ್ಧ ಸಂಬಂಧಿಯಾದ ಬಿಲ್ಲು ವಿದ್ಯೆ ಹಾಗೂ ಇತರೆ ನೈಪುಣ್ಯಗಳನ್ನು ಬೋಧಿಸಲಾಗುತ್ತಿತ್ತು. ವೈಶ್ಯರ ವಿದ್ಯೆ ಹೆಚ್ಚಾಗಿ ವಂಶಪಾರಂಪರಿಕವಾಗಿದ್ದು, ತಂದೆಯು ಮಗನಿಗೆ ತಮ್ಮ ಪಾರಂಪರಿಕ ವಿದ್ಯೆಯನ್ನು ಬೋಧಿಸುತ್ತಿದ್ದನು. ಗುರು ಶಿಷ್ಯರು ತಂದೆ ಮಕ್ಕಳೇ ಆಗಿದ್ದುದರಿಂದ ಬೋಧನೆ ತರಗತಿಯ ಔಪಚಾರಿಕ ಶಿಕ್ಷಣದ ಚೌಕಟ್ಟಿಗೆ ಒಳಪಟ್ಟಿರಲಿಲ್ಲ. ಇವರ ಹಲವಾರು ವೃತ್ತಿಗಳಿಗೆ ಓದುಬರಹಗಳ ಅವಶ್ಯಕತೆಯೇ ಇರಲಿಲ್ಲವಾದರೂ, ಇವರಿಗೆ ತಂದೆಯು ತಾನು ಕಲಿತ ಎಲ್ಲವನ್ನು ಸಾಧ್ಯವಾದಷ್ಟು ಬೋಧಿಸಿ, ಅವರನ್ನು ಸತ್ಪ್ರಜೆಗಳಾಗಿಯೂ, ಸದ್ಗೃಹಸ್ಥರಾಗಿಯೂ ಬಾಳ್ವೆ ಮಾಡುವಂತೆ ತಯಾರು ಮಾಡುತ್ತಿದ್ದನು. ಸಾಮಾನ್ಯವಾಗಿ ದ್ವಿಭಾಷಾ ಶಿಕ್ಷಣವು ಎಲ್ಲಾ ಮಕ್ಕಳಿಗೆ ಮೌಖಿಕವಾಗಿ ನೀಡಲ್ಪಡುತ್ತಿತ್ತು. ಈ ಪ್ರಾಂತದ ಅಂದಿನ 'ಪೆದ್ದ ಬಾಲ ಶಿಕ್ಷೆ'ಗ್ರಂಥವು ಇಂದಿಗೂ ಜನಪ್ರಿಯವಾಗಿದ್ದು, ಇದರಲ್ಲಿ ಶಿಕ್ಷಣ ಹಾಗೂ ಸಾಮಾನ್ಯ ಜೀವನಕ್ಕೆ ಸಂಬಂಧಿಸಿದ ಸಕಲ ವಿಷಯಗಳನ್ನೂ ಕಾಣಬಹುದಾಗಿದೆ

ಮುಸ್ಲಿಂ ಶಿಕ್ಷಣ ಹೈದರ್ ಹಾಗೂ ಟೀಪೂ ಕಾಲದಲ್ಲಿ ಸಾಕಷ್ಟು ಪ್ರಾಮುಖ್ಯತೆ ಗಳಿಸಿತು. 'ಮಕ್ತಬ್' ಮತ್ತು 'ಮದ್ರಸಾ'ಗಳು ಇವರ ಕಲಿಕಾ ಕೇಂದ್ರಗಳಾಗಿದ್ದವು. 'ಮಕ್ತಬ್' ಗಳು ಸಾಮಾನ್ಯವಾಗಿ ಮಸೀದಿಗಳ ಆವರಣದಲ್ಲಿ ನಡೆಸಲ್ಪಡುತ್ತಿದ್ದು, ಇವುಗಳಲ್ಲಿ ಹೆಚ್ಚಾಗಿ ಕುರಾನ್ ಕಲಿಕೆ ಮುಖ್ಯ ವಿಷಯವಾಗಿದ್ದರೆ, 'ಮದ್ರಸಾ'ಗಳು ಪ್ರೌಢ ಶಿಕ್ಷಣ ನೀಡುತ್ತಿದ್ದವು.

**ಆಧುನಿಕ ಶಿಕ್ಷಣ:** ಅಂದಿನ ಮೈಸೂರಿನ ಅರಸರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ್ ೧೮೩೩ರಲ್ಲಿ ಮೈಸೂರಿನಲ್ಲಿ ಸ್ಥಾಪಿಸಿದ ಉಚಿತ ಆಂಗ್ಲಶಾಲೆಯಿಂದ ರಾಜ್ಯದಲ್ಲಿ ಆಧುನಿಕ ಶಿಕ್ಷಣ ಮೊದಲುಗೊಂಡಿತು. ಈ ಶಾಲೆ ಸಂಪೂರ್ಣವಾಗಿ ಅರಮನೆಯ ಖಜಾನೆಯಿಂದಲೇ ನಡೆಯುತಿದ್ದಿತು. ನಂತರದಲ್ಲಿ ೧೮೫೪ರಲ್ಲಿ ಸರ್ ಚಾರ್ಲ್ಸ್‌ವುಡ್ಸ್ ವರದಿ ಬಂದನಂತರ ಶೈಕ್ಷಣಿಕ ರಂಗದಲ್ಲಿ ವ್ಯವಸ್ಥಿತವಾಗಿ ರಾಜ್ಯ ಸರ್ಕಾರದ ಚಟುವಟಿಕೆಗಳು ಪ್ರಾರಂಭವಾದವು.

ಈಸ್ಟ್ ಇಂಡಿಯಾ ಕಂಪನಿಯ ನಿರ್ದೇಶಕರು ಈ ವರದಿಯಲ್ಲಿ ನೀಡಿದ್ದ ನಿಯಮಾನುಸಾರ ಆಧುನಿಕ ಶಿಕ್ಷಣ ತನ್ನ ರೂಪುರೇಷೆಗಳನ್ನು ಹೊಂದಿತು. ಆ ಸಮಯದಲ್ಲಿ ಮೈಸೂರು ರಾಜ್ಯ ಬ್ರಿಟಿಷ್ ಕಮಿಷನ್ನಿನ ಆಡಳಿತಾಧಿಕಾರಕ್ಕೆ ಒಳಪಟ್ಟಿತ್ತು. ವುಡ್ಸ್ ವರದಿಯ ನಿಯಮಗಳನ್ನು ಮೈಸೂರು ಪ್ರಾಂತಕ್ಕೆ ಅಳವಡಿಸಬೇಕಾದಾಗ, ಅಂದಿನ ಜ್ಯುಡಿಷಿಯಲ್ ಕಮಿಷನರಾಗಿದ್ದ ಡೇವರೋ ಎಂಬಾತ ಮೈಸೂರು ಮತ್ತು ಕೂರ್ಗ್ (ಕೊಡಗು) ರಾಜ್ಯಗಳಿಗೆ ಒಟ್ಟಾಗಿ ಒಂದು ಶೈಕ್ಷಣಿಕ ಯೋಜನೆಯನ್ನು ರೂಪಿಸಿದನು. ಈ ಯೋಜನೆಯನ್ನು ಸಣ್ಣಪುಟ್ಟ ಮಾರ್ಪಾಡುಗಳೊಂದಿಗೆ ಸರ್ಕಾರ ಕಾರ್ಯಗತಗೊಳಿಸಿತು. ೧೮೬೮ರಲ್ಲಿ ರೈಸ್ ಅವರು ಸೂಚಿಸಿದ **"ಹೋಬಳಿ ಶಾಲಾ ಪದ್ಧತಿ"** ಸರ್ಕಾರದಿಂದ ಅನುಷ್ಠಾನಗೊಂಡು, ಶೈಕ್ಷಣಿಕ ಇತಿಹಾಸದಲ್ಲಿ ಒಂದು ಮೈಲುಗಲ್ಲಾಯಿತು. ಈ ಯೋಜನೆಯಂತೆ ಯಾವ ಹೋಬಳಿಯಲ್ಲಿ ಜನಮತದಂತೆ ಶಾಲೆಯ ಅವಶ್ಯಕತೆ ಇದ್ದಿತೋ, ಅಂತಹ ಹೋಬಳಿಯಲ್ಲಿ ಜನರೇ ಕಟ್ಟಡ ನೀಡಿದಲ್ಲಿ ಮಾತ್ರ ಒಂದೊಂದು ಶಾಲೆಯನ್ನು ಸರ್ಕಾರ ಮಂಜೂರು ಮಾಡಿತು. ಇದರಿಂದ ೧೮೭೧-೭೨ರ ವೇಳೆಗೆ ಪರಿಸ್ಥಿತಿ ಸುಧಾರಿಸಿ, ಸುಮಾರು ಎಲ್ಲಾ ಹೋಬಳಿಗಳಲ್ಲಿಯೂ ಶಾಲೆಗಳು ಸ್ಥಾಪಿಸಲ್ಪಟ್ಟು, ಪ್ರತೀ ತಾಲೂಕಿನಲ್ಲಿ ಒಂದು ಸುಪೀರಿಯರ್ ವರ್ನ್ಯಾಕ್ಯುಲರ್ ಶಾಲೆ ಪ್ರಾರಂಭಗೊಂಡಿತು. ರಾಜಮನೆತನಕ್ಕೆ ರಾಜ್ಯವು ಹಸ್ತಾಂತರಗೊಂಡನಂತರ ಶೈಕ್ಷಣಿಕ ಪ್ರಗತಿಗೆ ಮತ್ತಷ್ಟು ಮಹತ್ವ ನೀಡಲ್ಪಟ್ಟು, ಈ ರಂಗದಲ್ಲಿ ಸರ್ವತೋಮುಖ ಅಭಿವೃದ್ಧಿ ಗೋಚರಿಸಿತು.

ರಾಜ್ಯ ಶಿಕ್ಷಣ ಕ್ಷೇತ್ರದಲ್ಲಿ ಹಲವೆಡೆ ೧೯೧೧–೧೬ರ ಅವಧಿಯಲ್ಲಿ ನಡೆದ ಮತ್ತೊಂದು ಕ್ರಾಂತಿಕಾರಕ ಬದಲಾವಣೆ ಎಂದರೆ, ಕಡ್ಡಾಯ ಶಿಕ್ಷಣ. ಇದರಂತೆ ದೇಶದ ಇತರೆಡೆ ಪ್ರಚಲಿತದಲ್ಲಿದ್ದ ಹಾಗೂ ಅತ್ಯವಶ್ಯಕವಾದ ಎಸ್.ಎಸ್.ಎಲ್.ಸಿ. ಯೋಜನೆ ಅನುಷ್ಠಾನಗೊಂಡಿತು. ಇದೇ ಕಾಲಕ್ಕೆ ರಾಜರ ಆಡಳಿತದಲ್ಲಿ ರಾಜ್ಯದ ಪ್ರಥಮ ವಿಶ್ವವಿದ್ಯಾಲಯವಾದ ಮೈಸೂರು ವಿಶ್ವವಿದ್ಯಾಲಯವು ಸ್ಥಾಪನೆಯಾಯಿತು. ಶಿಕ್ಷಣ ಕ್ಷೇತ್ರವನ್ನು ಸರ್ಕಾರ ಸಂಪೂರ್ಣವಾಗಿ ಪುನರ್ವಿಮರ್ಶೆಗೊಳಿಸಿ, ಉಪಾಧ್ಯಾಯ ವೃತ್ತಿಯನ್ನು ಕೈಗೊಂಡಿದ್ದ ಎಲ್ಲರ ವೇತನ ಶ್ರೇಣಿಯನ್ನು ಪರಿಷ್ಕೃತಗೊಳಿಸಿ, ಈ ವೃತ್ತಿ ಬಾಂಧವರ ಜೀವನೋಪಾಯದ ಹಾದಿಯನ್ನು ಸುಗಮಗೊಳಿಸಿತು.

## ಸಾಕ್ಷರತೆ

ಹಿಂದಿನ ಜನಗಣತಿಯಂತೆ ಇಡೀ ಜನಸಂಖ್ಯೆಯನ್ನು ಸಾಕ್ಷರತೆಗೆ ಸಂಬಂಧಿಸಿದಂತೆ 'ತಿಳಿದವರು', 'ಅಕ್ಷರಸ್ಥರು' ಹಾಗೂ 'ಅನಕ್ಷರಸ್ಥರು' ಎಂದು ಗಣತಿ ಇಲಾಖೆಯವರು ವಿಭಾಗ ಮಾಡಿದ್ದರು. ಆದರೆ ಗಣತಿ ವಿಧಾನ ಅನುಸರಿಸಿದಾಗ, 'ತಿಳಿದವರು' ಮತ್ತು 'ಅನಕ್ಷರಸ್ಥ'ರ ಮಧ್ಯೆ ನಿರ್ದಿಷ್ಟವಾದ ಗೆರೆ ಎಳೆಯುವುದು ಅಸಾಧ್ಯವಾದಾಗ, ೧೯೦೧ರ ಜನಗಣತಿಯಿಂದ 'ಅಕ್ಷರಸ್ಥರು' ಮತ್ತು 'ಅನಕ್ಷರಸ್ಥರು' ಎಂಬ ಎರಡೇ ವಿಭಜನೆಗಳನ್ನು ಮಾಡಲಾಯಿತು. ಸಾಕ್ಷರತೆಗೆ ಖಚಿತವಾದ ವ್ಯಾಖ್ಯೆ ೧೯೧೧ರ ಜನಗಣತಿಯಲ್ಲಿ ಮಾತ್ರ ದೊರಕಿತು. ಒಂದು ಸಾಮಾನ್ಯ ಪತ್ರವನ್ನು ಬರೆಯಲು ಮತ್ತು ಓದಲು ಬಲ್ಲ ವ್ಯಕ್ತಿಗಳನ್ನು ಸಾಕ್ಷರರು ಎಂದು ಪರಿಗಣಿಸಲಾಯಿತು. ಕೋಲಾರ ಜಿಲ್ಲೆಗೆ ಸಂಬಂಧಪಟ್ಟ ೧೯೫೧ರ ಜನಗಣತಿಯಲ್ಲಿ ಸಾಕ್ಷರತೆಯನ್ನು ಈ ರೀತಿ ವ್ಯಾಖ್ಯಾನಿಸಲಾಗಿದೆ. "ಯಾವುದೇ ನಿರ್ದಿಷ್ಟ ಭಾಷೆಯ ಒಂದು ಸಾಮಾನ್ಯ ಸಂದೇಶಗಳನ್ನು ಓದಿ ಬರೆಯಲು ಬಲ್ಲವರು ಅಕ್ಷರಸ್ಥರು".

**ಜಿಲ್ಲೆಯ ಸಾಕ್ಷರತಾ ಪ್ರಮಾಣ:** ಕೋಲಾರ ಜಿಲ್ಲೆಯ ಒಟ್ಟಾರೆ ಸಾಕ್ಷರತಾ ಪ್ರಮಾಣವು ೧೯೪೧ರ ವರೆಗೆ ಕೆಳಮಟ್ಟದಲ್ಲಿಯೇ ಇದ್ದಿತೆಂದು ತಿಳಿದುಬರುತ್ತದೆ. ೧೯೪೧–೫೧ ಮತ್ತು ೧೯೫೧–೬೧ರ ದಶಕಗಳಲ್ಲಿ ಜಿಲ್ಲೆಯ ಸಾಕ್ಷರತಾ ಮಟ್ಟ ಗಣನೀಯವಾಗಿ ಪ್ರಗತಿ ಹೊಂದಿತು. ಜಿಲ್ಲೆಯ ಇತರೆಡೆಗಳಿಗೆ ಹೋಲಿಸಿದಾಗ, ಚಿನ್ನದ ಗಣಿ ಪ್ರದೇಶದ (ಕೆ.ಜಿ.ಎಫ್) ಸಾಕ್ಷರತಾ ಮಟ್ಟ ಉತ್ತಮವಾಗಿತ್ತು. ಇದಕ್ಕೆ ಉದಾಹರಣೆಯಾಗಿ ಮುಂದಿನ ಕೋಷ್ಟಕದಲ್ಲಿ ಕೋಲಾರ ಹಾಗೂ ಕೆ.ಜಿ.ಎಫ್. ಪ್ರದೇಶಗಳಲ್ಲಿ ೧೯೪೧ ರಿಂದ ೧೯೬೧ರ ವರೆಗೆ ಪ್ರತ್ಯೇಕವಾಗಿ ಜನಸಂಖ್ಯೆ, ಅಕ್ಷರಸ್ಥರ ಸಂಖ್ಯೆ ಹಾಗೂ ಶೇಕಡಾವಾರು ಸಾಕ್ಷರತೆಗಳ ವಿವರಗಳನ್ನು ನೀಡಲಾಗಿದೆ.

**ಕೋಷ್ಟಕ ೧೩.೧**

| ವರ್ಷ | ಕೋಲಾರ ಜಿಲ್ಲೆ (ಕೆ.ಜಿ.ಎಫ್. ಹೊರತುಪಡಿಸಿ) | | | ಕೆ.ಜಿ.ಎಫ್ ಪ್ರಾಂತ | | |
|---|---|---|---|---|---|---|
| | ಜನಸಂಖ್ಯೆ | ಅಕ್ಷರಸ್ಥರು | ಶೇಕಡಾ ಸಾಕ್ಷರತೆ | ಜನಸಂಖ್ಯೆ | ಅಕ್ಷರಸ್ಥರು | ಶೇಕಡಾ ಸಾಕ್ಷರತೆ |
| ೧೯೧೧ | ೬,೯೭,೮೭೪ | ೪೦,೯೧೦ | ೫೮ | ೮೩,೭೪೩ | ೭,೨೪೦ | ೮.೬ |
| ೧೯೨೧ | ೭,೦೬,೧೯೬ | ೩೯,೧೩೮ | ೫೫ | ೮೭,೬೮೨ | ೧೩,೭೩೨ | ೧೫.೬ |
| ೧೯೩೧ | ೭,೬೫,೬೨೦ | ೫೫,೦೦೦ | ೭೧ | ೮೫,೧೦೩ | ೧೫,೦೦೦ | ೧೭.೬ |
| ೧೯೪೧ | ೮,೩೯,೦೫೭ | ೬೮,೪೪೮ | ೮.೧ | ೧,೩೩,೮೫೯ | ೨೯,೯೯೨ | ೨೨.೪ |

ಆಧಾರ: ೧೯೬೮ರ ಕೋಲಾರ ಜಿಲ್ಲಾ ಗ್ಯಾಸೆಟಿಯರ್

ಕೆ.ಜಿ.ಎಫ್. ಹೊರತುಪಡಿಸಿ, ಜಿಲ್ಲೆಯ ಒಟ್ಟು ಶೇಕಡಾ ಸಾಕ್ಷರತೆ ೧೯೫೧ರ ಜನಗಣತಿಯ ಕಾಲಕ್ಕೆ ೧೬.೧ (೨೪.೯ ಗಂಡಸರು; ೭.೯ ಹೆಂಗಸರು) ಆಗಿದ್ದಿತು. ಮುಂದಿನ ದಶಕಕ್ಕೆ ಅಂದರೆ, ೧೯೬೧ರ ವೇಳೆಗೆ ಈ ಅಂಕಿಯು ೨೧.೩ (೩೩.೪

ಗಂಡಸರು; ೧೧.೩ ಹೆಂಗಸರು)ಕ್ಕೆ ಹೆಚ್ಚಳವಾಯಿತು. ಕೆ.ಜಿ.ಎಫ್. ಪ್ರಾಂತದಲ್ಲಿ ೧೯೫೧ಕ್ಕೆ ಒಟ್ಟು ಶೇಕಡಾ ಸಾಕ್ಷತೆ ೩೩.೩ (೪೩.೪ ಗಂಡಸರು; ೧೭.೨ ಹೆಂಗಸರು) ಆಗಿದ್ದು, ಈ ಅಂಕಿ ೧೯೬೧ಕ್ಕೆ ೩೫.೮೯ (೪೭.೮೫ ಗಂಡಸರು; ೨೩.೭೪ ಹೆಂಗಸರು)ಕ್ಕೆ ಹೆಚ್ಚಳವಾಯಿತು. ಮುಂದಿನ ಕೋಷ್ಟಕ ಮೇಲ್ಕಂಡ ವಿಷಯದ ಬಗ್ಗೆ ಹೆಚ್ಚಿನ ಅಂಕಿ ಅಂಶಗಳನ್ನು ಒದಗಿಸುತ್ತದೆ.

**ಕೋಷ್ಟಕ ೧೩.೨**

| ವರ್ಷ | ಜನಸಂಖ್ಯೆ | ಅಕ್ಷರಸ್ಥರು | ಶೇಕಡಾ ಸಾಕ್ಷರತೆ | ಗಂಡಸರು | | ಹೆಂಗಸರು | |
|---|---|---|---|---|---|---|---|
| | | | | ಅಕ್ಷರಸ್ಥರು | ಶೇಕಡಾ ಸಾಕ್ಷರತೆ | ಅಕ್ಷರಸ್ಥರು | ಶೇಕಡಾ ಸಾಕ್ಷರತೆ |
| | | | | **ಕೋಲಾರ ಜಿಲ್ಲೆ** | | | |
| ೧೯೫೧ | ೧೧,೨೯,೮೭೫ | ೧,೮೬,೧೭೬ | ೧೬.೧ | ೧,೪೨,೪೮೯ | ೨೪.೯ | ೪೩,೭೦೭ | ೭.೯ |
| ೧೯೬೧ | ೧೨,೯೦,೧೪೪ | ೨,೭೪,೭೦೮ | ೨೧.೩ | ೨,೦೪,೮೦೮ | ೩೩.೪ | ೭೧,೯೦೦ | ೧೧.೩ |
| | | | | **ಕೆ. ಜಿ. ಎಫ್.** | | | |
| ೧೯೫೧ | ೧,೫೯,೦೮೪ | ೪೮,೨೫೨ | ೩೦.೩ | ೩೪,೫೦೫ | ೪೩.೪ | ೧೩,೭೪೭ | ೧೭.೨ |
| ೧೯೬೧ | ೧,೪೬,೮೧೧ | ೫೨,೬೯೫ | ೩೫.೮೯ | ೩೫,೪೧೩ | ೪೭.೮೫ | ೧೭,೨೮೨ | ೨೩.೭೪ |

ಆಧಾರ: ೧೯೬೮ರ ಕೋಲಾರ ಜಿಲ್ಲಾ ಗ್ಯಾಸೆಟಿಯರ್.

ಕೋಲಾರ ಜಿಲ್ಲೆಯ ವಿವಿಧ ಪಟ್ಟಣಗಳಲ್ಲಿ ೧೯೫೧ ಹಾಗೂ ೧೯೬೧ರಲ್ಲಿದ್ದಂತೆ ಸಾಕ್ಷರತಾ ವಿವರಗಳನ್ನು ಈ ಮುಂದೆ ನೀಡಲಾಗಿದೆ.

**ಕೋಷ್ಟಕ ೧೩.೩**

| ಕ್ರ. ಸಂ | ನಗರಗಳು | ೧೯೫೧ರ ಸಾಕ್ಷರತೆ | | | | ೧೯೬೧ರ ಸಾಕ್ಷರತೆ | | | |
|---|---|---|---|---|---|---|---|---|---|
| | | ಗಂಡಸರು | ಹೆಂಗಸರು | ಒಟ್ಟು | ಶೇಕಡಾ ಸಾಕ್ಷರತೆ | ಗಂಡಸರು | ಹೆಂಗಸರು | ಒಟ್ಟು | ಶೇಕಡಾ ಸಾಕ್ಷರತೆ |
| ೧ | ಕೆ.ಜಿ.ಎಫ್. ನಗರ | ೩೪,೫೦೫ | ೧೩,೭೪೭ | ೪೮,೨೫೨ | ೩೦.೩ | ೩೫,೪೧೩ | ೧೭,೨೮೨ | ೫೨,೬೯೫ | ೩೫.೮೯ |
| ೨ | ಕೋಲಾರ | ೬,೮೪೧ | ೩,೭೧೨ | ೧೦,೫೫೩ | ೩೮.೮ | ೯,೯೩೭ | ೬,೫೫೨ | ೧೬,೪೮೯ | ೫೦.೬೦ |
| ೩ | ಬಾಗೇಪಲ್ಲಿ | ೫೫೩ | ೨೬೬ | ೮೧೯ | ೨೮.೮ | ೧,೦೦೭ | ೫೫೫ | ೧,೫೬೨ | ೪೩.೫ |
| ೪ | ಬಂಗಾರಪೇಟೆ | ೨,೭೫೧ | ೧,೬೨೮ | ೪,೩೭೯ | ೪೨.೮ | ೩,೬೩೨ | ೨,೨೯೨ | ೫,೯೨೪ | ೫೨.೧೫ |
| ೫ | ಚಿಕ್ಕಬಳ್ಳಾಪುರ | ೫,೨೪೪ | ೨,೬೧೪ | ೭,೮೫೮ | ೩೮.೯ | ೬,೪೮೦ | ೩,೪೯೦ | ೯,೯೭೦ | ೪೩.೩೦ |
| ೬ | ಚಿಂತಾಮಣಿ | ೩,೫೬೯ | ೧,೮೧೮ | ೫,೩೮೭ | ೩೭.೪ | ೬,೦೧೨ | ೩,೧೫೦ | ೯,೧೬೨ | ೪೬.೬೪ |
| ೭ | ಗೌರಿಬಿದನೂರು | ೧,೫೨೪ | ೬೩೬ | ೨,೧೬೦ | ೩೧.೯ | ೨,೩೬೧ | ೧,೨೦೮ | ೩,೫೬೯ | ೪೧.೭೦ |
| ೮ | ಮಂಚೇನಹಳ್ಳಿ | ೬೪೧ | ೨೬೯ | ೯೧೦ | ೨೫.೭ | ೯೯೩ | ೪೪೮ | ೧,೪೪೧ | ೩೩.೧೫ |
| ೯ | ಗುಡಿಬಂಡೆ | ೭೪೪ | ೩೦೧ | ೧,೦೪೫ | ೨೮.೭ | ೧,೧೧೨ | ೫೬೪ | ೧,೬೭೬ | ೩೭.೪೩ |
| ೧೦ | ಮಾಲೂರು | ೧,೫೩೩ | ೭೧೮ | ೨,೨೫೧ | ೩೨.೫ | ೧,೯೬೬ | ೯೫೪ | ೨,೯೨೦ | ೩೮.೪೮ |
| ೧೧ | ಮುಳಬಾಗಿಲು | ೧,೯೦೨ | ೮೫೯ | ೨,೭೬೧ | ೩೦.೬ | ೨,೯೭೭ | ೧,೫೨೫ | ೪,೫೦೨ | ೩೭.೫೯ |
| ೧೨ | ಶಿಡ್ಲಘಟ್ಟ | ೧,೯೭೪ | ೯೫೭ | ೨,೯೩೧ | ೩೧.೮ | ೨,೯೪೭ | ೧,೪೨೨ | ೪,೩೬೯ | ೩೪.೭೭ |
| ೧೩ | ಶ್ರೀನಿವಾಸಪುರ | ೧,೩೯೫ | ೮೫೦ | ೨,೨೪೫ | ೩೭.೬ | ೧,೮೦೩ | ೧,೦೫೫ | ೨,೮೫೮ | ೪೧.೯೬ |
| | **ಒಟ್ಟು** | **೬೩,೧೯೬** | **೨೮,೩೭೫** | **೯೧,೫೭೧** | **೩೧.೨೬** | **೭೬,೬೪೦** | **೪೦,೪೫೭** | **೧,೧೭,೦೯೭** | **೩೯.೯೩** |

ಆಧಾರ: ೧೯೬೮ರ ಕೋಲಾರ ಜಿಲ್ಲಾ ಗ್ಯಾಸೆಟಿಯರ್.

**ಶೈಕ್ಷಣಿಕ ಮಟ್ಟ:** ೧೯೬೧ರ ಜನಗಣತಿಯಂತೆ ಜಿಲ್ಲೆಯಲ್ಲಿ ಒಟ್ಟು ೧,೧೭,೦೯೭ ಅಕ್ಷರಸ್ಥರಿದ್ದು, ಅವರಲ್ಲಿ ೭೬,೬೪೦ ಗಂಡಸರು ಹಾಗೂ ೪೦,೪೫೭ ಹೆಂಗಸರು ಇದ್ದರು. ಯಾವುದೇ ಪರೀಕ್ಷೆ ಪಾಸುಮಾಡದೆ ಇದ್ದವರನ್ನು ಹಾಗೂ ಪ್ರಾಥಮಿಕ ಅಥವಾ ಜೂನಿಯರ್ ಬೇಸಿಕ್ ಪರೀಕ್ಷೆಗಳಲ್ಲಿ ನಪಾಸಾದವರನ್ನು ವಿದ್ಯಾಮಟ್ಟ ಹೊಂದದ 'ಅಕ್ಷರಸ್ಥರು'ಎಂದು ಪರಿಗಣಿಸಲಾಯಿತು. ವಿವಿಧ ಶೈಕ್ಷಣಿಕ ಮಟ್ಟಗಳನ್ನು ತಲುಪಿದ ಅಕ್ಷರಸ್ಥರ ವಿವರಗಳನ್ನು ಈ ಮುಂದೆ ನೀಡಲಾಗಿದೆ.

**ಕೋಷ್ಟಕ ೧೩.೪**

| ವಿದ್ಯಾಮಟ್ಟ | ಒಟ್ಟು ಅಕ್ಷರಸ್ಥರು | ಗಂಡಸರು | ಹೆಂಗಸರು |
|---|---|---|---|
| ವಿದ್ಯಾಮಟ್ಟ ಹೊಂದದ ಅಕ್ಷರಸ್ಥರು | ೮೫,೩೮೪ | ೫೩,೫೭೬ | ೩೧,೮೦೮ |
| ಪ್ರಾಥಮಿಕ/ ಜ್ಯೂನಿಯರ್ ಬೇಸಿಕ್ | ೧೭,೮೬೭ | ೧೧,೫೪೦ | ೬,೩೨೭ |
| ಮೆಟ್ರಿಕ್ಯುಲೇಷನ್/ ಹೈಯರ್ ಸೆಕೆಂಡರಿ | ೧೨,೨೮೯ | ೧೦,೦೯೨ | ೨,೧೯೭ |
| ಪದವಿಗೆ ಸಮಾನವಲ್ಲದ ತಾಂತ್ರಿಕ ಡಿಪ್ಲೋಮಾ | ೩೧೦ | ೨೯೮ | ೧೨ |
| ಪದವಿಗೆ ಸಮಾನವಲ್ಲದ ತಾಂತ್ರಿಕ ಡಿಪ್ಲೊಮಾ | ೧೨ | ೧೧ | ೦೧ |
| ಸ್ನಾತಕೋತ್ತರ/ ವಿ.ವಿ. ಪದವಿ (ತಾಂತ್ರಿಕ ಪದವಿ ಹೊರತಾಗಿ) | ೮೯೭ | ೮೨೭ | ೭೦ |
| ಪದವಿಗೆ/ ಸ್ನಾತಕೋತ್ತರ ಪದವಿಗೆ ಸಮಾನವಾದ/ ತಾಂತ್ರಿಕ ಪದವಿ/ ಡಿಪ್ಲೊಮಾ | | | |
| ಇಂಜನೀಯರಿಂಗ್ | ೧೬ | ೧೬ | – |
| ವೈದ್ಯಕೀಯ | ೬೧ | ೪೭ | ೧೪ |
| ಕೃಷಿ | ೦೮ | ೦೮ | – |
| ಪಶುಸಂಗೋಪನೆ/ಹೈನುಗಾರಿಕೆ | ೦೪ | ೦೪ | – |
| ಟೆಕ್ನಾಲಜಿ | ೦೧ | ೦೧ | – |
| ಬೋಧಕ ವರ್ಗ | ೧೫೫ | ೧೨೭ | ೨೮ |
| ಇತರೆ | ೦೩ | ೦೩ | – |

ಆಧಾರ: ೧೯೬೮ರ ಕೋಲಾರ ಜಿಲ್ಲಾ ಗೆಸಿಟಿಯರ್

**೧೯೬೧ ರಿಂದ ೨೦೦೧ರ ವರೆಗೆ ಐದು ದಶಕಗಳ ಸಾಕ್ಷರತೆಯ ಶೇಕಡಾವಾರು ವಿವರ:–**

| ಕ್ರ.ಸಂ | ವರ್ಷ | ೧೯೬೧ | ೧೯೭೧ | ೧೯೮೧ | ೧೯೯೧ | ೨೦೦೧ |
|---|---|---|---|---|---|---|
| ೧ | ಒಟ್ಟು ಸಾಕ್ಷರತೆ | ೨೧.೨೯ | ೨೭.೦೬ | ೩೩.೫೭ | ೫೦.೪೫ | ೬೩.೧೪ |
| ೨. | ಪುರುಷರ | ೩೦.೯೩ | ೩೬.೫೭ | ೪೪.೨೧ | ೬೨.೬೯ | ೭೩.೧೪ |
| ೩. | ಮಹಿಳೆಯರು | ೧೧.೩೩ | ೧೭.೧೫ | ೨೨.೬೧ | ೩೭.೭೫ | ೫೨.೮೧ |

ಆಧಾರ: ಸೋಷಿಯೋ–ಎಕನಾಮಿಕ್ ಇಂಡಿಕೇಟರ್ಸ್–೨೦೦೧ (ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಬೆಂಗಳೂರು).

**ಪೂರ್ವ ಪ್ರಾಥಮಿಕ ಶಿಕ್ಷಣ:** ಪೂರ್ವ ಪ್ರಾಥಮಿಕ ಅಥವಾ ನರ್ಸರಿ ಶಿಕ್ಷಣ ಸಾಮಾನ್ಯವಾಗಿ ಖಾಸಗಿ ಸಂಸ್ಥೆಗಳಿಂದ ನಿರ್ವಹಿಸಲ್ಪಡುತ್ತದೆ. ೧೯೬೦ರ ದಶಕದಿಂದೀಚೆಗೆ ಮೈಸೂರು ರಾಜ್ಯ ಸಮಾಜ ಕಲ್ಯಾಣ ಸಲಹಾ ಮಂಡಳಿಯಡಿ ಹಲವು ಬಾಲವಾಡಿಗಳು ಪ್ರಾರಂಭಗೊಂಡಿರುತ್ತವೆ. ಪೂರ್ವಪ್ರಾಥಮಿಕ ಹಂತದ ಶಿಕ್ಷಣವನ್ನು ಜನಪ್ರಿಯಗೊಳಿಸುವ ಉದ್ದೇಶದಿಂದ ಸರಕಾರ ಇಂತಹ ಸಂಸ್ಥೆಗಳಿಗೆ ಅನುದಾನ ನೀಡುವ ಬಗ್ಗೆ ತನ್ನ ನಿಲುವನ್ನು ಬದಲಿಸಿ, ಗ್ರಾಮೀಣ ಪ್ರದೇಶಗಳಲ್ಲಿ ಖಾಸಗಿಯವರಿಂದ

ಪ್ರಾರಂಭಿಸಲ್ಪಡುವ ಪೂರ್ವ ಪ್ರಾಥಮಿಕ ಶಾಲೆಗಳಿಗೆ ಶೇಕಡಾ ೭೦ರಷ್ಟು ಹಾಗೂ ಪಟ್ಟಣ ಪ್ರದೇಶಗಳಿಗೆ ಶೇಕಡಾ ೫೦ರಷ್ಟು ಅನುದಾನ ನೀಡಿತು. ಈ ಶಾಲೆಗಳ ಮುಖ್ಯ ಉದ್ದೇಶ ಮೂರು ರಿಂದ ಐದು ವರ್ಷಗಳ ಮಕ್ಕಳಲ್ಲಿ ಶಾಲೆಗೆ ಹೋಗುವ ಅಭ್ಯಾಸ ಬೆಳೆಸಿ, ಅವರನ್ನು ಶೈಕ್ಷಣಿಕ ಪರಿಸರಕ್ಕೆ ಪರಿಚಯಿಸುವುದೇ ಆಗಿರುತ್ತದೆ. ಸರಕಾರದ ಅನುದಾನ ಪಡೆಯುವ ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ಮೂರನೇ ಒಂದು ಭಾಗ ಬಡಮಕ್ಕಳಿಗೆ ಪ್ರವೇಶಾವಕಾಶ ನೀಡಬೇಕೆಂಬುದು ಕಡ್ಡಾಯವಾಗಿರುತ್ತದೆ.

ಜಿಲ್ಲೆಯಲ್ಲಿ ೧೯೫೬ರ ವೇಳೆಗೆ ಸರಕಾರದಿಂದ ಅಂಗೀಕೃತಗೊಂಡ ಎರಡು ನರ್ಸರಿ ಶಾಲೆಗಳಿದ್ದು, ಇವುಗಳ ಸಂಖ್ಯೆ ೧೯೬೧ರಲ್ಲಿ ಎಂಟಕ್ಕೆ ಹೆಚ್ಚಿತು. ಇವುಗಳಲ್ಲಿ ಎರಡು ಕೋಲಾರದಲ್ಲಿ, ಒಂದು ಆ್ಯಂಡರ್‌ಸನ್‌ಪೇಟೆ (ಕೆ.ಜಿ.ಎಫ್)ನಲ್ಲಿ, ತಲಾ ಒಂದೊಂದು ಮಾಲೂರು, ಚಿಕ್ಕಬಳ್ಳಾಪುರ, ಚಿಂತಾಮಣಿ, ಶಿಡ್ಲಘಟ್ಟ ಹಾಗೂ ಮುಳಬಾಗಿಲುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ೧೯೬೭ರ ವೇಳೆಗೆ ಕೆಜಿಎಫ್ ಪ್ರಾಂತದಲ್ಲಿ ನಾಲ್ಕು, ಚಿಕ್ಕಬಳ್ಳಾಪುರದಲ್ಲಿ ಮೂರು, ಗೌರಿಬಿದನೂರಿನಲ್ಲಿ ಎರಡು, ಶ್ರೀನಿವಾಸಪುರ, ಕೋಲಾರ, ಚಿಂತಾಮಣಿ ಹಾಗೂ ಬಂಗಾರುಪೇಟೆಗಳಲ್ಲಿ ತಲಾ ಒಂದೊಂದು, ಹೀಗೆ ಒಟ್ಟು ೧೩ ಹೊಸ ಶಾಲೆಗಳು ಪ್ರಾರಂಭಗೊಂಡವು. ೧೯೬೮ರ ವೇಳೆಗೆ ಸರ್ಕಾರದಿಂದ ಅಂಗೀಕೃತವಾದ ಇಂತಹ ಶಾಲೆಗಳ ಸಂಖ್ಯೆ ಒಟ್ಟು ೨೨ ಆಗಿದ್ದಿತು. ೧೯೬೭–೬೮ರ ಶೈಕ್ಷಣಿಕ ವರ್ಷದಲ್ಲಿ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪೂರ್ವ ಪ್ರಾಥಮಿಕ ಶಾಲೆಗಳ ವಿವರಗಳನ್ನು ಈ ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೧೩.೫**

| ಕ್ರ. | ತಾಲೂಕು | ಶಾಲೆಗಳ | ಅಧ್ಯಾಪಕರ ಸಂಖ್ಯೆ | | | ಮಕ್ಕಳ ಸಂಖ್ಯೆ | | |
|---|---|---|---|---|---|---|---|---|
| ಸಂ | | ಸಂಖ್ಯೆ | ಗಂಡಸರು | ಹೆಂಗಸರು | ಒಟ್ಟು | ಗಂಡು ಮಕ್ಕಳು | ಹೆಣ್ಣು ಮಕ್ಕಳು | ಒಟ್ಟು |
| ೧. | ಕೋಲಾರ | ೩ | – | ೫ | ೫ | ೯೩ | ೮೪ | ೧೭೭ |
| ೨. | ಮಾಲೂರು | ೧ | – | ೧ | ೧ | ೩೧ | ೧೬ | ೪೭ |
| ೩. | ಬಂಗಾರುಪೇಟೆ | ೬ | – | ೧೪ | ೧೪ | ೧೯೫ | ೧೫೮ | ೩೫೩ |
| ೪. | ಮುಳಬಾಗಿಲು | ೨ | ೧ | ೨ | ೩ | ೧೦೬ | ೧೦೬ | ೨೧೨ |
| ೫. | ಶ್ರೀನಿವಾಸಪುರ | ೧ | – | ೧ | ೧ | ೨೩ | ೨೨ | ೪೫ |
| ೬. | ಚಿಂತಾಮಣಿ | ೨ | – | ೪ | ೪ | ೬೦ | ೫೯ | ೧೧೯ |
| ೭. | ಶಿಡ್ಲಘಟ್ಟ | ೧ | – | ೧ | ೧ | ೨೨ | ೨೧ | ೪೩ |
| ೮. | ಚಿಕ್ಕಬಳ್ಳಾಪುರ | ೪ | – | ೬ | ೬ | ೭೭ | ೯೧ | ೧೬೮ |
| ೯. | ಗೌರಿಬಿದನೂರು | ೨ | – | ೨ | ೨ | ೫೬ | ೫೦ | ೧೦೬ |
| ೧೦. | ಬಾಗೇಪಲ್ಲಿ | – | – | – | – | – | – | – |
| ೧೧. | ಗುಡಿಬಂಡೆ | – | – | – | – | – | – | – |
| | ಒಟ್ಟು | ೨೨ | ೧ | ೩೬ | ೩೭ | ೬೬೩ | ೬೦೭ | ೧,೨೭೦ |

ಆಧಾರ: ೧೯೬೮ರ ಕೋಲಾರ ಜಿಲ್ಲಾ ಗ್ಯಾಸೆಟಿಯರ್.

ಈ ಹಂತದ ಶಿಕ್ಷಣವು ಪ್ರಸ್ತುತ ಮಹತ್ತರ ಬದಲಾವಣೆಗಳನ್ನು ಹೊಂದಿ, ಇನ್ನೂ ಹೆಚ್ಚಿನ ಜನಪ್ರಿಯತೆಯನ್ನೂ, ಪ್ರಾಮುಖ್ಯತೆಯನ್ನೂ ಪಡೆದಿದೆ. ಸರಕಾರ ನಡೆಸುವ ಬಾಲವಾಡಿಗಳನ್ನು ಹೊರತುಪಡಿಸಿದರೆ, ಖಾಸಗಿ ಸಂಸ್ಥೆಗಳಿಂದ ನಡೆಸಲ್ಪಡುವ ಪೂರ್ವ ಪ್ರಾಥಮಿಕ ಶಾಲೆಗಳು ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಏಕರೂಪದಲ್ಲಿ ಪ್ರಾರಂಭಗೊಂಡಿವೆ. ಈ ಹಂತದ ಶಾಲಾ ಪದ್ಧತಿಗೆ ಪ್ರಸ್ತುತ ಒಂದು ವೈಜ್ಞಾನಿಕ ಚೌಕಟ್ಟು, ನೆಲೆಗಳು ಲಭ್ಯವಾಗಿದ್ದು, ತಮ್ಮ ಮಕ್ಕಳನ್ನು ಜನಪ್ರಿಯ ಹಾಗೂ ಉತ್ತಮ ಶಾಲೆಗಳಲ್ಲಿ ದಾಖಲು ಮಾಡಲು ತಾಯ್ತಂದೆಗಳು ಎಲ್ಲಾ ರೀತಿಯ ತೊಂದರೆ ಅನುಭವಿಸಲು ಸಿದ್ಧರಿದ್ದಾರೆ. ಒಂದನೇ ತರಗತಿಗೆ

ಸೇರುವ ಮುನ್ನ ಮೂರು ವರ್ಷ ೧೦ ತಿಂಗಳು ತುಂಬಿದ ಮಕ್ಕಳನ್ನು ಲೋಯರ್ ಕಿಂಡರ್ ಗಾರ್ಟನ್ (ಎಲ್.ಕೆ.ಜಿ) ಹಾಗೂ ಮುಂದಿನ ವರ್ಷ ಅಪ್ಪರ್ ಕಿಂಡರ್ ಗಾರ್ಟನ್ (ಯು.ಕೆ.ಜಿ)ಗಳಿಗೆ ಸೇರಿಸಿಕೊಂಡು ಇವುಗಳ ನಂತರ ಐದು ವರ್ಷ ೧೦ ತಿಂಗಳು ತುಂಬಿದ ಮಕ್ಕಳನ್ನು ಒಂದನೇ ತರಗತಿಗೆ ಸೇರಿಸಿಕೊಳ್ಳಲಾಗುವುದು. ತಮ್ಮ ಮಕ್ಕಳು ಎಲ್.ಕೆ.ಜಿ.ಗೆ ಸೇರಲು ವಯೋಮಿತಿ ಹೊಂದಿರದಿದ್ದಲ್ಲಿ, ನೌಕರಿ ಮಾಡುವ ತಾಯ್ತಂದೆಗಳು ಅವರನ್ನು ಪ್ರೀ–ನರ್ಸರಿ ಅಥವಾ 'ಬೇಬಿ ಸಿಟ್ಟಿಂಗ್'ಗಳಿಗೆ ಸೇರಿಸುವ ಪರಿಪಾಠವಿದೆ. ಒಂದು ಸಮಯ ಯಾವುದಾದರೂ ಮಗು ಯುಕೆಜಿ ಪಾಸು ಮಾಡಿ, ಐದು ವರ್ಷ ೧೦ ತಿಂಗಳು ಪೂರೈಸದಿದ್ದಲ್ಲಿ ಅಂತಹ ಮಗುವನ್ನು ಒಂದು ವರ್ಷದ 'ಪ್ರಿಪ್ರೆಟರಿ' ತರಗತಿಗೆ ಸೇರಿಸಲಾಗುವುದು.

ಪ್ರಸ್ತುತ ಈ ಹಂತದ ಶಿಕ್ಷಣ ಸರಕಾರದಿಂದ ನೇರವಾಗಿ ನೀಡಲ್ಪಡದಿದ್ದರೂ, ಹಳೆಯ ಅನುದಾನಿತ ಪೂರ್ವ ಪ್ರಾಥಮಿಕ ಶಾಲೆಗಳಿಗೆ ಅನುದಾನವು ಮುಂದುವರೆದಿದೆ. ಪೂರ್ವ ಪ್ರಾಥಮಿಕ ಶಾಲೆಗಳಿಗಾಗಿಯೇ ನೇಮಕಗೊಂಡಿದ್ದ 'ಶಾಲಾ ಮಾತೆ'ಯರ (School Mothers) ವೇತನ ಶ್ರೇಣಿಯು ಪ್ರಾಥಮಿಕ ಶಿಕ್ಷಕರ ಶ್ರೇಣಿಗೆ ಸಮಾನವಾದ ಕಾರಣ, ಪೂರ್ವ ಪ್ರಾಥಮಿಕ ಶಿಕ್ಷಣವು ಪ್ರಾಥಮಿಕ ಶಿಕ್ಷಣದೊಂದಿಗೆ ವಿಲೀನಗೊಂಡಿರುತ್ತದೆ.

### ಪ್ರಾಥಮಿಕ ಶಿಕ್ಷಣ

ಮೈಸೂರು ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣವು ೧೯೩೦ ರಿಂದ ೧೯೪೧ರ ವರೆಗೆ ಸ್ಥಳೀಯ ಶಿಕ್ಷಣ ಪ್ರಾಧಿಕಾರದ ಆಡಳಿತಕ್ಕೆ ಒಳಪಟ್ಟಿದ್ದಿತು. ೧೯೪೧ ರಿಂದ ಇದು ಸರಕಾರದ ನೇರ ಆಡಳಿತಕ್ಕೆ ಒಳಪಟ್ಟಿತು. ಮೇಲ್ಕಂಡ ಪ್ರಾಧಿಕಾರದ ಆಡಳಿತದಲ್ಲಿ ಈ ಹಂತದ ಶಿಕ್ಷಣ ಕ್ರೋಢೀಕರಿಸಲ್ಪಟ್ಟು, ಸರಕಾರದ ಆಡಳಿತದಲ್ಲಿ ವಿಸ್ತರಣಗೊಂಡಿತು. ಪ್ರಾಥಮಿಕ ಶಿಕ್ಷಣದ ಎಲ್ಲಾ ಶಾಲೆಗಳಲ್ಲಿ ಭಾಷಾ ಮಾಧ್ಯಮ ಮಾತೃಭಾಷೆಯೇ ಆಗಿದ್ದಿತು. ೧೯೩೦ರ ಪ್ರಾಥಮಿಕ ಶಿಕ್ಷಣ ಕಾಯ್ದೆಯಂತೆ ಸರಕಾರಿ ಹಾಗೂ ಅನುದಾನಿತ ಎಲ್ಲಾ ಪ್ರಾಥಮಿಕ ಶಾಲೆಗಳು ಸ್ಥಳೀಯ ಶಿಕ್ಷಣ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಗೆ ಒಳಪಟ್ಟವು. ಈ ಸ್ಥಳೀಯ ಪ್ರಾಧಿಕಾರಗಳು ತಂತಮ್ಮ ವ್ಯಾಪ್ತಿಯ ಎಲ್ಲಾ ಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣದ ಸರ್ವತೋಮುಖ ಅಭಿವೃದ್ಧಿಗೆ ಆದ್ಯತೆ ನೀಡಬೇಕಿದ್ದಿತು. ಆದರೆ ೧೯೩೧–೩೨ರ ಆರ್ಥಿಕ ಮುಗ್ಗಟ್ಟಿನಿಂದ ಈ ಹಂತದಲ್ಲಿ ಶೈಕ್ಷಣಿಕ ಅಭಿವೃದ್ಧಿಯು ನಿರ್ಧಾರಿತ ಗುರಿ ಮುಟ್ಟಲಿಲ್ಲ. ಹಾಗಾಗಿ ಸರಕಾರ ಶೈಕ್ಷಣಿಕ ಪ್ರಗತಿಯನ್ನು ತ್ವರಿತಗೊಳಿಸುವ ಉದ್ದೇಶದಿಂದ ೧೯೩೭ರಲ್ಲಿ ಸಮಿತಿಯೊಂದನ್ನು ರಚಿಸಿತು. ಈ ಸಮಿತಿಯು ಒಂದು ಅಧ್ಯಯನ ಕೈಗೊಂಡು, ಪ್ರಾಥಮಿಕ ಶಿಕ್ಷಣದ ಜವಾಬ್ದಾರಿಯನ್ನು ಸರಕಾರವೇ ವಹಿಸಿಕೊಂಡು, ಸಾರ್ವಜನಿಕ ಶಿಕ್ಷಣ ಇಲಾಖೆಯ ಮೂಲಕ ನಿರ್ವಹಿಸಬೇಕೆಂದು ಶಿಫಾರಸ್ಸು ಮಾಡಿತು. ಇದರ ಅನುಷ್ಠಾನಕ್ಕಾಗಿ ಪ್ರಾಥಮಿಕ ಶಿಕ್ಷಣ ಮಸೂದೆ ೧೯೪೧ನ್ನು ಸರಕಾರ ಪುನಃ ಜಾರಿಮಾಡಿ, ಪ್ರಾಥಮಿಕ ಶಿಕ್ಷಣವನ್ನು ಸಂಪೂರ್ಣವಾಗಿ ತನ್ನ ಹತೋಟಿಗೆ ತೆಗೆದುಕೊಂಡಿತು. ಇದರಿಂದಾಗಿ ಉಂಟಾದ ತಕ್ಷಣದ ಪ್ರಮುಖ ಪರಿಣಾಮವೆಂದರೆ, ಶಾಲೆಗಳ ಸಂಖ್ಯೆ ಹಾಗೂ ಅವುಗಳ ಹಾಜರಾತಿಯಲ್ಲಿ ಗಣನೀಯ ಹೆಚ್ಚಳ. ಆದರೆ ಈ ರೀತಿ ಶಾಲೆಗೆ ಸೇರಿದ ಮಕ್ಕಳೆಲ್ಲ ನಾಲ್ಕೂ ವರ್ಷಗಳು ಶಾಲೆಗಳಲ್ಲಿಯೇ ಉಳಿಯದೆ, ಎರಡು ಅಥವಾ ಮೂರನೇ ತರಗತಿಯ ನಂತರ ಶಾಲೆಗಳನ್ನು ತ್ಯಜಿಸಿದರು. ಇದರಿಂದ ಹೆಚ್ಚಿನ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳಿಲ್ಲದೆ ಅವು ಸೊರಗಿದವು. ಪ್ರಾಥಮಿಕ ಹಂತದ ನಾಲ್ಕೂ ವರ್ಷ ಮಕ್ಕಳನ್ನು ಶಾಲೆಗಳಲ್ಲಿ ಹಿಡಿದಿಟ್ಟುಕೊಳ್ಳುವ ಯಾವುದಾದರೂ ಕಡ್ಡಾಯ ವ್ಯವಸ್ಥೆಯನ್ನು ಜಾರಿ ಮಾಡುವ ದಿಶೆಯಲ್ಲಿ ಸರಕಾರ ಯೋಜನೆ ರೂಪಿಸತೊಡಗಿತು. ಇಂತಹ ಯೋಜನೆಗೆ ತಗಲುವ ವೆಚ್ಚದ ದೃಷ್ಟಿಯಿಂದ ಕಡ್ಡಾಯ ವ್ಯವಸ್ಥೆಯನ್ನು ಹಂತಗಳಲ್ಲಿ ಮಾತ್ರ ಜಾರಿಮಾಡಬೇಕಿದ್ದಿತು. ಇದರ ಹೊಣೆ ತಾಯ್ತಂದೆಗಳ ಮೇಲೂ ಇರುವಂತೆ ಮಾಡಲು, ಸರಕಾರ ೧೯೪೧ರ ಪ್ರಾಥಮಿಕ ಶಿಕ್ಷಣ ಮಸೂದೆಯನ್ನು ತಿದ್ದುಪಡಿ ಮಾಡಿತು.

ತಮ್ಮ ಮಕ್ಕಳನ್ನು ಪ್ರಾಥಮಿಕ ಶಾಲೆಗೆ ಸೇರಿಸಿದ ತಾಯ್ತಂದೆಗಳು/ಪೋಷಕರು, ಆ ಹಂತದ ಶಿಕ್ಷಣ ಪೂರ್ಣಗೊಳ್ಳುವವರೆಗೆ ಅಥವಾ ಮಕ್ಕಳು ೧೨ ವರ್ಷ ತಲುಪುವವರೆಗೆ ಕಡ್ಡಾಯವಾಗಿ ಶಾಲೆಗೆ ಪ್ರತಿನಿತ್ಯ ಹೋಗುವಂತೆ ನೋಡಿಕೊಳ್ಳುವ ಜವಾಬ್ದಾರಿಯಾಗಿ ವಹಿಸಿಕೊಳ್ಳಬೇಕಿದ್ದಿತು. ಸ್ವಇಚ್ಛೆಯಿಂದ ಬಹಳ ಮಂದಿ ಮಕ್ಕಳು ಶಾಲೆಗಳಿಗೆ ಸೇರಿರಲಿಲ್ಲವಾಗಿ ಈ ವ್ಯವಸ್ಥೆ ಬಹಳ ಕಾಲ

ಮುಂದುವರೆಯಲಿಲ್ಲ. ತತ್ಪರಿಣಾಮವಾಗಿ ಇದರ ಪರ್ಯಾಯ ವ್ಯವಸ್ಥೆಯಾಗಿ 'ಕಡ್ಡಾಯ ಪ್ರಾಥಮಿಕ ಶಿಕ್ಷಣ' ರಾಜ್ಯದಾದ್ಯಂತ ಜಾರಿಯಾಗಿ, ಕೋಲಾರ ಜಿಲ್ಲೆಯ ಆಯ್ದ ಪ್ರದೇಶಗಳಲ್ಲಿ ೧೯೪೭–೪೮ರಲ್ಲಿ ಜಾರಿಯಾಯಿತು.

ಸರಕಾರ ಪ್ರಾಥಮಿಕ ಶಿಕ್ಷಣವನ್ನು ವಹಿಸಿಕೊಂಡ ನಂತರ ಹಲವಾರು ಮಾರ್ಪಾಡುಗಳಿಗೆ ಒಳಪಟ್ಟಿತು. ಪ್ರಾಥಮಿಕ ಶಾಲೆಗಳಲ್ಲಿ ಕಿರಿಯ ಮತ್ತು ಹಿರಿಯ ಎಂಬ ಎರಡು ಹಂತಗಳಿದ್ದು, ನಾಲ್ಕು ವರ್ಷಗಳ ಮೊದಲನೆಯ ಹಂತ ಮುಗಿಸಿದ ಮಕ್ಕಳು ಹಿರಿಯ ಪ್ರಾಥಮಿಕ ಅಥವಾ ಮಾಧ್ಯಮಿಕ ಶಾಲೆಗಳಿಗೆ ಸೇರಬಹುದಾಗಿದ್ದಿತು. ಹಿರಿಯ ಪ್ರಾಥಮಿಕ ಹಂತದ ಕೊನೆಯ ಪಬ್ಲಿಕ್ ಪರೀಕ್ಷೆ ಪಾಸುಮಾಡಿದ ಮಕ್ಕಳು ಎರಡು ವರ್ಷದ 'ಟೀಚರ್ಸ್ ಟ್ರೈನಿಂಗ್'ಗೆ ಸೇರಲು ಅರ್ಹತೆ ಪಡೆಯುತ್ತಿದ್ದರು. ಇದನ್ನು ಪಾಸು ಮಾಡಿ ಪ್ರೈಮರಿ ಶಾಲೆಗಳಲ್ಲಿ ಶಿಕ್ಷಕರಾಗಲು ಅರ್ಹತೆ ಪಡೆಯುತ್ತಿದ್ದರು.

ಇಂತಹ ಹಿರಿಯ ಪ್ರಾಥಮಿಕ ಶಾಲೆಗಳನ್ನೇ ಮುಂದೆ ಐದು, ಆರು ಹಾಗೂ ಏಳನೇ ತರಗತಿಗಳನ್ನು ಹೊಂದಿದ 'ನ್ಯೂ ಟೈಪ್ ಮಿಡ್ಲ್‌ಸ್ಕೂಲ್' ಗಳೆಂದು ಕರೆಯಲಾಯಿತು. ಇಂತಹ ಶಾಲೆಗಳಲ್ಲಿ ಇಂಗ್ಲಿಷ್ ಸಹ ಕಲಿಕಾ ವಿಷಯವಾಗಿತ್ತು. ಹಳೆ ಮೈಸೂರು ಪ್ರಾಂತದ ಪಠ್ಯಕ್ರಮದಲ್ಲಿ ಭಾಷೆ, ಗಣಿತ, ಇತಿಹಾಸ, ಭೂಗೋಳಗಳೇ ಅಲ್ಲದೆ, ಚಿತ್ರಕಲೆ, ಸಂಗೀತ, ಪ್ರಕೃತಿ ಅಧ್ಯಯನ ಮತ್ತು ತೋಟಗಾರಿಕೆ ಮುಂತಾದ ವಿಷಯಗಳನ್ನು ಬೋಧಿಸಲಾಗುತ್ತಿತ್ತು.

**ನಂತರದ ಬದಲಾವಣೆಗಳು:** ಪ್ರಾಥಮಿಕ ಶಿಕ್ಷಣದ ಅರ್ಥವ್ಯಾಪ್ತಿ ೧೯೫೫–೫೬ರ ವೇಳೆಗೆ ಮಾರ್ಪಾಡುಗೊಂಡಿತು. ಮೊದಲಿಗೆ ನಾಲ್ಕು ವರ್ಷಗಳ ಪ್ರಾಥಮಿಕ ಶಿಕ್ಷಣದ ನಂತರ 'ಲೋಯರ್ ಸೆಕೆಂಡರಿ' ಎಂಬ ನಾಲ್ಕು ವರ್ಷಗಳ ಮಾಧ್ಯಮಿಕ ಶಿಕ್ಷಣ(ಮಿಡ್ಲ್ ಸ್ಕೂಲ್)ವಿದ್ದಿತು. ೧೯೫೬ರಲ್ಲಿ ಇದು ಪ್ರಾಥಮಿಕ ಹಾಗೂ ಮಾಧ್ಯಮಿಕ ತರಗತಿಗಳನ್ನೊಳಗೊಂಡ ಎಂಟು ವರ್ಷಗಳ ಸಮಗ್ರ ಶಾಲಾ ಶಿಕ್ಷಣವಾಯಿತು. ಆದರೆ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳು ಪ್ರತ್ಯೇಕವಾಗಿ ಕಾರ್ಯನಿರ್ವಹಿಸುತ್ತಿದ್ದವು. ಈ ಎರಡೂ ಹಂತಗಳಲ್ಲಿ ಪಬ್ಲಿಕ್ ಪರೀಕ್ಷೆ ಇರಲಿಲ್ಲ. ಎಳೆಯರ ಮನಸ್ಸುಗಳಿಗೆ ಹೊರೆಯಾಗಬಾರದೆಂಬ ಉದ್ದೇಶದಿಂದ ಸರಕಾರ ಲೋಯರ್ ಸೆಕೆಂಡರಿ ಪಬ್ಲಿಕ್ ಪರೀಕ್ಷೆಯನ್ನು ರದ್ದುಗೊಳಿಸಿತು.

**ನೂತನ ಪದ್ಧತಿ:** ನವ ಮೈಸೂರು ರಾಜ್ಯ ೧೯೫೬ರಲ್ಲಿ ರೂಪುಗೊಂಡಾಗ ಶೈಕ್ಷಣಿಕ ಪದ್ಧತಿಯು ವಿವಿಧ ಪ್ರಾಂತಗಳಲ್ಲಿ ವಿವಿಧ ರೀತಿಗಳಲ್ಲಿ ನಡೆಯುತ್ತಿತ್ತು. ಇದಕ್ಕಾಗಿ ಸರಕಾರ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯಲ್ಲಿ ಏಕರೂಪತೆ ತರುವ ಉದ್ದೇಶದಿಂದ ಒಂದು ಸಮಗ್ರ ಶಿಕ್ಷಣ ಸಲಹಾ ಸಮಿತಿಯನ್ನು ರಚಿಸಿತು. ಈ ಸಮಿತಿಯ ಅಧ್ಯಯನ ಪೂರ್ವಕ ಶಿಫಾರಸ್ಸಿನಂತೆ ಇಡೀ ರಾಜ್ಯದ ಶಾಲಾ ಪದ್ಧತಿಯಲ್ಲಿ ನೂತನ ಏಕರೂಪ ವ್ಯವಸ್ಥೆಯನ್ನು ಜಾರಿಗೊಳಿಸಿತು. ಇದರಂತೆ ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತಗಳನ್ನು ಒಂದುಗೂಡಿಸಿ, ಏಳು ವರ್ಷಗಳ ಪ್ರಾಥಮಿಕ ಹಾಗೂ ತದನಂತರ ನಾಲ್ಕು ವರ್ಷಗಳ ಪ್ರೌಢ ಶಿಕ್ಷಣ (೧೧ನೇ ತರಗತಿ ಸೇರಿ)ವನ್ನು ಜಾರಿಮಾಡಿತು. ಸರಕಾರ ಮತ್ತು ಸ್ಥಳೀಯ ಸಂಸ್ಥೆಗಳು ನಡೆಸುವ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣವನ್ನು ಉಚಿತಗೊಳಿಸಲಾಯಿತು. ೧೯೬೬–೬೭ ರಿಂದ ಹತ್ತನೇ ತರಗತಿಯವರೆಗೂ ಇದೇ ನೀತಿ ಅನುಸರಿಸಲಾಯಿತು.

### ಜಿಲ್ಲೆಯಲ್ಲಿ ಪ್ರಾಥಮಿಕ ಶಿಕ್ಷಣದ ಪ್ರಗತಿ:

ಪ್ರಾಥಮಿಕ ಶಿಕ್ಷಣ ಜಿಲ್ಲೆಯಾದ್ಯಂತ ತ್ವರಿತಗತಿಯಲ್ಲಿ ಪ್ರಗತಿ ಹೊಂದಿರುವುದನ್ನು ಮುಂದಿನ ಮಾಹಿತಿಯಿಂದ ಗಮನಿಸಬಹುದಾಗಿದೆ. ೧೯೪೦–೪೧ರಲ್ಲಿ ಜಿಲ್ಲೆಯಲ್ಲಿ ೭೬೭ ಪ್ರಾಥಮಿಕ ಶಾಲೆಗಳಿದ್ದವು. ಇವುಗಳ ಸಂಖ್ಯೆ ೧೯೪೩–೪೪ರಲ್ಲಿ ೯೧೪ಕ್ಕೂ ೧೯೫೫–೫೬ರಲ್ಲಿ ೧,೧೧೫ಕ್ಕೂ ಹಾಗೂ ೧೯೬೦–೬೧ರಲ್ಲಿ ೧,೫೧೬ಕ್ಕೂ ಹೆಚ್ಚಿಗೊಂಡಿತು. ಇದೇ ರೀತಿ ೧೯೪೦–೪೧ರಲ್ಲಿ ಒಟ್ಟು ಮಕ್ಕಳ ಸಂಖ್ಯೆ ೩೦,೪೬೪ ಆಗಿದ್ದು, ಇದು ೧೯೬೦–೬೧ರಲ್ಲಿ ೭೬,೭೭೪ಕ್ಕೇ ಏರಿತು. ಮುಂದಿನ ಕೋಷ್ಟಕದಲ್ಲಿ ೧೯೪೦–೪೧ ರಿಂದ ೧೯೬೦–೬೧ರ ವರೆಗೆ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಹಾಗೂ ಮಕ್ಕಳ ಅಂಕಿ–ಅಂಶಗಳನ್ನು ನೀಡಲಾಗಿದೆ.

**ಕೋಷ್ಟಕ ೧೩.೬**

| ವರ್ಷ | ಶಾಲೆಗಳ ಸಂಖ್ಯೆ | | | ಮಕ್ಕಳ ಸಂಖ್ಯೆ | | |
|---|---|---|---|---|---|---|
| | ಗಂಡು ಮಕ್ಕಳು | ಹೆಣ್ಣು ಮಕ್ಕಳು | ಒಟ್ಟು | ಗಂಡು ಮಕ್ಕಳು | ಹೆಣ್ಣು ಮಕ್ಕಳು | ಒಟ್ಟು |
| ೧೯೪೦-೪೧ | ೭೦೨ | ೬೫ | ೭೬೭ | ೨೨,೧೩೨ | ೮,೩೩೨ | ೩೦,೪೬೪ |
| ೧೯೪೩-೪೪ | ೮೪೬ | ೬೮ | ೯೧೪ | ೩೨,೬೪೬ | ೧೪,೩೦೧ | ೪೬,೯೪೭ |
| ೧೯೫೫-೫೬ | ೧,೦೫೦ | ೬೫ | ೧,೧೧೫ | ೪೦,೫೧೮ | ೨೦,೭೫೮ | ೬೧,೨೭೬ |
| ೧೯೬೦-೬೧ | ೧,೪೪೧ | ೭೫ | ೧,೫೧೬ | ೪೯,೨೦೧ | ೨೭,೫೭೩ | ೭೬,೭೭೪ |

ಆಧಾರ: ೧೯೬೮ರ ಕೋಲಾರ ಜಿಲ್ಲಾ ಗ್ಯಾಸೆಟಿಯರ್.

ಜಿಲ್ಲೆಯಲ್ಲಿ ಶಾಲೆಗಳ ಹಾಗೂ ಮಕ್ಕಳ ಸಂಖ್ಯಾ ಬಾಹುಳ್ಯಕ್ಕೆ ಅನುಗುಣವಾಗಿ ೧೯೫೬ರಲ್ಲಿ ೧,೬೫೮ ಗಂಡು ಹಾಗೂ ೩೯೩ ಹೆಂಗಸರನ್ನೊಳಗೊಂಡಂತೆ ಒಟ್ಟು ೨,೦೫೧ ಮಂದಿ ಇದ್ದ ಬೋಧಕ ಸಿಬ್ಬಂದಿ ಸಂಖ್ಯೆ ೧೯೬೧ರ ವೇಳೆಗೆ ಒಟ್ಟು ೪,೦೨೭ (೩,೩೪೮ ಗಂ, ೩೭೯ ಹೆಂ)ಕ್ಕೆ ಹೆಚ್ಚಳಗೊಂಡಿತು.

ಪ್ರಾಥಮಿಕ ಶಿಕ್ಷಣವು ೧೯೬೦-೬೧ ರಿಂದ ೧೯೬೪-೬೫ರ ಅವಧಿಯಲ್ಲಿ ಗಣನೀಯ ಪ್ರಗತಿ ಸಾಧಿಸಿತು. ಶಿಕ್ಷಣದ ಪ್ರಯೋಜನ ಹಾಗೂ ಪ್ರಾಮುಖ್ಯತೆಗಳನ್ನು ಜನ ಮನಗಂಡರು. ಇದರಿಂದ ಜಿಲ್ಲೆಯಾದ್ಯಂತ ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಿಕ್ಷಣದ ಶಾಲೆಗಳಲ್ಲಿ ಮಕ್ಕಳ ಸಂಖ್ಯೆಯೂ ಉತ್ತಮಗೊಂಡಿತು.

ಮುಂದಿನ ಕೋಷ್ಟಕ ೧೯೬೫-೬೬ನೇ ಶೈಕ್ಷಣಿಕ ವರ್ಷದಲ್ಲಿದ್ದಂತೆ ಜಿಲ್ಲೆಯ ಪ್ರಾಥಮಿಕ ಶಾಲೆಗಳ, ಹಾಗೂ ಮಕ್ಕಳ ಬೋಧಕ ಸಿಬ್ಬಂದಿಯ ವಿವರಗಳನ್ನು ನೀಡುತ್ತದೆ.

**ಕೋಷ್ಟಕ ೧೩.೭**

| ವರ್ಷ | ಶಾಲೆಗಳ ಸಂಖ್ಯೆ | ಮಕ್ಕಳ ಸಂಖ್ಯೆ | | |
|---|---|---|---|---|
| | | ಗಂಡು ಮಕ್ಕಳು | ಹೆಣ್ಣು ಮಕ್ಕಳು | ಒಟ್ಟು |
| ೧೯೬೫-೬೬ | ೨,೦೮೭ | ೧,೧೧,೪೧೦ | ೮೧,೩೭೧ | ೧,೯೨,೭೮೧ |

| ವರ್ಷ | ತರಬೇತಿ ಹೊಂದಿದ ಶಿಕ್ಷಕರು | | ತರಬೇತಿ ಹೊಂದದ ಶಿಕ್ಷಕರು | | ಒಟ್ಟು |
|---|---|---|---|---|---|
| | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | |
| ೧೯೬೫-೬೬ | ೧,೬೪೭ | ೪೦೭ | ೨,೩೯೨ | ೫೭೩ | ೫,೦೧೯ |

ಆಧಾರ: ೧೯೬೮ರ ಕೋಲಾರ ಜಿಲ್ಲಾ ಗ್ಯಾಸೆಟಿಯರ್.

ಜಿಲ್ಲೆಯಲ್ಲಿ ೧೯೬೭ರಲ್ಲಿ ಒಂದರಿಂದ ನಾಲ್ಕನೇ ತರಗತಿಗಳನ್ನು ಹೊಂದಿದ್ದ ಒಟ್ಟು ೧,೬೬೪ ಕಿರಿಯ ಪ್ರಾಥಮಿಕ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳಲ್ಲಿ ಉರ್ದು ಮತ್ತು ತಮಿಳು ಭಾಷಾ ಶಾಲೆಗಳೂ ಸೇರಿದ್ದವು. ಮೇಲಿನ ಸಂಖ್ಯೆಯಲ್ಲಿ ೧,೪೦೪ ಗಂಡು ಮಕ್ಕಳ ಮತ್ತು ೧೮ ಹೆಣ್ಣುಮಕ್ಕಳ ಶಾಲೆಗಳ ಕನ್ನಡ ಭಾಷಾ ಮಾಧ್ಯಮ ಹೊಂದಿದ್ದವು. ಇಂತಹ ಶಾಲೆಗಳ ತಾಲೂಕುವಾರು ವಿವರಗಳನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೧೩.೮**

| ಕ್ರ. ಸಂ. | ತಾಲೂಕು | ಶಾಲೆಗಳ ಸಂಖ್ಯೆ | ಬೋಧಕ ಸಿಬ್ಬಂದಿ | | | ಮಕ್ಕಳ ಸಂಖ್ಯೆ | | |
|---|---|---|---|---|---|---|---|---|
| | | | ಗಂಡಸರು | ಹೆಂಗಸರು | ಒಟ್ಟು | ಗಂಡು ಮಕ್ಕಳು | ಹೆಣ್ಣು ಮಕ್ಕಳು | ಒಟ್ಟು |
| ೧ | **ಕೋಲಾರ** | ೧೫೧ | ೧೮೫ | ೩೮ | ೨೨೩ | ೪,೬೭೧ | ೩,೮೭೪ | ೮,೫೪೫ |
| ೨. | **ಮಾಲೂರು** | ೧೩೦ | ೧೬೭ | ೧೭ | ೧೮೪ | ೪,೦೫೯ | ೩,೦೯೫ | ೭,೧೫೪ |
| ೩. | **ಬಂಗಾರಪೇಟೆ** | ೨೧೫ | ೨೪೮ | ೧೮೪ | ೪೩೨ | ೧೦,೮೫೪ | ೭,೮೬೮ | ೧೮,೭೨೨ |
| ೪. | **ಮುಳಬಾಗಿಲು** | ೧೫೯ | ೧೫೪ | ೨೧ | ೧೭೫ | ೪,೧೨೨ | ೨,೪೪೧ | ೬,೫೬೩ |
| ೫ | **ಶ್ರೀನಿವಾಸಪುರ** | ೧೨೧ | ೧೪೭ | ೧೭ | ೧೬೪ | ೩,೭೫೬ | ೨,೬೯೫ | ೬,೪೫೧ |
| ೬ | **ಚಿಂತಾಮಣಿ** | ೧೫೭ | ೧೫೯ | ೨೬ | ೧೮೫ | ೪,೪೦೨ | ೩,೨೮೨ | ೭,೬೮೪ |
| ೭ | **ಶಿಡ್ಲಘಟ್ಟ** | ೧೦೮ | ೧೧೮ | ೧೪ | ೧೩೨ | ೩,೧೫೬ | ೨,೦೫೮ | ೫,೨೧೪ |
| ೮. | **ಚಿಕ್ಕಬಳ್ಳಾಪುರ** | ೧೧೩ | ೧೩೬ | ೨೬ | ೧೬೨ | ೩,೫೯೧ | ೨,೬೭೩ | ೬,೨೬೪ |
| ೯. | **ಗೌರಿಬಿದನೂರು** | ೧೪೮ | ೧೯೪ | ೧೧ | ೨೦೫ | ೫,೫೩೭ | ೩,೬೭೩ | ೯,೨೧೦ |
| ೧೦. | **ಬಾಗೇಪಲ್ಲಿ** | ೧೧೩ | ೧೩೩ | ೧೦ | ೧೪೩ | ೩,೨೦೨ | ೧,೯೮೨ | ೫,೧೮೪ |
| ೧೧. | **ಗುಡಿಬಂಡೆ** | ೫೯ | ೪೯ | ೩ | ೫೨ | ೧,೨೦೫ | ೯೦೦ | ೨,೧೦೫ |
| | **ಒಟ್ಟು** | **೧೪೭೪** | **೧೬೯೦** | **೩೬೭** | **೨,೦೫೭** | **೪೮,೫೫೫** | **೩೪,೫೪೧** | **೮೩,೦೯೬** |

ಆಧಾರ: ೧೯೬೮ರ ಕೋಲಾರ ಜಿಲ್ಲಾ ಗ್ಯಾಸೆಟಿಯರ್.

ಇದೇ ರೀತಿ ಮೇಲಿನ ವರ್ಷಕ್ಕೆ ಜಿಲ್ಲೆಯಲ್ಲಿ ಐದರಿಂದ ಏಳು (ಅಥವಾ ಒಂದರಿಂದ ಏಳನೇ) ತರಗತಿಗಳನ್ನು ಹೊಂದಿದ್ದ ಒಟ್ಟು ೩೫೯ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದವು. ಇವುಗಳಲ್ಲಿ ೨೫೪ ಗಂಡುಮಕ್ಕಳು ಹಾಗೂ ಆರು ಹೆಣ್ಣು ಮಕ್ಕಳ ಶಾಲೆಗಳು ಕನ್ನಡ ಭಾಷಾ ಮಾಧ್ಯಮ ಹೊಂದಿದ್ದವು. ಉಳಿದವು ಉರ್ದು ಹಾಗೂ ತಮಿಳು ಮಾಧ್ಯಮಗಳನ್ನು ಹೊಂದಿದ್ದವು. ಕನ್ನಡ ಭಾಷಾ ಮಾಧ್ಯಮ ಹೊಂದಿದ್ದ ೨೫೪ ಶಾಲೆಗಳ ತಾಲೂಕುವಾರು ವಿವರಗಳನ್ನು ಈ ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೧೩.೯**

| ಕ್ರ. ಸಂ. | ತಾಲೂಕು | ಶಾಲೆಗಳ ಸಂಖ್ಯೆ | ಬೋಧಕ ವರ್ಗ | | | ಮಕ್ಕಳ ವಿವರ | | |
|---|---|---|---|---|---|---|---|---|
| | | | ಗಂಡಸರು | ಹೆಂಗಸರು | ಒಟ್ಟು | ಗಂಡು ಮಕ್ಕಳು | ಹೆಣ್ಣು ಮಕ್ಕಳು | ಒಟ್ಟು |
| ೧ | ಕೋಲಾರ | ೩೨ | ೧೩೬ | ೩೬ | ೧೭೨ | ೨,೭೭೪ | ೧,೭೬೮ | ೪,೫೪೨ |
| ೨. | ಮಾಲೂರು | ೨೩ | ೧೦೫ | ೭ | ೧೧೨ | ೧,೪೨೧ | ೨,೦೭೩ | ೩,೪೯೪ |
| ೩. | ಬಂಗಾರಪೇಟೆ | ೧೭ | ೫೨ | ೭ | ೫೯ | ೧,೬೭೮ | ೮೩೯ | ೨,೫೧೭ |
| ೪. | ಮುಳಬಾಗಿಲು | ೨೯ | ೧೧೮ | ೧೯ | ೧೩೭ | ೩,೧೮೮ | ೧,೭೨೨ | ೪,೯೧೦ |
| ೫ | ಶ್ರೀನಿವಾಸಪುರ | ೨೬ | ೧೨೧ | ೬ | ೧೨೭ | ೨,೯೯೪ | ೧,೫೭೬ | ೪,೫೭೦ |
| ೬ | ಚಿಂತಾಮಣಿ | ೩೧ | ೧೨೬ | ೧೭ | ೧೪೩ | ೩,೩೭೩ | ೧,೮೧೨ | ೫,೧೮೫ |
| ೭ | ಶಿಡ್ಲಘಟ್ಟ | ೨೩ | ೭೯ | ೯ | ೮೮ | ೨,೨೬೭ | ೧,೨೬೬ | ೩,೫೩೩ |
| ೮. | ಚಿಕ್ಕಬಳ್ಳಾಪುರ | ೧೬ | ೬೯ | ೧೪ | ೮೩ | ೧,೮೧೮ | ೧,೦೩೪ | ೨,೮೫೨ |
| ೯. | ಗೌರಿಬಿದನೂರು | ೩೪ | ೧೪೮ | ೬ | ೧೫೪ | ೩,೯೪೫ | ೩,೬೪೫ | ೭,೫೯೦ |
| ೧೦. | ಬಾಗೇಪಲ್ಲಿ | ೧೬ | ೬೦ | ೫ | ೬೫ | ೧,೫೭೦ | ೮೩೫ | ೨,೪೦೫ |
| ೧೧. | ಗುಡಿಬಂಡೆ | ೭ | ೨೫ | ೧ | ೨೬ | ೭೦೯ | ೪೦೮ | ೧,೧೧೭ |
| | ಒಟ್ಟು | ೨೫೪ | ೧,೦೩೯ | ೧೨೭ | ೧,೧೬೬ | ೨೫,೭೩೭ | ೧೬,೯೭೮ | ೪೨,೭೧೫ |

ಆಧಾರ: ೧೯೬೮ರ ಕೋಲಾರ ಜಿಲ್ಲಾ ಗ್ಯಾಸೆಟಿಯರ್.

**ಭಾಷಾ ಅಲ್ಪ ಸಂಖ್ಯಾತರ ಶಾಲೆಗಳು:– (ಕಿರಿಯ)**

ಜಿಲ್ಲೆಯ ೧೯೬೭ರಲ್ಲಿ ಒಟ್ಟು ೧೪೦ ಗಂಡು ಮಕ್ಕಳ ಉರ್ದು ಕಿರಿಯ ಪ್ರಾಥಮಿಕ ಶಾಲೆಗಳಿದ್ದವು. ಇವುಗಳಲ್ಲಿ ೪,೪೯೩ ಗಂಡು ಹಾಗೂ ೩,೬೫೪ ಹೆಣ್ಣು ಮಕ್ಕಳು ವ್ಯಾಸಂಗ ಮಾಡುತ್ತಿದ್ದರು. ಬೋಧಕ ಸಿಬ್ಬಂದಿ ಪೈಕಿ ೧೭೨ ಮಂದಿ ಗಂಡಸರು ೫೧ ಮಂದಿ ಹೆಂಗಸರು ಇದ್ದರು.

ಮೇಲಿನ ವರ್ಷಕ್ಕೆ ಜಿಲ್ಲೆಯಲ್ಲಿ ಒಟ್ಟು ೫೭ ಹೆಣ್ಣು ಮಕ್ಕಳ ಉರ್ದು ಕಿರಿಯ ಪ್ರಾಥಮಿಕ ಶಾಲೆಗಳಿದ್ದವು. ಇವುಗಳಲ್ಲಿ ೮೩೮ ಗಂಡುಮಕ್ಕಳು ಹಾಗೂ ೧,೬೩೭ ಹೆಣ್ಣುಮಕ್ಕಳು ೪೧ ಗಂಡು ಹಾಗೂ ೩೪ ಹೆಣ್ಣು ಬೋಧಕ ಸಿಬ್ಬಂದಿಯ ಮಾರ್ಗದರ್ಶನದಲ್ಲಿ ವ್ಯಾಸಂಗ ಮಾಡುತ್ತಿದ್ದರು.

ಈ ಶಾಲೆಗಳ ವಿಶೇಷವೆಂದರೆ, ಇವು ಹೆಸರಿಗೆ 'ಗಂಡು ಮಕ್ಕಳ' ಹಾಗೂ 'ಹೆಣ್ಣು ಮಕ್ಕಳ' ಶಾಲೆಗಳಾಗಿದ್ದರೂ ಇವುಗಳಲ್ಲಿ ಸಹ ಶಿಕ್ಷಣವಿದ್ದಿತು.

ಇವಲ್ಲದೆ ತಮಿಳು ಭಾಷಾ ಮಾಧ್ಯಮ ಹೊಂದಿದ ೫೧ ಕಿರಿಯ ಪ್ರಾಥಮಿಕ ಶಾಲೆಗಳೂ ಕಾರ್ಯನಿರ್ವಹಿಸುತ್ತಿದ್ದು, ಇವುಗಳಲ್ಲಿ ೨೮೯ ಬೋಧಕ ಸಿಬ್ಬಂದಿಯ ಮಾರ್ಗದರ್ಶನದಲ್ಲಿ ೪,೬೦೦ ಗಂಡು ಹಾಗೂ ೫,೩೪೮ ಹೆಣ್ಣು ಮಕ್ಕಳು ವ್ಯಾಸಂಗ ಮಾಡುತ್ತಿದ್ದರು.

ಹಿರಿಯ: ಉರ್ದು ಭಾಷಾ ಮಾಧ್ಯಮ ಹೊಂದಿದ ಒಟ್ಟು ೫೭ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ೪,೨೯೬ ಗಂಡು ಹಾಗೂ ೨,೯೧೨ ಹೆಣ್ಣು ಮಕ್ಕಳು ೧೬೩ ಗಂಡು ಹಾಗೂ ೪೩ ಹೆಣ್ಣು ಬೋಧಕ ಸಿಬ್ಬಂದಿಯಡಿ ವ್ಯಾಸಂಗ ಮಾಡುತ್ತಿದ್ದರು. ಈ ರೀತಿಯ ಹೆಣ್ಣುಮಕ್ಕಳ ಉರ್ದು ಶಾಲೆಗಳ ಸಂಖ್ಯೆ ೧೧ ಆಗಿದ್ದು, ಇವುಗಳಲ್ಲಿ ಇಬ್ಬರು ಗಂಡು ಹಾಗೂ ೬೬ ಹೆಣ್ಣು ಸಿಬ್ಬಂದಿಯಡಿ ೪೩ ಗಂಡು ಹಾಗೂ ೨,೫೬೪ ಹೆಣ್ಣುಮಕ್ಕಳು ವ್ಯಾಸಂಗ ಮಾಡುತ್ತಿದ್ದರು. ಇದಲ್ಲದೆ ಇಂತಹ ತಮಿಳು ಶಾಲೆಗಳ ಸಂಖ್ಯೆ ಒಟ್ಟು ೧೭ ಆಗಿದ್ದು, ೧೧೯ ಸಿಬ್ಬಂದಿಯ ಮಾರ್ಗದರ್ಶನದಲ್ಲಿ ೨,೪೬೧ ಗಂಡು ಹಾಗೂ ೩,೯೫೬ ಹೆಣ್ಣು ಮಕ್ಕಳು ಇವುಗಳಲ್ಲಿ ವ್ಯಾಸಂಗ ಮಾಡುತ್ತಿದ್ದರು.

ಜೂನ್ ೨೦೦೪ರಲ್ಲಿ ಇದ್ದಂತೆ ಜಿಲ್ಲೆಯ ಭಾಷಾ ಅಲ್ಪಸಂಖ್ಯಾತ ಶಾಲೆಗಳ ತಾಲೂಕುವಾರು ವಿವರಗಳನ್ನು ಈ ಮುಂದೆ ನೀಡಲಾಗಿದೆ.

**ಕೋಷ್ಟಕ ೧೩.೧೦**

| ಕ್ರ. ಸಂ. | ಸ್ಥಳ | ಶಾಲೆಗಳ ವಿವರ | ಶಾಲೆಗಳ ಸಂಖ್ಯೆ | ತರಗತಿಗಳ ವಿವರ | ವಿದ್ಯಾರ್ಥಿಗಳ ಸಂಖ್ಯೆ ಗಂಡು | ಹೆಣ್ಣು |
|---|---|---|---|---|---|---|
| ೧ | **ಕೋಲಾರ** | ಉರ್ದು | ೪೭ | ೧ ರಿಂದ ೭ | ೩೬೦೬ | ೪೩೭೮ |
| | | | | ೮ ರಿಂದ ೧೦ | ೨೦೩ | ೫೫೨ |
| ೨ | **ಕೆ. ಜಿ. ಎಫ್** | ಉರ್ದು | ೧೩ | ೧ ರಿಂದ ೭ | ೩೪೬ | ೫೦೬ |
| | | ತಮಿಳು | ೧೫ | ೧ ರಿಂದ ೭ | ೧೫೫೨ | ೧೬೩೩ |
| | | ಹಿಂದಿ | ೧೧ | ೧ ರಿಂದ ೫ | ೨೪ | ೬೨ |
| | | ತೆಲುಗು | ೧೧ | ೧ ರಿಂದ ೫ | ೩೧ | ೨೫ |
| ೩ | **ಬಂಗಾರುಪೇಟೆ** | ಉರ್ದು | ೨೩ | ೧ ರಿಂದ ೭ | ೮೭೩ | ೧೦೫೪ |
| | | ತಮಿಳು | ೧೧ | ೧ ರಿಂದ ೭ | ೧೯ | ೧೬ |

| ಕ್ರ. ಸಂ. | ಸ್ಥಳ | ಶಾಲೆಗಳ ವಿವರ | ಶಾಲೆಗಳ ಸಂಖ್ಯೆ | ತರಗತಿಗಳ ವಿವರ | ವಿದ್ಯಾರ್ಥಿಗಳ ಸಂಖ್ಯೆ ಗಂಡು | ಹೆಣ್ಣು |
|---|---|---|---|---|---|---|
| ೪ | **ಮಾಲೂರು** | ಉರ್ದು | ೨೫ | ೧ ರಿಂದ ೭ | ೭೧೦ | ೮೭೭ |
| ೫ | **ಮುಳಬಾಗಿಲು** | ಉರ್ದು | ೩೯ | ೧ ರಿಂದ ೭ | ೨೦೮೧ | ೨೪೦೨ |
| ೬ | **ಶ್ರೀನಿವಾಸಪುರ** | ಉರ್ದು | ೨೨ | ೧ ರಿಂದ ೭ | ೬೨೩ | ೧೦೩೫ |
| | | | | ೮ ರಿಂದ ೧೦ | ೩೦ | ೨೩ |

ಆಧಾರ: ಡಿ.ಡಿ.ಪಿ.ಐ. ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ಕೋಲಾರ.

**ಚಿಕ್ಕಬಳ್ಳಾಪುರ ಶೈಕ್ಷಣಿಕ ಜಿಲ್ಲೆಯಲ್ಲಿ ಉರ್ದು ಶಾಲೆಗಳು ಮಾತ್ರ ಕಾರ್ಯನಿರ್ವಹಿಸುತ್ತಿದ್ದು, ಅವುಗಳ ವಿವರ ಇಂತಿದೆ:**

| ತಾಲೂಕು | ಶಾಲೆಗಳ ಸಂಖ್ಯೆ ಹಿರಿಯ | ಕಿರಿಯ | ಮಕ್ಕಳ ಸಂಖ್ಯೆ | ಶಿಕ್ಷಕರ ಸಂಖ್ಯೆ |
|---|---|---|---|---|
| ೧) ಚಿ.ಬ. ಪುರ | ೦೮ | ೦೫ | ೧೩೫೨ | ೩೪ |
| ೨) ಬಾಗೇಪಲ್ಲಿ | ೧೪ | ೦೫ | ೮೨೯ | ೨೨ |
| ೩) ಗುಡಿಬಂಡೆ | ೦೨ | ೦೧ | ೨೩೭ | ೦೯ |
| ೪) ಚಿಂತಾಮಣಿ | ೧೭ | ೧೪ | ೨೭೮೯ | ೮೫ |
| ೫) ಗೌರಿಬಿದನೂರು | ೨೦ | ೧೦ | ೧೪೭೮ | ೪೮ |
| ೬) ಶಿಡ್ಲಘಟ್ಟ | ೧೨ | ೦೫ | ೨೭೫೮ | ೩೫ |

**ಮಾಧ್ಯಮಿಕ ಶಾಲೆಗಳು**

ಐದು, ಆರು ಹಾಗೂ ಏಳನೇ ತರಗತಿಗಳನ್ನು ಹೊಂದಿದ್ದ ಶಾಲೆಗಳನ್ನು 'ಮಾಧ್ಯಮಿಕ ಶಾಲೆ'ಗಳೆಂದು ಕರೆಯುತ್ತಿದ್ದರು. ೧೯೬೭ರಲ್ಲಿ ಜಿಲ್ಲೆಯಲ್ಲಿ ಒಟ್ಟು ೫೫ ಮಾಧ್ಯಮಿಕ ಶಾಲೆಗಳಿದ್ದು, ಇವುಗಳಲ್ಲಿ ೯,೯೬೭ ಗಂಡು ಹಾಗೂ ೧,೭೪೧ ಹೆಣ್ಣು ಮಕ್ಕಳು ೩೪೭ ಮತ್ತು ೫೩ ಹೆಣ್ಣು ಬೋಧಕ ಸಿಬ್ಬಂದಿಯಡಿ ವ್ಯಾಸಂಗ ಮಾಡುತ್ತಿದ್ದರು. ಹೆಣ್ಣು ಮಕ್ಕಳಿಗಾಗಿಯೇ ಇಂತಹ ಒಟ್ಟು ಎಂಟು ಶಾಲೆಗಳಿದ್ದು, ಇವುಗಳಲ್ಲಿ ಒಟ್ಟು ೧,೭೭೧ ಮಕ್ಕಳು ವ್ಯಾಸಂಗ ಮಾಡುತ್ತಿದ್ದರು. ಇವುಗಳಲ್ಲಿ ಗಂಡು ಮಕ್ಕಳಿರಲಿಲ್ಲ. ಬೋಧಕ ಸಿಬ್ಬಂದಿಯಲ್ಲಿ ೧೮ ಗಂಡು ಮತ್ತು ೫೦ ಹೆಂಗಸರು ಸೇರಿದ್ದರು.

ಪ್ರಸ್ತುತ ಮಾಧ್ಯಮಿಕ ಶಾಲೆಗಳನ್ನು ಪ್ರಾಥಮಿಕ ಶಾಲೆಗಳ ವ್ಯಾಪ್ತಿಗೇ ಸೇರಿಸಿ ಒಂದರಿಂದ ಏಳರ ವರೆಗೆ ಈ ಹಂತವನ್ನು ನಿಗದಿ ಮಾಡಲಾಗಿದೆ.

**ಕಡ್ಡಾಯ ಪ್ರಾಥಮಿಕ ಶಿಕ್ಷಣ:** ಕೇಂದ್ರ ಸರಕಾರದ ಆದೇಶದಂತೆ ಪ್ರಾಥಮಿಕ ಶಿಕ್ಷಣವನ್ನು ಉಚಿತ ಹಾಗೂ ಕಡ್ಡಾಯವಾಗಿಸಿ, ಇದರ ಸಾರ್ವತ್ರೀಕರಣಗೊಳಿಸುವುದಕ್ಕಾಗಿ ೧೯೬೧–೬೨ನೇ ಶೈಕ್ಷಣಿಕ ವರ್ಷದಿಂದ ಸರಕಾರವು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೊಳಿಸಿತು. ಇದರಂತೆ ೧೯೬೫–೬೬ರ ವೇಳೆಗೆ ರಾಜ್ಯದಲ್ಲಿ ೦೬ ರಿಂದ ೧೧ ವರ್ಷ ವಯೋಮಿತಿಯ ಮಕ್ಕಳಲ್ಲಿ ಶೇಕಡಾ ೮೦ರಷ್ಟನ್ನಾದರೂ ಶಾಲೆಗಳಿಗೆ ಸೇರಿಸುವ ಪ್ರಯತ್ನ ಮಾಡಲಾಯಿತು. ಮೂರನೇ ಪಂಚವಾರ್ಷಿಕ ಯೋಜನೆಯ ಅಂತ್ಯದ ವೇಳೆಗೆ ನಿಗದಿತ ಗುರಿ ಸಾಧಿಸುವ ಉದ್ದೇಶದಿಂದ ೧೯೬೧–೬೨ರಲ್ಲಿ ಆರರಿಂದ ಏಳು

ವಯೋಮಿತಿಯ ಮಕ್ಕಳನ್ನು ಶಾಲೆಗಳಿಗೆ ಸೇರಲು ಪ್ರೇರೆಪಿಸಲಾಯಿತು. ಇದಕ್ಕಾಗಿ ೧೯೬೧ರ ಮೈಸೂರು ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯ್ದೆಯ ವಿಧಿಗಳನ್ನು ಜಾರಿಮಾಡಲಾಯಿತು. ಈ ವಿಧಿಯ ಹಲವು ಪ್ರಮುಖ ಅಂಶಗಳೆಂದರೆ:

i) ಪ್ರತೀ ಮಗುವಿನ ವಾಸಸ್ಥಳದ ಒಂದು ಮೈಲಿ ಫಾಸಲೆಯಲ್ಲಿ ಒಂದು ಪ್ರಾಥಮಿಕ ಶಾಲೆಯ ಸ್ಥಾಪನೆ.

ii) ತಮ್ಮ ಮಕ್ಕಳು ಶಾಲೆಗೆ ತಪ್ಪದೇ ಹಾಜರಾಗುವ ಜವಾಬ್ದಾರಿಯನ್ನು ಪೋಷಕರಿಗೆ ವಹಿಸುವುದು.

iii) ಶಾಲೆಗಳಲ್ಲಿ ಮಕ್ಕಳ ಕಡ್ಡಾಯ ದಾಖಲಾತಿ ಹಾಗೂ ಹಾಜರಾತಿ ಉಸ್ತುವಾರಿಗೆ ಅಧಿಕಾರಿಗಳ ನೇಮಕ.

iv) ಮಕ್ಕಳು ಶಾಲೆಗಳಿಗೆ ಬರುವಂತೆ ಮಾಡಿ, ಅವರು ಬಾಲ ಕಾರ್ಮಿಕರಾಗುವುದನ್ನು ತಪ್ಪಿಸುವುದು.

v) ಪ್ರಾಥಮಿಕ ಶಿಕ್ಷಣ ಕಾಯ್ದೆಗೆ ಸಂಬಂಧಿಸಿದ ಅಪರಾಧಗಳ ವಿಚಾರಣೆಗೆ ಪ್ರಾಥಮಿಕ ಶಾಲಾ ಪಂಚಾಯ್ತಿ ಕೋರ್ಟುಗಳ ಸ್ಥಾಪನೆ

೧೯೬೧ರಲ್ಲಿ ನಡೆದ ಕಡ್ಡಾಯ ಪ್ರಾಥಮಿಕ ಶಿಕ್ಷಣದ ಬಗ್ಗೆ ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ ಮಂಡಿಸಲ್ಪಟ್ಟು, ಸರಕಾರದಿಂದ ಅಂಗೀಕೃತವಾದ ಹಲವು ಪ್ರಮುಖ ಶಿಫಾರಸ್ಸುಗಳೆಂದರೆ:

i) ಕನಿಷ್ಠ ೩೦೦ ಜನರಿರುವ ಹಾಗೂ ಒಂದು ಶಾಲೆ ತೆರೆಯಲು ಅವಶ್ಯ ಮಕ್ಕಳ ಸಂಖ್ಯೆ ಹೊಂದಿದ ಎಲ್ಲಾ ಹಳ್ಳಿಗಳಲ್ಲಿ ಶಾಲೆಗಳನ್ನು ಪ್ರಾರಂಭಿಸುವುದು.

ii) ಅವಶ್ಯವಿರುವೆಡೆ ಶಾಲೆಗಳಲ್ಲಿ ಹೆಚ್ಚಿನ ಬೋಧಕ ಸಿಬ್ಬಂದಿ ನೇಮಕ

iii) ಎಲ್ಲಾ ಶಾಲೆಗಳಲ್ಲಿ ಮಧ್ಯಾಹ್ನ ಭೋಜನ, ಉಚಿತ ಪಠ್ಯಗಳ ನೀಡಿಕೆ ಹಾಗೂ ಹಾಜರಾತಿ ವಿದ್ಯಾರ್ಥಿ ವೇತನಗಳಂತಹ ಯೋಜನೆಗಳ ಅನುಷ್ಠಾನ.

iv) ಪ್ರತೀ ಶಾಲೆಗೆ ಶಾಲಾ ಅಭಿವೃದ್ಧಿ ಸಮಿತಿ ರಚನೆ.

v) ತಂತಮ್ಮ ಆಡಳಿತ ಪ್ರಾಂತಗಳಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಅನುಷ್ಠಾನಗೊಳಿಸುವ ಹೊಣೆಗಾರಿಕೆಯನ್ನು ಆಯಾಯ ಸ್ಥಳಗಳ ತಾಲೂಕು ಅಭಿವೃದ್ಧಿ ಮಂಡಳಿ ಹಾಗೂ ಮುನಿಸಿಪಾಲಿಟಿಗಳಿಗೆ ವಹಿಸುವುದು.

ಇದರಿಂದಾಗಿ ಜಿಲ್ಲೆಯಲ್ಲಿ ಶಾಲೆಗೆ ಸೇರುವ ಮಕ್ಕಳ ಸಂಖ್ಯೆ ಗಣನೀಯವಾಗಿ ಹೆಚ್ಚಳಗೊಂಡಿತು. ೧೯೬೪–೬೫ ರಿಂದ ೧೯೬೬–೬೭ರ ಮೂರು ಶೈಕ್ಷಣಿಕ ವರ್ಷಗಳ ಅವಧಿಯಲ್ಲಿ ಶೇಕಡಾವಾರು ದಾಖಲಾತಿ ೯೫ ರಷ್ಟು ಸಾಧನೆಯಾಯಿತು. ಇತ್ತೀಚಿನ ವರ್ಷಗಳಲ್ಲಿ ನಗರ ಪ್ರದೇಶದ ತಾಯ್ತಂದೆಗಳಲ್ಲಿ ಹಾಗೂ ಮಕ್ಕಳಲ್ಲಿರುವ ಶೈಕ್ಷಣಿಕ ಹಾಗೂ ಸಾಮಾಜಿಕ ಜವಾಬ್ದಾರಿಯಿಂದಾಗಿ ಶಿಕ್ಷಣವನ್ನು ಕಡ್ಡಾಯಗೊಳಿಸುವ ಅವಶ್ಯಕತೆ ಕಡಿಮೆಯಾಗಿದ್ದರೂ, ಗ್ರಾಮೀಣ ಪ್ರದೇಶದಲ್ಲಿ ಇದು ಇನ್ನು ಸಂಪೂರ್ಣವಾಗಿ ಫಲಪ್ರದವಾಗದಿರುವುದು ಕಂಡು ಬರುತ್ತದೆ.

**ಮೂಲ ಶಿಕ್ಷಣ (ಬೇಸಿಕ್ ಎಜುಕೇಷನ್)**

ಸ್ವಾತಂತ್ರ್ಯಾನಂತರದ ಅವಧಿಯಲ್ಲಿ ಮೂಲ ಶಿಕ್ಷಣ ಪ್ರಾಮುಖ್ಯತೆ ಪಡೆಯಿತು. ಸ್ಥಳೀಯ ಸ್ಥಿತಿಗತಿಗಳನ್ನು ಅನುಸರಿಸಿ ಶೈಕ್ಷಣಿಕ ಅನುಕೂಲಗಳನ್ನು ಒದಗಿಸುವ ಮೂಲ ಉದ್ದೇಶ ಹೊಂದಿದ ಈ ಶಿಕ್ಷಣ ಸ್ಥಳೀಯರಿಗೆ ತಮ್ಮ ವೃತ್ತಿಗನುಗುಣವಾದ ಜೀವನಕ್ರಮ ಅಳವಡಿಸಿಕೊಳ್ಳಲು ಉಪಯುಕ್ತವಾಗಿದ್ದಿತು. ಅಲ್ಲದೆ ವ್ಯಕ್ತಿಯ ಭೌತಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಒತ್ತು ನೀಡುವಂತಹ, ತನ್ಮೂಲಕ ಸಮಾಜದ ಸರ್ವತೋಮುಖ ಬೆಳವಣಿಗೆಗೆ ಸಹಾಯವಾಗುವಂತಹ ಈ ಶಿಕ್ಷಣ ವ್ಯವಸ್ಥೆಯಲ್ಲಿ ಕೃಷಿ, ತೋಟಗಾರಿಕೆ, ನೇಯ್ಗೆ, ನೂಲುವುದು, ಬಡಗಿ, ಕಮ್ಮಾರಿಕೆ, ಕೋಳಿಸಾಕಣೆ ಮುಂತಾದ ಜೀವನಾಧಾರ ವಿಷಯಗಳನ್ನು ಬೋಧಿಸಲಾಗುತ್ತಿತ್ತು. ಇವುಗಳ ಬೋಧನೆಗಾಗಿ ಬೆಂಗಳೂರಿನ ವಿದ್ಯಾನಗರದ ಬೇಸಿಕ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ನಲ್ಲಿ ತರಬೇತಿ ಹೊಂದಿದ ನುರಿತ ಸಿಬ್ಬಂದಿಯನ್ನು ನೇಮಿಸಲಾಗಿತ್ತು. ಈ ಸಿಬ್ಬಂದಿ ವಿವಿಧ ಪ್ರಾಥಮಿಕ ಶಾಲೆಗಳಿಂದ ಆಯ್ಕೆಗೊಂಡವರಾಗಿದ್ದು, ಸಂಸ್ಥೆಯಲ್ಲಿ ಮೇಲ್ಕಂಡ ವಿಷಯಗಳಲ್ಲಿ ವಿಶೇಷ ತರಬೇತಿ ನೀಡಲಾಗುತ್ತಿತ್ತು. ಇವುಗಳಲ್ಲಿ ಉಚಿತ ಮಧ್ಯಾಹ್ನ ಭೋಜನದ ವ್ಯವಸ್ಥೆ ಇದ್ದಿತು. ಆರೋಗ್ಯ ಶಿಕ್ಷಣ ಹಾಗೂ ನಾಗರಿಕತ್ವದ ಬಗ್ಗೆ ವಿಶೇಷ ಬೋಧನಾ ತರಗತಿಗಳನ್ನೂ ನಡೆಸಲಾಗುತ್ತಿತ್ತು.

ಮೂಲ ಶಿಕ್ಷಣ ಶಾಲೆಗಳಲ್ಲಿ ಎರಡು ವಿಧಗಳಿದ್ದು, ಒಂದರಿಂದ ನಾಲ್ಕರವರೆಗೆ ತರಗತಿಗಳನ್ನು ಹೊಂದಿದ್ದವುಗಳನ್ನು ಕಿರಿಯ ಮಾಧ್ಯಮಿಕ ಶಿಕ್ಷಣ ಶಾಲೆಗಳೆಂದೂ ಒಂದರಿಂದ ಏಳು ಅಥವಾ ಐದರಿಂದ ಏಳನೇ ತರಗತಿಗಳನ್ನು ಹೊಂದಿದ್ದ ಶಾಲೆಗಳನ್ನು ಹಿರಿಯ ಮಾಧ್ಯಮಿಕ ಶಿಕ್ಷಣ ಶಾಲೆಗಳೆಂದೂ ಕರೆಯಲಾಗಿದ್ದಿತು. ೧೯೬೮ರಲ್ಲಿದ್ದಂತೆ ಇಂತಹ ಶಾಲೆಗಳ ವಿವರಗಳನ್ನು ಮುಂದಿನ ಕೋಷ್ಟಕಗಳಲ್ಲಿ ನೀಡಲಾಗಿದೆ.

**ಕೋಷ್ಟಕ ೧೩.೧೧**

| ಕ್ರ. ಸಂ. | ತಾಲೂಕು | ಶಾಲೆಗಳ ಸಂಖ್ಯೆ | ಬೋಧಕ ಸಿಬ್ಬಂದಿ | | | ಮಕ್ಕಳ ವಿವರ | | |
|---|---|---|---|---|---|---|---|---|
| | | | ಗಂಡಸರು | ಹೆಂಗಸರು | ಒಟ್ಟು | ಗಂಡು ಮಕ್ಕಳು | ಹೆಣ್ಣು ಮಕ್ಕಳು | ಒಟ್ಟು |
| ೧. | **ಕೋಲಾರ** | ೨೨ | ೪೩ | ೨೮ | ೭೧ | ೧,೪೫೦ | ೮೦೫ | ೨,೨೫೫ |
| ೨. | **ಮಾಲೂರು** | ೩ | ೧೧ | ೧ | ೧೨ | ೨೪೦ | ೧೭೭ | ೪೧೭ |
| ೩. | **ಬಂಗಾರಪೇಟೆ** | ೬ | ೧೨ | ೧ | ೧೩ | ೩೬೮ | ೨೪೭ | ೬೧೫ |
| ೪. | **ಮುಳಬಾಗಿಲು** | ೬ | ೯ | – | ೯ | ೧೯೬ | ೧೦೯ | ೩೦೫ |
| ೫. | **ಶ್ರೀನಿವಾಸಪುರ** | ೮ | ೧೩ | ೧ | ೧೪ | ೨೬೦ | ೨೦೩ | ೪೬೩ |
| ೬. | **ಚಿಂತಾಮಣಿ** | ೫ | ೧೦ | – | ೧೦ | ೨೫೧ | ೧೫೮ | ೪೦೯ |
| ೭. | **ಶಿಡ್ಲಘಟ್ಟ** | ೪ | ೧೧ | ೨ | ೧೩ | ೨೭೯ | ೨೨೬ | ೫೦೫ |
| ೮. | **ಚಿಕ್ಕಬಳ್ಳಾಪುರ** | ೩ | ೬ | – | ೬ | ೬೬ | ೮೬ | ೧೫೨ |
| ೯. | **ಗೌರಿಬಿದನೂರು** | ೪ | ೧೦ | ೨ | ೧೨ | ೬೬೯ | ೫೨ | ೧೭೨ |
| ೧೦. | **ಬಾಗೇಪಲ್ಲಿ** | ೩ | ೯ | ೨ | ೧೧ | ೨೧೯ | ೧೨೫ | ೩೪೪ |
| ೧೧. | **ಗುಡಿಬಂಡೆ** | ೧ | ೨ | – | ೨ | ೩೬ | ೨೧ | ೫೭ |
| | **ಒಟ್ಟು** | **೬೫** | **೧೩೬** | **೩೭** | **೧೭೩** | **೪,೦೩೪** | **೨,೨೦೯** | **೬,೨೪೩** |

ಆಧಾರ: ೧೯೬೮ರ ಕೋಲಾರ ಜಿಲ್ಲಾ ಗ್ಯಾಸೆಟಿಯರ್.

ಪ್ರಸ್ತುತ ಮೂಲ ಶಿಕ್ಷಣದ ಅರ್ಥವ್ಯಾಪ್ತಿ ಸಾಕಷ್ಟು ಬದಲಾವಣೆಗೆ ಒಳಪಟ್ಟಿದ್ದು, ಇದನ್ನು ಯುವಜನರಿಗೆ ಉದ್ಯೋಗಾವಕಾಶ ನೀಡುವ ಉದ್ದೇಶದಿಂದ ಪದವಿಪೂರ್ವ ಶಿಕ್ಷಣಕ್ಕೆ ಸಮಾನವಾಗಿ ಅದೇ ಮಟ್ಟದಲ್ಲಿ 'ವೃತ್ತಿ ಶಿಕ್ಷಣ'ದ ರೂಪದಲ್ಲಿ ನೀಡಲಾಗುತ್ತಿದೆ. ಹತ್ತನೇ ತರಗತಿ ಪಾಸಾದ ಮಕ್ಕಳು ಪಿಯುಸಿಗೆ ಬದಲಾಗಿ ಎರಡು ವರ್ಷ ಅವಧಿಯ ವೃತ್ತಿ ಶಿಕ್ಷಣಕ್ಕೆ ಸೇರಬಹುದಾಗಿದೆ. ಇದರ ವಿವರಗಳನ್ನು ಸಂಬಂಧಿಸಿದ ಶೀರ್ಷಿಕೆಯಡಿ ಚರ್ಚಿಸಲಾಗಿದೆ.

**ಇತ್ತೀಚಿನ ಸುಧಾರಣೆ:**

ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಕ್ಷೇತ್ರಗಳಲ್ಲಿ ಸುಧಾರಣೆಗಳನ್ನು ತರುವ, ಪಠ್ಯಪುಸ್ತಕಗಳ ಹೊರೆಯಿಂದ ಮಕ್ಕಳನ್ನು ಮುಕ್ತಾಗಿಸುವ, ಪರೀಕ್ಷೆಗಳಲ್ಲಿ ಮಕ್ಕಳಲ್ಲಿ ಮನೆಮಾಡಿರುವ ಭಯವನ್ನು ಹೋಗಲಾಡಿಸುವ ಉದ್ದೇಶದಿಂದ ಜನವರಿ ೨೦೦೪ರಂದು ಸೇರಿದ ಶಿಕ್ಷಣ ತಜ್ಞರ ಸಮಾವೇಶದಲ್ಲಿ ಹಲವು ಪ್ರಮುಖ ನಿರ್ಣಯಗಳನ್ನು ಕೈಗೊಳ್ಳಲಾಯಿತು.

**ಟ್ರೈಮೆಸ್ಟರ್ ಪದ್ಧತಿ**: ದಿನಾಂಕ ೧೬-೨-೨೦೦೪ರ ಸರ್ಕಾರಿ ಆದೇಶ ಸಂಖ್ಯೆ: ಇಡಿ೨೪.ಡಿಇಒ ೨೦೦೪ರಂತೆ, ೨೦೦೪-೦೫ರ ಶೈಕ್ಷಣಿಕ ವರ್ಷದಿಂದ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಜಾರಿಗೆ ಬರುವಂತೆ, ಒಂದರಿಂದ ಒಂಭತ್ತನೆಯ ತರಗತಿಯವರೆಗೆ ಶೈಕ್ಷಣಿಕ ವರ್ಷವನ್ನು ಈ ಕೆಳಕಂಡಂತೆ ಮೂರು ಅವಧಿಗಳನ್ನಾಗಿ ವಿಂಗಡಿಸಲಾಗಿದೆ.

೧) ಜುಲೈ, ಆಗಸ್ಟ್, ಸೆಪ್ಟೆಂಬರ್– ಮೊದಲ ಅವಧಿ
೨) ಅಕ್ಟೋಬರ್, ನವೆಂಬರ್, ಡಿಸೆಂಬರ್– ಎರಡನೇ ಅವಧಿ
೩) ಜನವರಿ, ಫೆಬ್ರವರಿ, ಮಾರ್ಚ್– ಮೂರನೇ ಅವಧಿ.

ಮೇಲ್ಕಂಡ ತ್ರೈಮಾಸಿಕ ಅವಧಿಗೆ ಮಾತ್ರ ಪಾಠಪ್ರವಚನ ಹಾಗೂ ಮೌಲ್ಯಮಾಪನಗಳು ನಡೆದು, ಮಕ್ಕಳಿಗೆ ಅಂಕಗಳಿಗೆ ಬದಲು ಗ್ರೇಡಿಂಗ್ ಪದ್ಧತಿಯನ್ನು ಅಳವಡಿಸಲಾಗಿದೆ. ಈ ಬದಲಾವಣೆಯ ನಂತರ ಹಿಂದಿನ ಕ್ರಮದಲ್ಲಿದ್ದ ಕಿರು ಪರೀಕ್ಷೆ, ಮಧ್ಯಂತರ ಹಾಗೂ ವಾರ್ಷಿಕ ಪರೀಕ್ಷೆಗಳು ರದ್ದಾಗಿವೆ. ಮೇಲ್ಕಂಡ ಮೂರು ಅವಧಿಯ ಮೌಲ್ಯಮಾಪನವನ್ನು ಅವಲಂಬಿಸಿ ಮಕ್ಕಳನ್ನು ಮುಂದಿನ ತರಗತಿಗಳಿಗೆ ತೇರ್ಗಡೆ ಮಾಡಲಾಗುತ್ತದೆ.

ಇದೇ ನಿಯಮದಂತೆ ಪ್ರಸ್ತುತ ಜಿಲ್ಲೆಯ ಎಲ್ಲಾ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳು ಕಾರ್ಯನಿರ್ವಹಿಸುತ್ತಿವೆ.

**ಶೈಕ್ಷಣಿಕ ಆಡಳಿತ:** ಮೊದಲಿಗೆ ಜಿಲ್ಲೆಯ ಎಲ್ಲಾ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳು ಒಬ್ಬ ಜಿಲ್ಲಾ ಶಿಕ್ಷಣಾಧಿಕಾರಿ (ಡಿ.ಇ.ಓ)ಯ ಆಡಳಿತದಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ೧೯೬೦ರಲ್ಲಿದ್ದಂತೆ ಇವರಿಗೆ ಸಹಾಯಕರಾಗಿ ಇಬ್ಬರು ಸಹಾಯಕ ಶಿಕ್ಷಣಾಧಿಕಾರಿಗಳು, (ಒಬ್ಬರು ಜಿಲ್ಲಾ ಕೇಂದ್ರದಲ್ಲಿ ಹಾಗೂ ಮತ್ತೊಬ್ಬರು ಚಿಕ್ಕಬಳ್ಳಾಪುರದಲ್ಲಿ), ೧೫ ಮಂದಿ ಶಾಲಾ ಇನ್ಸ್‌ಪೆಕ್ಟರುಗಳು ನಿಯೋಜಿತರಾಗಿದ್ದರು. ಬೆಂಗಳೂರು ವಿಭಾಗದ ಡಿಡಿಪಿಐ ಅವರು ಎಲ್ಲಾ ಹೈಯರ್ ಸೆಕೆಂಡರಿ ಶಾಲೆಗಳ ಉಸ್ತುವಾರಿ ಹೊತ್ತಿದ್ದರು. ಅಲ್ಲದೇ ಜಿಲ್ಲೆಯ ಎಲ್ಲಾ ಪ್ರಶಿಕ್ಷಣ ಸಂಸ್ಥೆಗಳ ಆಡಳಿತಾತ್ಮಕ ಅಧಿಕಾರವನ್ನೂ ಹೊಂದಿದ್ದರು. ಪ್ರಸ್ತುತ (೧೯೯೫ರ ವರೆಗೆ) ಜಿಲ್ಲೆಯ ಶೈಕ್ಷಣಿಕ ಆಡಳಿತ ನಿರ್ವಹಿಸಲು ಒಬ್ಬ ಡಿಡಿಪಿಐ ಇದ್ದು, ಇವರ ಕಛೇರಿಯು ಕೋಲಾರದಲ್ಲಿದ್ದಿತು. ೧೯೯೫ರಲ್ಲಿ ಶಿಕ್ಷಣ ಮಟ್ಟದ ಸುಧಾರಣೆಗಾಗಿ ಹಾಗೂ ಅಧಿಕಾರದ ವಿಕೇಂದ್ರಿಕರಣಕ್ಕಾಗಿ ಜಿಲ್ಲೆಯನ್ನು ಶೈಕ್ಷಣಿಕವಾಗಿ ಎರಡು ವಿಭಾಗಗಳಾಗಿ ವಿಂಗಡಿಸಿ, ಚಿಕ್ಕಬಳ್ಳಾಪುರ ವಿಭಾಗಕ್ಕೆ ಪ್ರತ್ಯೇಕ ಡಿಡಿಪಿಐ ಹಾಗೂ ಕೋಲಾರ ವಿಭಾಗಕ್ಕೆ ಪ್ರತ್ಯೇಕ ಡಿಡಿಪಿಐ ನೇಮಕಗೊಂಡಿದ್ದಾರೆ.

ಕೋಲಾರ ವಿಭಾಗದಡಿ ಆರು ತಾಲೂಕುಗಳಾದ ಕೋಲಾರ, ಬಂಗಾರುಪೇಟೆ, ಕೆ. ಜಿ. ಎಫ್, ಮಾಲೂರು, ಮುಳಬಾಗಿಲು ಹಾಗೂ ಶ್ರೀನಿವಾಸಪುರ ಮತ್ತು ಚಿಕ್ಕಬಳ್ಳಾಪುರ ವಿಭಾಗದಡಿ ಚಿಕ್ಕಬಳ್ಳಾಪುರ, ಬಾಗೆಪಲ್ಲಿ, ಚಿಂತಾಮಣಿ, ಗೌರಿಬಿದನೂರು, ಶಿಡ್ಲಘಟ್ಟ ಹಾಗೂ ಗುಡಿಬಂಡೆ ಇವುಗಳು ಸೇರಿದ್ದು, ಮುಂದಿನ ಕೋಷ್ಟಕಗಳಲ್ಲಿ ೨೦೦೩–೦೪ನೇ ಸಾಲಿಗೆ ಅವುಗಳಲ್ಲಿನ ಶೈಕ್ಷಣಿಕ ವಿವರಗಳನ್ನು ಕೋಲಾರ ಹಾಗೂ ಚಿಕ್ಕಬಳ್ಳಾಪುರ ವಿಭಾಗಗಳಿಗೆ ಪ್ರತ್ಯೇಕವಾಗಿ ನೀಡಲಾಗಿದೆ.

**ಕೋಷ್ಟಕ: ೧೩.೧೨**

**ಕಿರಿಯ ಪ್ರಾಥಮಿಕ ಶಾಲೆಗಳ ವಿವರ**

| ಕ್ರಮ ಸಂಖ್ಯೆ | ತಾಲ್ಲೂಕು | ಒಟ್ಟು ಶಾಲೆಗಳ ಸಂಖ್ಯೆ | | | ಒಟ್ಟು ಮಕ್ಕಳ ಸಂಖ್ಯೆ | | ಒಟ್ಟು ಬೋಧಕ ಸಿಬ್ಬಂದಿ | |
|---|---|---|---|---|---|---|---|---|
| | | ಸರ್ಕಾರಿ | ಅನುದಾನಿತ | ಅನುದಾನ ರಹಿತ | ಗಂಡು | ಹೆಣ್ಣು | ಗಂಡು | ಹೆಣ್ಣು |
| ೧ | ಕೋಲಾರ | ೨೩೫ | – | ೯ | ೧೯,೯೯೮ | ೧೯,೯೦೫ | ೨೫೧ | ೨೮೭ |
| ೨ | ಬಂಗಾರಪೇಟೆ | ೨೩೪ | – | ೬ | ೧೨,೭೪೩ | ೧೨,೨೭೯ | ೨೩೮ | ೨೫೬ |
| ೩ | ಕೆ. ಜಿ. ಎಫ್ | ೭೭ | ೬ | ೨೨ | ೮,೨೩೩ | ೯,೦೦೯ | ೩೭ | ೧೭೭ |
| ೪ | ಮಾಲೂರು | ೨೩೦ | – | ೪ | ೧೨,೪೨೨ | ೧೧,೮೪೩ | ೩೩೪ | ೩೨೬ |
| ೫ | ಮುಳಬಾಗಿಲು | ೨೭೫ | – | ೪ | ೧೩,೯೮೪ | ೧೩,೭೧೧ | ೩೦೦ | ೧೭೩ |
| ೬ | ಶ್ರೀನಿವಾಸಪುರ | ೨೨೯ | – | ೩೦ | ೧೦,೦೪೩ | ೧೦,೧೫೭ | ೩೨೧ | ೧೯೫ |
| | **ಒಟ್ಟು** | **೧,೨೮೦** | **೬** | **೭೫** | **೭೭,೪೨೩** | **೭೬,೯೦೪** | **೧,೪೮೧** | **೧,೪೧೪** |

ಆಧಾರ: ಡಿ.ಡಿ.ಪಿ.ಐ. ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ಕೋಲಾರ.

## ಕೋಷ್ಟಕ ೧೩.೧೩
## ಹಿರಿಯ ಪ್ರಾಥಮಿಕ ಶಾಲೆಗಳ ವಿವರ

| ಕ್ರಮ ಸಂಖ್ಯೆ | ತಾಲ್ಲೂಕು | ಒಟ್ಟು ಶಾಲೆಗಳ ಸಂಖ್ಯೆ | | | ಒಟ್ಟು ಮಕ್ಕಳ ಸಂಖ್ಯೆ | | ಒಟ್ಟು ಬೋಧಕ ಸಿಬ್ಬಂದಿ | |
|---|---|---|---|---|---|---|---|---|
| | | ಸರ್ಕಾರಿ | ಅನುದಾನಿತ | ಅನುದಾನ ರಹಿತ | ಗಂಡು | ಹೆಣ್ಣು | ಗಂಡು | ಹೆಣ್ಣು |
| ೦೧ | ಕೋಲಾರ | ೧೪೯ | ೮ | ೩೩ | ೭,೦೭೧ | ೬,೮೯೦ | ೫೩೯ | ೭೪೨ |
| ೦೨ | ಬಂಗಾರಪೇಟೆ | ೮೨ | ೩ | ೨೬ | ೪,೯೨೩ | ೪,೫೬೦ | ೨೫೪ | ೩೨೩ |
| ೦೩ | ಕೆ. ಜಿ. ಎಫ್ | ೪೪ | ೨೦ | ೧೮ | ೩,೨೯೦ | ೩,೫೮೮ | ೧೬೦ | ೫೯೦ |
| ೦೪ | ಮಾಲೂರು | ೮೬ | ೩ | ೨೧ | ೪,೨೬೯ | ೪,೪೫೩ | ೨೨೭ | ೧೫೬ |
| ೦೫ | ಮುಳಬಾಗಿಲು | ೯೮ | ೨ | ೧೫ | ೫,೦೪೯ | ೪,೭೩೪ | ೩೦೯ | ೨೫೭ |
| ೦೬ | ಶ್ರೀನಿವಾಸಪುರ | ೯೫ | ೨ | ೧೦ | ೩,೭೨೦ | ೩,೪೫೯ | ೩೪೫ | ೨೦೦ |
| | ಒಟ್ಟು | ೫೫೪ | ೩೮ | ೧೨೩ | ೨೮,೩೨೨ | ೨೭,೬೮೪ | ೧,೮೩೪ | ೨,೨೬೮ |

ಆಧಾರ: ಡಿ.ಡಿ.ಪಿ.ಐ. ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ಕೋಲಾರ.

## ಕೋಷ್ಟಕ: ೧೩.೧೪
## ಒಂದರಿಂದ ಏಳನೇ ತರಗತಿಯ ತಾಲ್ಲೂಕುವಾರು ಮಕ್ಕಳ ಸಂಖ್ಯೆ

| ಕ್ರ. ಸಂ | ತಾಲೂಕಿನ ಹೆಸರು | ತರಗತಿ–೧ | | ತರಗತಿ–೨ | | ತರಗತಿ–೩ | | ತರಗತಿ–೪ | | ತರಗತಿ–೫ | | ತರಗತಿ–೬ | | ತರಗತಿ–೭ | |
|---|---|---|---|---|---|---|---|---|---|---|---|---|---|---|---|
| | | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು |
| ೧ | ಕೋಲಾರ | ೩,೮೧೧ | ೩,೭೭೧ | ೩,೮೭೧ | ೩,೮೨೬ | ೪,೪೪೬ | ೪,೨೫೮ | ೪,೧೧೮ | ೪,೧೫೭ | ೩,೭೫೨ | ೩,೮೯೩ | ೩,೬೫೦ | ೩,೭೬೧ | ೩,೪೨೧ | ೩,೧೨೯ |
| ೨ | ಬಂಗಾರುಪೇಟೆ | ೨,೩೭೩ | ೨,೨೨೮ | ೨,೬೨೬ | ೨,೫೦೯ | ೨,೭೫೩ | ೨,೬೦೩ | ೨,೩೯೮ | ೨,೫೧೧ | ೨,೫೯೩ | ೨,೪೨೯ | ೨,೫೪೯ | ೨,೪೩೪ | ೨,೩೮೪ | ೨,೧೨೬ |
| ೩ | ಕೆ. ಜಿ. ಎಫ್ | ೧,೫೧೧ | ೧,೬೧೫ | ೧,೬೨೧ | ೧,೭೮೬ | ೧,೭೯೬ | ೧,೯೦೧ | ೧,೬೪೦ | ೧,೯೦೩ | ೧,೬೬೬ | ೧,೮೦೪ | ೧,೬೮೯ | ೧,೮೬೬ | ೧,೬೦೧ | ೧,೭೨೨ |
| ೪ | ಮಾಲೂರು | ೨,೫೦೩ | ೨,೨೬೭ | ೨,೪೫೩ | ೨,೨೩೮ | ೨,೬೦೫ | ೨,೪೯೯ | ೨,೪೦೧ | ೨,೩೮೩ | ೨,೪೬೦ | ೨,೪೫೬ | ೧,೯೯೮ | ೨,೩೨೧ | ೨,೨೭೧ | ೨,೧೩೨ |
| ೫ | ಮುಳಬಾಗಿಲು | ೨,೬೯೧ | ೨,೬೨೯ | ೨,೪೯೮ | ೨,೪೭೩ | ೩,೦೯೯ | ೩,೦೬೮ | ೨,೯೯೭ | ೨,೮೪೦ | ೨,೬೯೯ | ೨,೭೦೧ | ೨,೬೯೨ | ೨,೫೨೯ | ೨,೩೫೭ | ೨,೨೦೫ |
| ೬ | ಶ್ರೀನಿವಾಸಪುರ | ೨,೧೧೧ | ೧,೯೪೨ | ೧,೯೩೦ | ೧,೯೯೭ | ೨,೧೨೬ | ೨,೩೦೫ | ೧,೯೩೯ | ೧,೯೮೦ | ೧,೯೩೭ | ೧,೯೩೪ | ೧,೯೦೯ | ೧,೮೦೯ | ೧,೮೧೧ | ೧,೬೫೦ |
| | ಒಟ್ಟು | ೧೪,೯೯೯ | ೧೪,೪೫೨ | ೧೪,೯೯೯ | ೧೪,೮೨೮ | ೧೬,೮೨೫ | ೧೬,೬೩೩ | ೧೫,೪೯೩ | ೧೫,೭೭೪ | ೧೫,೧೦೭ | ೧೫,೨೧೭ | ೧೪,೪೭೭ | ೧೪,೭೨೦ | ೧೩,೮೪೫ | ೧೨,೯೬೪ |

ಆಧಾರ: ಡಿ.ಡಿ.ಪಿ.ಐ. ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ಕೋಲಾರ.

## ಕೋಷ್ಟಕ ೧೩.೧೫
## ೨೦೦೪ರಲ್ಲಿದ್ದಂತೆ ಸರಕಾರಿ, ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳಲ್ಲಿ ಒಂದರಿಂದ ಏಳರವರೆಗೆ ಹಾಗೂ ಹತ್ತರವರೆಗೆ ಮಕ್ಕಳ ವಿವರಗಳನ್ನು ನೀಡಲಾಗಿದೆ.

| ತರಗತಿ | ಒಟ್ಟು ದಾಖಲಾತಿ | | | | ಒಟ್ಟು ದಾಖಲಾತಿಯಲ್ಲಿ ಹೆಣ್ಣು ಮಕ್ಕಳ ಸಂಖ್ಯೆ | | | |
|---|---|---|---|---|---|---|---|---|
| | ಸರ್ಕಾರಿ | ಅನುದಾನಿತ | ಅನುದಾನರಹಿತ | ಒಟ್ಟು | ಸರ್ಕಾರಿ | ಅನುದಾನಿತ | ಅನುದಾನರಹಿತ | ಒಟ್ಟು |
| ೧ | ೨ | ೩ | ೪ | ೫ | ೬ | ೭ | ೮ | ೯ |
| ಒಂದು | ೨೦೦೦೪ | ೧೩೩೦ | ೬೮೬೧ | ೨೮೧೯೫ | ೧೦೧೯೯ | ೭೩೪ | ೨೯೬೧ | ೧೩೮೯೪ |
| ಎರಡು | ೨೧೯೧೫ | ೧೪೧೫ | ೬೪೮೨ | ೨೯೮೧೨ | ೧೧೦೨೮ | ೭೮೧ | ೨೮೭೮ | ೧೪೬೮೭ |
| ಮೂರು | ೨೧೬೦೯ | ೧೫೩೬ | ೬೩೬೪ | ೨೯೫೦೯ | ೧೦೯೪೯ | ೮೧೧ | ೨೭೮೬ | ೧೪೫೪೬ |
| ನಾಲ್ಕು | ೨೪೫೬೮ | ೧೬೬೯ | ೬೮೯೦ | ೩೩೧೨೭ | ೧೩೦೯೩ | ೯೧೪ | ೨೬೭೭ | ೧೬೬೮೪ |
| ಐದು | ೨೩೮೦೬ | ೧೭೪೬ | ೫೬೦೭ | ೩೧೧೫೯ | ೧೨೦೪೦ | ೯೬೦ | ೩೨೭೩ | ೧೬೨೭೩ |

| ೧ | ೨ | ೩ | ೪ | ೫ | ೬ | ೭ | ೮ | ೯ |
|---|---|---|---|---|---|---|---|---|
| ಆರು | ೨೧೫೮೯ | ೧೪೬೧ | ೫೮೯೦ | ೨೮೮೪೦ | ೧೦೮೮೦ | ೧೧೬ | ೨೫೯೯ | ೧೪೨೫ |
| ಏಳು | ೨೨೩೫೪ | ೧೯೮೪ | ೫೧೫೫ | ೨೯೪೯೩ | ೧೧೨೦೯ | ೧೧೩ | ೨೧೮೦ | ೧೪೯೨ |
| ಎಂಟು | ೧೪೬೬೪ | ೫೧೫೩ | ೪೭೧೫ | ೨೪೫೩೨ | ೭೧೧೪ | ೨೨೦೭ | ೧೮೧೪ | ೧೬೩೫ |
| ಒಂಬತ್ತು | ೧೨೩೯೬ | ೫೨೭೦ | ೪೫೯೨ | ೨೨೨೫೮ | ೬೦೯೫ | ೨೬೬೪ | ೧೮೨೮ | ೧೦೫೮ |
| ಹತ್ತು | ೯೭೯೧ | ೪೫೫೭ | ೩೯೨೪ | ೧೮೨೭೨ | ೪೭೪೧ | ೨೫೧೮ | ೧೫೩೩ | ೮೨೯೨ |
| ಒಂದರಿಂದ ಐದರ–ವರೆಗಿನ ಒಟ್ಟು | ೧೧೨೭೦೨ | ೭೬೯೬ | ೩೧೪೮೪ | ೧೫೧೮೦೨ | ೫೭೩೮೯ | ೪೨೦೦ | ೧೪೫೨೫ | ೨೬೦೮೪ |
| ಆರು–ಏಳು ಒಟ್ಟು | ೪೩೯೪೩ | ೩೪೪೫ | ೧೧೦೪೫ | ೫೮೩೩೩ | ೨೨೦೮೯ | ೨೨೯ | ೪೭೭೯ | ೨೯೧೭ |
| ಒಂದರಿಂದ ಏಳರ–ವರೆಗಿನ ಒಟ್ಟು | ೧೫೬೬೪೫ | ೧೧೧೪೧ | ೪೨೫೨೯ | ೨೧೦೧೩೫ | ೭೯೪೭೮ | ೬೨೮೯ | ೧೯೩೦೪ | ೧೦೪೮೧ |
| ಎಂಟರಿಂದ ಹತ್ತರ–ವರೆಗಿನ ಒಟ್ಟು | ೩೬೮೫೧ | ೧೪೯೮೦ | ೧೩೨೩೧ | ೬೫೧೬೨ | ೧೭೯೫೦ | ೭೮೮೯ | ೫೧೭೫ | ೩೧೧೪ |

ಆಧಾರ: ಡಿ.ಡಿ.ಪಿ.ಐ. ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ಕೋಲಾರ.

**ಕೋಷ್ಟಕ ೧೩.೧೬: ಉಚಿತ ಪಠ್ಯ ಪುಸ್ತಕ ಫಲಾನುಭವಿಗಳ ತಾಲ್ಲೂಕುವಾರು ವಿವರ.**

(೧ ರಿಂದ ೭ನೇ ತರಗತಿಯ ಗಂಡು ಮತ್ತು ಹೆಣ್ಣು ಎಲ್ಲಾ ಮಕ್ಕಳಿಗೆ ಮತ್ತು ೮, ೯, ಮತ್ತು ೧೦ನೇ ತರಗತಿಯ ಎಲ್ಲಾ ಹೆಣ್ಣು ಮಕ್ಕಳಿಗೆ)

| ಕ್ರ. ಸಂ. | ತಾಲ್ಲೂಕು | ಒಟ್ಟು ಫಲಾಭವಿಗಳ ಸಂಖ್ಯೆ | |
|---|---|---|---|
| | | ಗಂಡು | ಹೆಣ್ಣು |
| ೧ | ಕೋಲಾರ | ೧೮,೮೪೩ | ೨೨,೭೩೯ |
| ೨ | ಬಂಗಾರುಪೇಟೆ | ೧೩,೪೦೬ | ೧೬,೩೮೯ |
| ೩ | ಕೆ. ಜಿ. ಎಫ್. | ೬,೧೯೭ | ೭,೬೮೭ |
| ೪ | ಮಾಲೂರು | ೧೩,೬೭೯ | ೧೭,೮೧೧ |
| ೫ | ಮುಳಬಾಗಿಲು | ೧೫,೮೩೭ | ೧೭,೬೨೯ |
| ೬ | ಶ್ರೀನಿವಾಸಪುರ | ೧೧,೦೬೩ | ೧೩,೮೬೪ |

**ಕೋಷ್ಟಕ:೧೩.೧೭: ಉಚಿತ ಸಮವಸ್ತ್ರ ಫನಾನುಭವಿಗಳ ತಾಲ್ಲೂಕುವಾರು ವಿವರ**

(೧ ರಿಂದ ೭ನೇ ತರಗತಿಯ ಗಂಡು ಮತ್ತು ಹೆಣ್ಣು ಎಲ್ಲಾ ಮಕ್ಕಳಿಗೆ ಮತ್ತು ೮, ೯, ಮತ್ತು ೧೦ನೇ ತರಗತಿಯ ಎಲ್ಲಾ ಹೆಣ್ಣು ಮಕ್ಕಳಿಗೆ)

| ಕ್ರ. ಸಂ. | ತಾಲ್ಲೂಕು | ಒಟ್ಟು ಫಲಾಭವಿಗಳ ಸಂಖ್ಯೆ | |
|---|---|---|---|
| | | ಗಂಡು | ಹೆಣ್ಣು |
| ೧ | ಕೋಲಾರ | ೧೪,೧೯೦ | ೧೭,೪೯೦ |
| ೨ | ಬಂಗಾರುಪೇಟೆ | ೧೬,೬೦೩ | ೧೯,೭೪೦ |
| ೩ | ಕೆ. ಜಿ. ಎಫ್. | ೧೨,೨೨೦ | ೧೭,೧೯೦ |
| ೪ | ಮಾಲೂರು | ೬,೬೦೦ | ೮,೧೦೦ |
| ೫ | ಮುಳಬಾಗಿಲು | ೧೯,೩೨೦ | ೨೪,೫೨೦ |
| ೬ | ಶ್ರೀನಿವಾಸಪುರ | ೧೫,೯೭೦ | ೧೭,೮೮೦ |

### ಕೋಷ್ಟಕ:೧೩.೧೮: ಉಚಿತ ಮಧ್ಯಾಹ್ನ ಭೋಜನ ಫಲಾನುಭವಿಗಳ ತಾಲ್ಲೂಕುವಾರು ವಿವರ (೧ ರಿಂದ ೫ನೇ ತರಗತಿಯ ಎಲ್ಲರಿಗೂ)

| ಕ್ರ. ಸಂ. | ತಾಲ್ಲೂಕು | ಒಟ್ಟು ಫಲಾಭವಿಗಳ ಸಂಖ್ಯೆ | |
|---|---|---|---|
| | | ಗಂಡು | ಹೆಣ್ಣು |
| ೧ | ಕೋಲಾರ | ೧೦,೫೬೦ | ೧೦,೯೯೦ |
| ೨ | ಬಂಗಾರುಪೇಟೆ | ೧೧,೯೬೦ | ೧೨,೨೪೦ |
| ೩ | ಕೆ. ಜಿ. ಎಫ್. | ೮,೭೩೦ | ೮,೯೨೦ |
| ೪ | ಮಾಲೂರು | ೪,೮೪೦ | ೪,೯೭೦ |
| ೫ | ಮುಳಬಾಗಿಲು | ೧೪,೨೭೦ | ೧೫,೦೪೦ |
| ೬ | ಶ್ರೀನಿವಾಸಪುರ | ೧೦,೦೮೦ | ೧೦,೩೭೦ |

## ಚಿಕ್ಕಬಳ್ಳಾಪುರ ವಿಭಾಗ

### ಕೋಷ್ಟಕ: ೧೩.೧೯: ಕಿರಿಯ ಪ್ರಾಥಮಿಕ ಶಾಲೆಗಳ ವಿವರ

| ಕ್ರಮ ಸಂಖ್ಯೆ | ತಾಲ್ಲೂಕು | ಒಟ್ಟು ಶಾಲೆಗಳ ಸಂಖ್ಯೆ | | | ಒಟ್ಟು ಮಕ್ಕಳ ಸಂಖ್ಯೆ | | ಒಟ್ಟು ಬೋಧಕ ಸಿಬ್ಬಂದಿ | |
|---|---|---|---|---|---|---|---|---|
| | | ಸರ್ಕಾರಿ | ಅನುದಾನಿತ | ಅನುದಾನ ರಹಿತ | ಗಂಡು | ಹೆಣ್ಣು | ಗಂಡು | ಹೆಣ್ಣು |
| ೧ | ಚಿಕ್ಕಬಳ್ಳಾಪುರ | ೧೬೪ | ೧ | ೧೫ | ೧೦,೩೬೬ | ೯,೯೯೮ | ೧೫೧ | ೨೨೮ |
| ೨ | ಬಾಗೇಪಲ್ಲಿ | ೨೩೮ | – | ೬೦ | ೮,೧೭೩ | ೯,೬೭೮ | ೩೦೪ | ೧೫೫ |
| ೩ | ಚಿಂತಾಮಣಿ | ೨೫೪ | – | ೧೦ | ೧೬,೪೨೮ | ೧೫,೮೧೧ | ೩೯೭ | ೨೮೬ |
| ೪ | ಗೌರಿಬಿದನೂರು | ೨೦೮ | – | ೪೨ | ೧೩,೭೮೯ | ೧೨,೯೧೦ | ೪೦೦ | ೨೭೬ |
| ೫ | ಶಿಡ್ಲಘಟ್ಟ | ೧೫೯ | – | ೧೩ | ೧೧,೨೯೬ | ೧೦,೭೫೬ | ೨೩೦ | ೧೦೬ |
| ೬ | ಗುಡಿಬಂಡೆ | ೭೩ | – | ೧೨ | ೨,೭೦೭ | ೨,೨೫೯ | ೧೦೩ | ೩೭ |
| | ಒಟ್ಟು | ೧,೦೯೬ | ೧ | ೧೫೨ | ೬೨,೭೬೪ | ೬೧,೬೧೨ | ೧,೫೯೫ | ೧,೦೨೮ |

### ಕೋಷ್ಟಕ ೧೩.೨೦: ಹಿರಿಯ ಪ್ರಾಥಮಿಕ ಶಾಲೆಗಳ ವಿವರ

| ಕ್ರಮ ಸಂಖ್ಯೆ | ತಾಲ್ಲೂಕು | ಒಟ್ಟು ಶಾಲೆಗಳ ಸಂಖ್ಯೆ | | | ಒಟ್ಟು ಮಕ್ಕಳ ಸಂಖ್ಯೆ | | ಒಟ್ಟು ಬೋಧಕ ಸಿಬ್ಬಂದಿ | |
|---|---|---|---|---|---|---|---|---|
| | | ಸರ್ಕಾರಿ | ಅನುದಾನಿತ | ಅನುದಾನ ರಹಿತ | ಗಂಡು | ಹೆಣ್ಣು | ಗಂಡು | ಹೆಣ್ಣು |
| ೧ | ಚಿಕ್ಕಬಳ್ಳಾಪುರ | ೬೪ | ೬ | ೧೭ | ೪,೧೨೩ | ೩,೯೦೩ | ೧೮೪ | ೧೨ |
| ೨ | ಬಾಗೇಪಲ್ಲಿ | ೬೨ | ೧ | ೨೯ | ೩,೨೯೫ | ೩,೪೮೯ | ೨೦೭ | ೧೨೮ |
| ೩ | ಚಿಂತಾಮಣಿ | ೧೯ | ೭ | ೫೧ | ೬,೦೬೩ | ೫,೫೦೩ | ೨೦೪ | ೨೨೦ |
| ೪ | ಗೌರಿಬಿದನೂರು | ೧೦೩ | ೬ | ೨೧ | ೫,೬೬೫ | ೫,೨೫೪ | ೨೬೫ | ೨೨೦ |
| ೫ | ಶಿಡ್ಲಘಟ್ಟ | ೮೯ | ೪ | ೩೭ | ೫,೨೫೪ | ೩,೯೧೫ | ೩೧೦ | ೧೬೪ |
| ೬ | ಗುಡಿಬಂಡೆ | ೨೯ | – | ೨ | ೩,೯೧೫ | ೧,೦೯೯ | ೧೧೧ | ೬೭ |
| | ಒಟ್ಟು | ೩೬೭ | ೨೪ | ೧೫೭ | ೨೮,೪೧೫ | ೨೩,೧೧೩ | ೧,೨೮೧ | ೮೬೧ |

**ಕೋಷ್ಟಕ: ೧೩.೨೧**

**ಒಂದರಿಂದ ಏಳನೇ ತರಗತಿಯ ತಾಲ್ಲೂಕುವಾರು ಮಕ್ಕಳ ಸಂಖ್ಯೆ**

| ಕ್ರ. ಸಂ | | | ಚಿಕ್ಕಬಳ್ಳಾಪುರ | ಬಾಗೇಪಲ್ಲಿ | ಚಿಂತಾಮಣಿ | ಗೌರಿಬಿದನೂರು | ಶಿಡ್ಲಘಟ್ಟ | ಗುಡಿಬಂಡೆ | ಒಟ್ಟು |
|---|---|---|---|---|---|---|---|---|---|
| ೧ | ತರಗತಿ–೧ | ಗಂಡು | ೨,೦೮೦ | ೧,೬೯೫ | ೩,೨೫೫ | ೨,೫೫೦ | ೨,೧೮೬ | ೪೩೩ | ೧೨,೧೯೯ |
| | | ಹೆಣ್ಣು | ೧,೮೭೦ | ೨,೦೨೦ | ೨,೯೪೬ | ೨,೪೨೮ | ೧,೯೫೫ | ೪೪೩ | ೧೧,೬೬೨ |
| ೨ | ತರಗತಿ–೨ | ಗಂಡು | ೨,೦೫೩ | ೧,೫೦೩ | ೩,೨೮೫ | ೨,೭೫೦ | ೨,೧೬೩ | ೫೩೭ | ೧೨,೨೯೧ |
| | | ಹೆಣ್ಣು | ೧,೯೧೧ | ೧,೮೩೨ | ೨,೯೯೫ | ೨,೫೩೧ | ೨,೧೨೮ | ೪೩೩ | ೧೧,೮೩೦ |
| ೩ | ತರಗತಿ–೩ | ಗಂಡು | ೨,೨೫೬ | ೧,೮೦೧ | ೩,೫೩೯ | ೨,೯೭೪ | ೨,೪೪೭ | ೫೮೧ | ೧೩,೫೮೮ |
| | | ಹೆಣ್ಣು | ೨,೦೭೭ | ೨,೧೫೭ | ೩,೩೮೧ | ೨,೮೦೫ | ೨,೨೬೭ | ೫೬೬ | ೧೩,೨೫೩ |
| ೪ | ತರಗತಿ–೪ | ಗಂಡು | ೨,೦೨೮ | ೧,೬೨೬ | ೩,೨೫೧ | ೨,೮೬೮ | ೨,೩೦೦ | ೫೨೬ | ೧೨,೫೯೯ |
| | | ಹೆಣ್ಣು | ೧,೯೧೭ | ೧,೮೯೪ | ೩,೧೭೦ | ೨,೬೦೭ | ೨,೩೧೨ | ೫೧೨ | ೧೨,೪೧೨ |
| ೫ | ತರಗತಿ–೫ | ಗಂಡು | ೨,೧೧೦ | ೧,೫೪೮ | ೩,೧೮೯ | ೨,೬೪೭ | ೨,೨೦೦ | ೬೪೯ | ೧೨,೩೪೩ |
| | | ಹೆಣ್ಣು | ೨,೦೬೨ | ೧,೭೭೫ | ೩,೨೨೮ | ೨,೫೩೯ | ೨,೦೯೪ | ೫೯೬ | ೧೨,೨೯೪ |
| ೬ | ತರಗತಿ–೬ | ಗಂಡು | ೨,೧೪೬ | ೧,೮೫೬ | ೩,೦೬೭ | ೩,೦೪೫ | ೧,೯೬೬ | ೬೩೮ | ೧೨,೭೧೮ |
| | | ಹೆಣ್ಣು | ೨,೦೭೫ | ೨,೦೧೮ | ೨,೯೨೫ | ೨,೮೧೬ | ೨,೦೯೫ | ೬೧೬ | ೧೨,೫೪೫ |
| ೭ | ತರಗತಿ–೭ | ಗಂಡು | ೨,೦೧೩ | ೧,೫೩೯ | ೨,೯೯೭ | ೨,೬೨೦ | ೧,೪೪೮ | ೪೮೬ | ೧೧,೧೦೩ |
| | | ಹೆಣ್ಣು | ೧,೭೯೨ | ೧,೪೫೧ | ೨,೫೭೭ | ೨,೪೩೮ | ೧,೮೨೦ | ೪೮೩ | ೧೦,೫೩೧ |

**ಕೋಷ್ಟಕ ೧೩.೨೨**

**ಉಚಿತ ಪಠ್ಯ ಪುಸ್ತಕ ಫಲಾನುಭವಿಗಳ ತಾಲ್ಲೂಕುವಾರು ವಿವರ.**

(೧ ರಿಂದ ೭ನೇ ತರಗತಿಯ ಗಂಡು ಮತ್ತು ಹೆಣ್ಣು ಎಲ್ಲಾ ಮಕ್ಕಳಿಗೆ ಮತ್ತು ೮, ೯, ಮತ್ತು ೧೦ನೇ ತರಗತಿಯ ಎಲ್ಲಾ ಹೆಣ್ಣು ಮಕ್ಕಳಿಗೆ)

| ಕ್ರ. ಸಂ. | ತಾಲ್ಲೂಕು | ಒಟ್ಟು ಫಲಾಭವಿಗಳ ಸಂಖ್ಯೆ | |
|---|---|---|---|
| | | ಗಂಡು | ಹೆಣ್ಣು |
| ೧ | ಚಿಕ್ಕಬಳ್ಳಾಪುರ | ೧೧,೨೫೦ | ೧೨,೭೫೯ |
| ೨ | ಬಾಗೇಪಲ್ಲಿ | ೧೧,೨೩೦ | ೧೨,೮೩೦ |
| ೩ | ಚಿಂತಾಮಣಿ | ೧೪,೬೫೪ | ೯,೧೨೪ |
| ೪ | ಗೌರಿಬಿದನೂರು | ೧೭,೧೦೪ | ೯,೭೫೧ |
| ೫ | ಶಿಡ್ಲಘಟ್ಟ | ೩,೪೬೮ | ೪,೫೧೪ |
| ೬ | ಗುಡಿಬಂಡೆ | ೧೧,೮೪೪ | ೧೩,೦೪೨ |
| | **ಒಟ್ಟು** | **೬೬,೫೫೦** | **೮೨,೦೨೦** |

**ಕೋಷ್ಟಕ:೧೩.೨೩**

**ಉಚಿತ ಸಮವಸ್ತ್ರ ಫಲಾನುಭವಿಗಳ ತಾಲ್ಲೂಕುವಾರು ವಿವರ**

(೧ ರಿಂದ ೭ನೇ ತರಗತಿಯ ಗಂಡು ಮತ್ತು ಹೆಣ್ಣು ಎಲ್ಲಾ ಮಕ್ಕಳಿಗೆ ಮತ್ತು ೮, ೯, ಮತ್ತು ೧೦ನೇ ತರಗತಿಯ ಎಲ್ಲಾ ಹೆಣ್ಣು ಮಕ್ಕಳಿಗೆ)

| ಕ್ರ. ಸಂ. | ತಾಲ್ಲೂಕು | ಒಟ್ಟು ಫಲಾಭವಿಗಳ ಸಂಖ್ಯೆ | |
|---|---|---|---|
| | | ಗಂಡು | ಹೆಣ್ಣು |
| ೧ | ಚಿಕ್ಕಬಳ್ಳಾಪುರ | ೧೦,೨೫೦ | ೧೨,೭೫೯ |
| ೨ | ಬಾಗೇಪಲ್ಲಿ | ೧೦,೨೩೦ | ೧೨,೮೩೦ |
| ೩ | ಚಿಂತಾಮಣಿ | ೧೪,೬೨೪ | ೯,೧೨೪ |
| ೪ | ಗೌರಿಬಿದನೂರು | ೧೭,೧೦೪ | ೯,೭೫೧ |
| ೫ | ಶಿಡ್ಲಘಟ್ಟ | ೩,೪೬೮ | ೪,೫೧೪ |
| ೬ | ಗುಡಿಬಂಡೆ | ೧೦,೮೪೪ | ೧೩,೦೪೨ |
| | ಒಟ್ಟು | ೬೬,೨೫೦ | ೮೨,೦೨೦ |

**ಕೋಷ್ಟಕ:೧೩.೨೪**

**ಉಚಿತ ಮಧ್ಯಾಹ್ನ ಭೋಜನ ಫಲಾನುಭವಿಗಳ ತಾಲ್ಲೂಕುವಾರು ವಿವರ**

(೧ ರಿಂದ ೫ನೇ ತರಗತಿಯ ಗಂಡು ಮತ್ತು ಹೆಣ್ಣು ಎಲ್ಲಾ ಮಕ್ಕಳಿಗೆ ಮಾತ್ರ)

| ಕ್ರ. ಸಂ. | ತಾಲ್ಲೂಕು | ಒಟ್ಟು ಫಲಾಭವಿಗಳ ಸಂಖ್ಯೆ | |
|---|---|---|---|
| | | ಗಂಡು | ಹೆಣ್ಣು |
| ೧ | ಚಿಕ್ಕಬಳ್ಳಾಪುರ | ೬,೪೩೫ | ೮,೦೬೬ |
| ೨ | ಬಾಗೇಪಲ್ಲಿ | ೮,೪೬೬ | ೭,೯೯೬ |
| ೩ | ಚಿಂತಾಮಣಿ | ೧೦,೯೩೫ | ೧೧,೫೯೦ |
| ೪ | ಗೌರಿಬಿದನೂರು | ೯,೮೨೪ | ೧೩,೯೨೩ |
| ೫ | ಶಿಡ್ಲಘಟ್ಟ | ೨,೩೩೨ | ೨,೬೭೯ |
| ೬ | ಗುಡಿಬಂಡೆ | ೭,೭೮೮ | ೮,೭೩೮ |
| | **ಒಟ್ಟು** | **೪೫,೭೮೦** | **೫೨,೯೯೨** |

ಆಧಾರ: ಡಿ.ಡಿ.ಪಿ.ಐ. ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ಕೋಲಾರ.

## ಮೆಥೊಡಿಸ್ಟ್ ಮಿಷನ್ ಶಾಲೆ

ಜಿಲ್ಲೆಯಲ್ಲಿ ಭೀಕರ ಕ್ಷಾಮದ ಸಮಯವಾದ ೧೮೭೬ರಲ್ಲಿ ಲಂಡನ್ ಮಿಷನರಿ ಸಂಸ್ಥೆಯು ಹೆಣ್ಣುಮಕ್ಕಳಿಗಾಗಿಯೇ 'ಹೆಣ್ಣು ಮಕ್ಕಳ ಅಬಲಾಶ್ರಮ' ಒಂದನ್ನು ಪ್ರಾರಂಭಿಸಿ, ಅದರಲ್ಲಿ ಅವರಿಗೆ ಪ್ರಾಥಮಿಕ ಮೂರು 'ಆರ್' ಗಳನ್ನು (ರೀಡಿಂಗ್, ರೈಟಿಂಗ್, ಅರಿಥ್‌ಮೆಟಿಕ್) ಬೋಧಿಸುತ್ತಿತ್ತು. ೧೮೯೦ರಲ್ಲಿ ಇದನ್ನು ಮೆಥೊಡಿಸ್ಟ್ ಸಂಸ್ಥೆಯ ವಶಕ್ಕೆ ನೀಡಲಾಯಿತು. ಇದು ನಂತರ 'ಮೆಥೊಡಿಸ್ಟ್ ಎಪಿಸ್ಕೋಪಲ್ ಮಿಷನ್' ಎಂಬ ಹೆಸರಿನಲ್ಲಿ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿತು. ಅದು 'ಎಂ.ಇ.ಎಂ.' ಶಾಲೆ ಎಂದು ಜನಪ್ರಿಯವಾಗಿದ್ದಿತು. ಸಾರ್ವಜನಿಕರ ಒತ್ತಾಯದ ಮೇರೆಗೆ ಈ ಶಾಲೆ ೧೯೨೩ರಲ್ಲಿ ಮಾಧ್ಯಮಿಕ ಶಾಲೆಯಾಗಿಯೂ, ತದನಂತೆ ಪ್ರೌಢಶಾಲೆಯಾಗಿಯೂ ಮಾರ್ಪಟ್ಟು, ಇಲ್ಲಿ ಪ್ರವೇಶಬಯಸುವ ಕ್ರಿಶ್ಚಿಯನ್ ಹೆಣ್ಣುಮಕ್ಕಳಿಗೆ ಒಂದು ವಿದ್ಯಾರ್ಥಿ

ನಿಯಲಯವನ್ನೂ ಪ್ರಾರಂಭಿಸಿತು. ಪ್ರಸ್ತುತ ಒಂದನೇ ತರಗತಿಯಿಂದ ಏಳರವರೆಗೆ ಸಹ ಶಿಕ್ಷಣವನ್ನು ಪ್ರೌಢಶಾಲೆ ಹಾಗೂ ಪದವಿಪೂರ್ವ ಸಂಸ್ಥೆಗಳಲ್ಲಿ ಹೆಣ್ಣು ಮಕ್ಕಳಿಗೆ ಮಾತ್ರ ಪ್ರವೇಶವನ್ನು ಕಲ್ಪಿಸಿರುವ ಈ ಸಂಸ್ಥೆಯಲ್ಲಿ ೨೦೦೪ರ ಅಂತ್ಯಕ್ಕೆ ಒಟ್ಟು ೩,೦೦೦ ಮಕ್ಕಳು ವ್ಯಾಸಂಗ ಮಾಡುತ್ತಿದ್ದು, ಒಟ್ಟು ಬೋಧಕ ಸಿಬ್ಬಂದಿ ಸಂಖ್ಯೆ ೭೦ ಆಗಿದ್ದಿತು.

**ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಗಳು:**

ಕರ್ನಾಟಕ ವಸತಿ ಶೈಕ್ಷಣಿಕ ಸಂಸ್ಥೆಯ ಆಡಳಿತದಡಿ ೧೯೯೫ರಲ್ಲಿ ಜಿಲ್ಲೆಯ ಚಿಂತಾಮಣಿ ಬಳಿ ಇಂತಹ ಶಾಲೆ ಪ್ರಾರಂಭವಾಯಿತು. ಜಿಲ್ಲಾ ಪಂಚಾಯ್ತಿ ಅಧ್ಯಕ್ಷರು ಈ ಸಂಸ್ಥೆಯ ಅಧ್ಯಕ್ಷರಾಗಿಯೂ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಸದಸ್ಯ ಕಾರ್ಯದರ್ಶಿಯಾಗಿಯೂ, ಜಿಲ್ಲಾಧಿಕಾರಿ, ಜಿಲ್ಲಾಪಂಚಾಯ್ತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿಲ್ಲಾ ಸರ್ಜನರು, ಹಿಂದುಳಿದ ವರ್ಗಗಳ ಇಲಾಖೆಯ ಜಿಲ್ಲಾಧಿಕಾರಿ, ಮಹಿಳಾ ಮತ್ತು ಮಕ್ಕಳ ಇಲಾಖೆಯ ಸಹಾಯಕ ನಿರ್ದೇಶಕರು ಈ ಸಂಸ್ಥೆಯ ಸದಸ್ಯರಾಗಿ, ಆಡಳಿತ ಮಂಡಳಿಯನ್ನು ನಡೆಸುತ್ತಾರೆ. ಈ ಶಾಲೆಯು ೩೦ ಮಕ್ಕಳೊಡನೆ ಐದನೇ ತರಗತಿ ಮಾತ್ರ ಹೊಂದಿ ಪ್ರಾರಂಭಗೊಂಡು, ೨೦೦೪ರ ಡಿಸೆಂಬರ್‌ನಲ್ಲಿದ್ದಂತೆ ಆರರಿಂದ ಹತ್ತನೇ ತರಗತಿಗಳಲ್ಲಿ ಒಟ್ಟು ೧೯೪ (೧೧೧ ಬಾಲಕರು, ೮೩ ಬಾಲಕಿಯರು) ಮಂದಿ ಮಕ್ಕಳನ್ನು ಮತ್ತು ಎಂಟುಮಂದಿ ಉಪಾಧ್ಯಾಯ ವರ್ಗದವರನ್ನು ಹೊಂದಿದ್ದಿತು.

ಇದೇ ರೀತಿಯ ಇನ್ನೂ ಮೂರು ಶಾಲೆಗಳು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅವುಗಳ ವಿವರಗಳನ್ನು ಈ ಮುಂದೆ ನೀಡಲಾಗಿದೆ. ಆ್ಯಂಡರ್‌ಸನ್‌ಪೇಟೆ, ಕೆ.ಜಿ.ಎಫ್.– ಒಟ್ಟು ಮಕ್ಕಳು ೧೯೭ (೧೧೮ ಗಂಡು, ೭೯ಹೆಣ್ಣು) ಮತ್ತು ಬೋಧಕ ಸಿಬ್ಬಂದಿ ಎಂಟು; ಸೋಮಯಾಜಲಹಳ್ಳಿ, ಶ್ರೀನಿವಾಸಪುರ ತಾಲೂಕು– ಒಟ್ಟು ಮಕ್ಕಳು ೨೪೪ (೧೫೯ ಗಂಡು, ೮೫ ಹೆಣ್ಣು) ಬೋಧಕ ಸಿಬ್ಬಂದಿ ಎಂಟು; ಹಾಗೂ ಮದನಹಳ್ಳಿ ಕ್ರಾಸ್, ಕೋಲಾರ ತಾಲೂಕು–೧೯೬ (೧೧೨ ಗಂಡು, ೮೪ ಹೆಣ್ಣು) ಬೋಧಕ ಸಿಬ್ಬಂದಿ ಒಂಬತ್ತು.

**ಕಿವುಡ, ಮೂಗ, ಬುದ್ಧಿಮಾಂದ್ಯ ಮಕ್ಕಳ ಶಾಲೆಗಳು:**

ದೈಹಿಕ ಅಂಗವಿಕಲತೆಯಿಂದ ತೊಂದರೆಗೊಳಗಾಗಿ ಜನಸಾಮಾನ್ಯರ ಶಾಲೆಗಳಲ್ಲಿ ಕಲಿಯಲು ಅವಕಾಶ ವಂಚಿತರಾದ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ಸರಕಾರ ಪ್ರತ್ಯೇಕ ಶಾಲೆಗಳನ್ನು ನಡೆಸುತ್ತಿದೆ. ಈ ಶಾಲೆಗಳಲ್ಲಿ ಮಕ್ಕಳಿಗೆ ವಿದ್ಯಾದಾನವೇ ಅಲ್ಲದೆ ಊಟೋಪಚಾರಗಳನ್ನು ನೀಡಲಾಗುವುದು. ಜಿಲ್ಲೆಯಲ್ಲಿ ಇಂತಹ ಒಟ್ಟು ೧೩ ಶಾಲೆಗಳು ಕಾರ್ಯನಿರತವಾಗಿವೆ. ಇವುಗಳಲ್ಲಿ ಆರು ಶಾಲೆಗಳು ಕಿವುಡ, ಮೂಗ ಹಾಗೂ ಬುದ್ಧಿಮಾಂದ್ಯ ಮಕ್ಕಳ ಶಾಲೆಗಳಾಗಿದ್ದರೆ, ಉಳಿದವು ವಿಶೇಷ ಶಾಲೆಗಳಾಗಿರುತ್ತವೆ. ಈ ಮುಂದೆ ಇಂತಹ ಪ್ರಮುಖ ಶಾಲೆಗಳನ್ನು ಹೆಸರಿಸಲಾಗಿದೆ.

೧) ಅಂತರಗಂಗಾ ವಿದ್ಯಾ ಸಂಸ್ಥೆಯ ಕಿವುಡ, ಮೂಗ, ಬುದ್ಧಿಮಾಂದ್ಯ ಹಾಗೂ ದೈಹಿಕ ವಿಕಲಾಂಗರ ಶಾಲೆ, ಕೋಲಾರ.

೨) ಜೈಭಾರತ ಕಿವುಡ ಮಕ್ಕಳ ಶಾಲೆ, ಶ್ರೀನಿವಾಸಪುರ.

೩) ಸಿಟಿಜನ್ ವಿಕಲಾಂಗ ಮಕ್ಕಳ ಶಾಲೆ, ಚಿಂತಾಮಣಿ.

೪) ಆಶಾಕಿರಣ ಅಂಗವಿಕಲ ಮಕ್ಕಳ ಶಾಲೆ, ಶಿಡ್ಲಘಟ್ಟ.

೫) ನಂದಾದೀಪ ಅಂಗವಿಕಲ ಮಕ್ಕಳ ಶಾಲೆ, ಮಾಲೂರು.

೬) ಹ್ಯಾಪಿಹೋಂ ಅಂಗವಿಕಲ ಮಕ್ಕಳ ಶಾಲೆ, ಕೆ.ಜಿ.ಎಫ್.

೭) ಶಾರದಾ ಬುದ್ಧಿಮಾಂದ್ಯ ಮಕ್ಕಳ ಶಾಲೆ, ಕೋಲಾರ.

೮) ನೀಲ್‌ಬಾಗ್ ಕಿವುಡ ಮೂಗರ ಶಾಲೆ, ರಾಯಲ್‌ಪಾಡು.

ಮೇಲ್ಕಂಡ ಶಾಲೆಗಳ ಉಸ್ತುವಾರಿಯನ್ನು ಕರ್ನಾಟಕ ಸರಕಾರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಡಯಟ್ (ಡಿಸ್ಟ್ರಿಕ್ಟ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ಅಂಡ್ ಟ್ರೈನಿಂಗ್) ಸಂಸ್ಥೆಗಳು ನಡೆಸುತ್ತವೆ.

**ನವೋದಯ ಶಾಲೆ:** ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯಡಿ ಚಿಂತಾಮಣಿ ತಾಲೂಕಿನ ಏನಿಗದಲೆಯಲ್ಲಿ ಈ ವಸತಿ ಶಾಲೆ ೧೯೮೬ರಲ್ಲಿ ೮೦ ಮಕ್ಕಳೊಂದಿಗೆ ಪ್ರಾರಂಭಗೊಂಡಿತು. ಆರರಿಂದ ೧೨ನೇ ತರಗತಿಯವರೆಗೆ ಶಿಕ್ಷಣ ನೀಡುವ ಈ ಶಾಲೆ ೩೨ ಎಕರೆ ಪ್ರದೇಶದಲ್ಲಿ ಸ್ವಂತಕಟ್ಟಡವನ್ನು ಹೊಂದಿದ್ದು, ೨೦೦೪–೦೫ನೇ ಸಾಲಿಗೆ ಎಲ್ಲ ತರಗತಿಗಳಿಂದ ಒಟ್ಟು ೪೩೫ (೨೭೫ ಗಂಡು–೧೬೦ ಹೆಣ್ಣು) ಮಕ್ಕಳನ್ನು ಹಾಗೂ ೩೭ (೨೬ ಗಂಡು–೧೧ ಹೆಣ್ಣು) ಮಂದಿ ಅಧ್ಯಾಪಕ ವರ್ಗದವರನ್ನು ಹೊಂದಿತ್ತು. ಎಂಟನೇ ತರಗತಿಯವರೆಗೆ ರಾಜ್ಯದ, ತದನಂತರ ಸಿಬಿಎಸ್‌ಇ ಪಠ್ಯಕ್ರಮವನ್ನು ಇಲ್ಲಿ ಇಂಗ್ಲಿಷ್ ಮಾಧ್ಯಮದಲ್ಲಿ ಬೋಧಿಸಲಾಗುತ್ತದೆ. ಜಿಲ್ಲೆಯ ಯಾವುದೇ ಸ್ಥಳೀಯ ಶಾಲೆಯಲ್ಲಿ ಐದನೇ ತರಗತಿ ಉತ್ತೀರ್ಣರಾದ ಮಕ್ಕಳಿಗೆ ಇಲ್ಲಿ ಪ್ರವೇಶಾವಕಾಶವಿರುತ್ತದೆ. ಜಿಲ್ಲಾಧಿಕಾರಿಯ ಅಧ್ಯಕ್ಷತೆಯಲ್ಲಿ ಎಂಟು ಮಂದಿ ಸದಸ್ಯರ 'ವಿದ್ಯಾಲಯ ಆಡಳಿತ ಮಂಡಳಿ'ಯಡಿ ಈ ಶಾಲೆ ಕಾರ್ಯನಿರ್ವಹಿಸುತ್ತದೆ.

**ಅಮೇರಿಕನ್ ಫ್ರೆಂಡ್‌ಷಿಪ್ ವಸತಿ ಶಾಲೆ:** ಗುಡಿಬಂಡೆಯ ಸಮೀಪದ ರೇಣುಮಾಕನಹಳ್ಳಿಯಲ್ಲಿ ೧೯೮೪ರಲ್ಲಿ ವಿದೇಶಿ ಮಾದರಿ ಶಿಕ್ಷಣ ನೀಡುವ ಉದ್ದೇಶದಿಂದ ಪ್ರಾರಂಭವಾದ ಈ ಶಾಲೆ ೧೯೯೬ ರಿಂದ ಕಾರ್ಯನಿರ್ವಹಿಸುತ್ತಿಲ್ಲ.

## ಪ್ರೌಢ ಶಿಕ್ಷಣ

ಮೊದಲಿಗೆ ರಾಜ್ಯದಲ್ಲಿ ಪ್ರೌಢ ಶಿಕ್ಷಣ ಎರಡು ಹಂತಗಳನ್ನುಳ್ಳದ್ದಾಗಿದ್ದು, ಇದರಲ್ಲಿ ನಾಲ್ಕು ವರ್ಷಗಳ ಮಾಧ್ಯಮಿಕ ಅಥವಾ ಲೋಯರ್ ಸೆಕೆಂಡರಿ ಹಂತ ಹಾಗೂ ಮೂರು ವರ್ಷಗಳ ಹೈಸ್ಕೂಲು ಹಂತಗಳು ಸೇರಿದ್ದವು. ಸಾಮಾನ್ಯವಾಗಿ ಈ ಎರಡೂ ಹಂತಗಳ ಶಿಕ್ಷಣ ಪ್ರತ್ಯೇಕ ಸಂಸ್ಥೆಗಳನ್ನು ಹೊಂದಿದ್ದು, ಅಂತ್ಯದಲ್ಲಿ ಪಬ್ಲಿಕ್ ಪರೀಕ್ಷೆಗಳನ್ನು ನಡೆಸುತ್ತಿದ್ದವು. ೧೧ ರಿಂದ ೧೩ ವಯಸ್ಸಿನ ಮಕ್ಕಳ ಎಳೆ ಮನಸ್ಸುಗಳ ಮೇಲೆ ಅಧಿಕ ಒತ್ತಡ ಹೇರಬಾರದೆಂಬ ಉದ್ದೇಶದಿಂದ ೧೯೫೪ರಲ್ಲಿ ಮಾಧ್ಯಮಿಕ ಶಾಲೆಯ ಅಂತ್ಯದಲ್ಲಿ ನಡೆಯುತ್ತಿದ್ದ ಪಬ್ಲಿಕ್ ಪರೀಕ್ಷೆಯನ್ನು ರದ್ದುಗೊಳಿಸಲಾಯಿತು. ಆದರೆ ಅದೇ ಮಾದರಿಯಲ್ಲಿ ತರಗತಿ ಪರೀಕ್ಷೆಗಳನ್ನು ಜಾರಿಮಾಡಲಾಯಿತು.

## ನೂತನ ಅರ್ಥ ವ್ಯಾಪ್ತಿ

ಪ್ರೌಢ ಶಿಕ್ಷಣದ ಅರ್ಥ ವ್ಯಾಪ್ತಿಯು ೧೯೫೫ರ ನಂತರ ಬದಲಾವಣೆಯಾಯಿತು. ಶಿಕ್ಷಣ ಪದ್ಧತಿಯಲ್ಲಿ ಪ್ರಗತಿಪರ ಮಾರ್ಪಾಡುಗಳನ್ನು ಸೂಚಿಸಲು ರಚಿತವಾದ ಶೈಕ್ಷಣಿಕ ಸುಧಾರಣಾ ಸಮಿತಿಯು ಪ್ರೌಢ ಶಿಕ್ಷಣ ಘಟ್ಟವು ಶಾಲಾ ಶಿಕ್ಷಣದ ಕಡೆಯ ಘಟ್ಟವೂ, ವಿವಿಧೋದ್ದೇಶದ ಉನ್ನತ ಶಿಕ್ಷಣಕ್ಕೆ ಪೂರಕವಾದ ಪ್ರಥಮ ಸೋಪಾನವೂ ಆಗಬೇಕೆಂದು ನಿರ್ಣಯಿಸಿತು. ಹಾಗಾಗಿ ಆವರೆಗೆ ನಾಲ್ಕು ವರ್ಷಗಳ ಮಾಧ್ಯಮಿಕ ಹಾಗೂ ಮೂರು ವರ್ಷಗಳ ಹೈಸ್ಕೂಲು ಶಿಕ್ಷಣ ಹಂತಗಳನ್ನೊಳಗೊಂಡ 'ಪ್ರೌಢ ಶಿಕ್ಷಣ' ೧೯೫೫–೫೬ ರಿಂದ ಎಂಟು ವರ್ಷಗಳ ಪ್ರಾಥಮಿಕ ಹಂತದ ನಂತರದ ಮೂರು ವರ್ಷಗಳ ಹೈಸ್ಕೂಲು ಶಿಕ್ಷಣ ಮಾತ್ರವಾಗಿ ಉಳಿಯಿತು. ಒಂಬತ್ತು, ಹತ್ತು ಹಾಗೂ ಹನ್ನೊಂದನೇ ತರಗತಿಗಳ ನಂತರದಲ್ಲಿ ಇದಕ್ಕೆ ೧೨ನೇ ತರಗತಿಯನ್ನು ಸೇರಿಸಿ 'ಹೈಯರ್ ಸೆಕೆಂಡರಿ' ಎಂದು ಕರೆಯಲಾಯಿತು. ೧೨ನೇ ತರಗತಿಯಲ್ಲಿ ಉತ್ತೀರ್ಣತೆ ಹೊಂದಿದ ಮಕ್ಕಳು ಮೂರು ವರ್ಷದ ಪದವಿ ಅಥವಾ ಯಾವುದೇ ತಾಂತ್ರಿಕ ಪದವಿ/ಡಿಪ್ಲೊಮಾಗಳಿಗೆ ಪ್ರವೇಶಾವಕಾಶ ಹೊಂದಿದ್ದರು. ಇದಕ್ಕಾಗಿ ಹೈಸ್ಕೂಲು ಮಟ್ಟದಲ್ಲಿ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಬೇಕಾಗಿಬಂದಾಗ, ಸ್ಥಳೀಯ ಹಾಗೂ ಖಾಸಗಿ ಸಂಸ್ಥೆಗಳಿಗೆ ಹೊಸ ಪ್ರೌಢ ಶಾಲೆಗಳನ್ನು ತೆರೆಯಲು ಅನುಮತಿ ನೀಡಲಾಯಿತು.

**ವಿವಿಧ ಮಾದರಿಯ ಪ್ರೌಢ ಶಾಲೆಗಳು.**

೧೯೪೦–೪೧ರ ವೇಳೆಗೆ ಜಿಲ್ಲೆಯಲ್ಲಿ ಐದು ಹೈಸ್ಕೂಲುಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳಲ್ಲಿ ೧,೦೧೯ ಗಂಡು ಹಾಗೂ ೭೯ ಹೆಣ್ಣುಮಕ್ಕಳು ವ್ಯಾಸಂಗ ಮಾಡುತ್ತಿದ್ದರು. ಇವುಗಳ ಸಂಖ್ಯೆ ೧೯೫೬–೫೭ರ ವೇಳೆಗೆ ೧೯ಕ್ಕೆ ಏರಿ, ಇವುಗಳಲ್ಲಿ ೧೬ ಗಂಡುಮಕ್ಕಳಿಗೂ ಉಳಿದ ಮೂರು ಹೆಣ್ಣು ಮಕ್ಕಳಿಗೂ ಸೇರಿದ ಶಾಲೆಗಳಾಗಿದ್ದವು. ಇವುಗಳಲ್ಲಿ ಕ್ರಮವಾಗಿ ಒಟ್ಟು ೫,೫೫೧ ಗಂಡು ಹಾಗೂ ೧,೦೩೧ ಹೆಣ್ಣುಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದರು. ೧೯೬೩ರ ವೇಳೆಗೆ ಒಟ್ಟು ಗಂಡು ಮಕ್ಕಳ ಶಾಲೆಗಳ ಸಂಖ್ಯೆ ೩೨ ಹಾಗೂ ಒಟ್ಟು ಹೆಣ್ಣು ಮಕ್ಕಳ ಶಾಲೆಗಳ ಸಂಖ್ಯೆ ಆರು ಆಯಿತು. ಇವುಗಳಲ್ಲಿ ಒಟ್ಟು ೩೩೭ ಗಂಡು ಮತ್ತು ೪೬ ಹೆಣ್ಣು ಬೋಧಕ ಸಿಬ್ಬಂದಿ ಇದ್ದರು. ೧೯೬೭ರ ವೇಳೆಗೆ ಗಂಡು ಮಕ್ಕಳ ಶಾಲೆಗಳ ಸಂಖ್ಯೆ ೬೪ ಹಾಗೂ ಹೆಣ್ಣು ಮಕ್ಕಳ ಶಾಲೆಗಳ ಸಂಖ್ಯೆ ಒಂಬತ್ತು ಆಯಿತು.

ಮೇಲ್ಕಂಡ ೬೪ ಗಂಡು ಮಕ್ಕಳ ಶಾಲೆಗಳಲ್ಲಿ ನಾಲ್ಕು ಸರಕಾರಿ ಶಾಲೆಗಳಾಗಿದ್ದು, ಅವು ಚಿಕ್ಕಬಳ್ಳಾಪುರ, ಕೋಲಾರ, ವೇಮಗಲ್ ಹಾಗೂ ದೇವರಾಯ ಸಮುದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಇವುಗಳ ಪೈಕಿ ಚಿಕ್ಕಬಳ್ಳಾಪುರದ ಸರಕಾರಿ ಹೈಯರ್ ಸೆಕೆಂಡರಿ ಶಾಲೆ ಜಿಲ್ಲೆಯ ಅತೀ ಹಳೆಯ ಶಾಲೆಯಾಗಿದ್ದು, ಭಾರತರತ್ನ ಸರ್. ಎಂ. ವಿಶ್ವೇಶ್ವರಯ್ಯ ಇಲ್ಲಿನ ವಿದ್ಯಾರ್ಥಿಯಾಗಿದ್ದರು.

**ಮುನಿಸಿಪಲ್ ಶಾಲೆಗಳು:** ೧೯೨೮ರಲ್ಲಿ ಮುನಿಸಿಪಾಲಿಟಿಗಳು ಶಾಲೆಗಳನ್ನು ಪ್ರಾರಂಭಿಸುವ ಯೋಜನೆಯನ್ನು ರೂಪಿಸಿಕೊಂಡವು. ಹಲವಾರು ಸ್ಥಳೀಯ ಸಂಸ್ಥೆಗಳೂ ಸಹ ಶೈಕ್ಷಣಿಕ ರಂಗದಲ್ಲಿ ತಮ್ಮ ಪಾತ್ರದ ಜವಾಬ್ದಾರಿಯನ್ನು ಅರಿತು, ಹೈಸ್ಕೂಲುಗಳನ್ನು ಪ್ರಾರಂಭಿಸಲು ಅನುಮತಿ ಕೋರಿದವು. ಇಂತಹ ಶಾಲಾ ಪದ್ಧತಿಗೆ ಸಹಾಯ ಮಾಡಲು ಸರಕಾರ ಕಟ್ಟಡ ಹಾಗೂ ಅವುಗಳ ನಿರ್ವಹಣೆ ವಿಷಯದಲ್ಲಿ ಉದಾರ ನೀತಿ ಅನುಸರಿಸಿತು. ಹಾಗಾಗಿ ೧೯೬೭ರ ವೇಳೆಗೆ ಜಿಲ್ಲೆಯಲ್ಲಿ ಒಟ್ಟು ಎಂಟು ಗಂಡುಮಕ್ಕಳ ಮುನಿಸಿಪಲ್ ಹೈಸ್ಕೂಲುಗಳು ಈ ಕೆಳಕಂಡ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದವು.

೧) ಕೋಲಾರ ಟೌನ್, ೨) ಗೌರಿಬಿದನೂರು, ೩) ಶಿಡ್ಲಘಟ್ಟ, ೪) ಬಂಗಾರಪೇಟೆ, ೫) ಕೆ.ಜಿ.ಎಫ್., ೬) ಮಾಲೂರು, ೭) ಚಿಂತಾಮಣಿ, ಮತ್ತು ೮) ಮುಳಬಾಗಿಲು, ಇವುಗಳಲ್ಲಿ ಮಾಲೂರು ಹಾಗೂ ಮುಳಬಾಗಿಲಿನ ಶಾಲೆಗಳು ಹೈಯರ್ ಸೆಕೆಂಡರಿ ಶಾಲೆಗಳಾಗಿದ್ದವು.

**ಜಿಲ್ಲಾ ಮಂಡಳಿ ಹಾಗೂ ತಾಲೂಕು ಮಂಡಳಿ ಪ್ರೌಢಶಾಲೆಗಳು:**

ಜಿಲ್ಲಾ ಮಂಡಳಿಗಳು ೧೯೪೮ರಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಪಾದಾರ್ಪಣ ಮಾಡಿ ಹಲವಾರು ಶಾಲೆಗಳನ್ನು ಪ್ರಾರಂಭಿಸಿದವು. ಇದರಿಂದ ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಶಿಕ್ಷಣ ಪ್ರಸಾರ ಸುಗಮಗೊಂಡಿತು. ಜಿಲ್ಲಾ ಮಂಡಳಿಗಳ ತರುವಾಯ ಈ ಶಾಲೆಗಳನ್ನು ತಾಲೂಕು ಮಂಡಳಿಗಳು ಮುಂದುವರಿಸಿದವು. ಇಂತಹ ಶಾಲೆಗಳ ಸಂಖ್ಯೆ ೧೯೬೭ರಲ್ಲಿ ೨೧ ಆಗಿದ್ದು, ಅವು ಈ ಕೆಳಕಂಡ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದವು– ಹೊಲೂರು, (ಕೋಲಾರ ತಾಲೂಕು), ಪೆರೇಸಂದ್ರ (ಚಿಕ್ಕಬಳ್ಳಾಪುರ ತಾಲೂಕು), ಬಾಗೇಪಲ್ಲಿ ಟೌನ್, ಗೂಳೂರು, ಪಾತಪಾಳ್ಯ, ಚೇಳೂರು ಬೆಟ್ಟಹಳ್ಳಿ (ಚಿಂತಾಮಣಿ ತಾಲೂಕು), ವಾಟದ ಹೊಸಹಳ್ಳಿ (ಗೌರಿಬಿದನೂರು ತಾಲೂಕು), ಶ್ರೀನಿವಾಸಪುರ ಟೌನ್, ಸೋಮಯಾಜಲಪಲ್ಲಿ, ಲಕ್ಷ್ಮೀಪುರ, ದಳಸನೂರು, ರಾಯಲಪಾಡು, ರೋಣೂರು, ಗೌನಿಪಲ್ಲಿ, ಗುಡಿಬಂಡೆ ಟೌನ್, ಮೇಲೂರು (ಶಿಡ್ಲಘಟ್ಟ ತಾಲೂಕು) ಹಾಗೂ ಟೇಕಲ್ ಶಿವಾರಪಟ್ನ ಮತ್ತು ಮಾಸ್ತಿ (ಮಾಲೂರು ತಾಲೂಕು). ಇವುಗಳಲ್ಲಿ ಶ್ರೀನಿವಾಸಪುರದ ತಾಲೂಕು ಬೋರ್ಡ್‌ಶಾಲೆ ಮತ್ತು ಬಾಗೇಪಲ್ಲಿಯ ಜಿಲ್ಲಾ ಬೋರ್ಡ್ ಶಾಲೆಗಳು ಹೈಯರ್ ಸೆಕೆಂಡರಿ ಶಾಲೆಗಳಾಗಿದ್ದವು.

ಮೇಲ್ಕಂಡ ಶಾಲೆಗಳನ್ನು ಸರಕಾರ ಕಾಲಕ್ರಮದಲ್ಲಿ ತನ್ನ ವಶಕ್ಕೆ ತೆಗೆದುಕೊಂಡಿತು. ಇವಲ್ಲದೆ ಜಿಲ್ಲೆಯಲ್ಲಿ ೧೯೬೭ರಲ್ಲಿ ೨೪ ಅನುದಾನಿತ ಹಾಗೂ ಒಂಬತ್ತು (ಏಳು ಗಂಡು ಮಕ್ಕಳ ಹಾಗೂ ಎರಡು ಹೆಣ್ಣು ಮಕ್ಕಳ) ಅನುದಾನ ರಹಿತ ಶಾಲೆಗಳು ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಅವುಗಳ ಅಂಕಿ–ಅಂಶಗಳನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೧೩.೨೫**

| ಕ್ರ. ಸಂ | ಸಂಸ್ಥೆಗಳ ಮಾದರಿ | ಸಂಖ್ಯೆ | ಮಕ್ಕಳ ಸಂಖ್ಯೆ | | ತರಬೇತಿ ಹೊಂದಿದ ಶಿಕ್ಷಕರ ಸಂಖ್ಯೆ | | ತರಬೇತಿ ಹೊಂದದ ಶಿಕ್ಷಕರ ಸಂಖ್ಯೆ | |
|---|---|---|---|---|---|---|---|---|
| | | | ಗಂಡು ಮಕ್ಕಳು | ಹೆಣ್ಣು ಮಕ್ಕಳು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು |
| ೧. | ಸರಕಾರಿ | ೪ | ೨,೫೭ | ೮೨ | ೬ | ೪ | ೫ | ೧ |
| ೨. | ತಾಲೂಕು ಮತ್ತು ಜಿಲ್ಲಾ ಬೋರ್ಡ್ | ೨೧ | ೩,೩೪೭ | ೭೫೯ | ೫೯ | – | ೧೬ | ೪ |
| ೩. | ಮುನಿಸಿಪಲ್ | ೨ | ೫,೧೧೦ | ೬೪೧ | ೫೫ | ೩ | ೭ | ೬ |
| ೪. | ಅನುದಾನಿತ | ೨೪ | ೩,೫೫೪ | ೬೫೫ | ೪೬ | – | ೧೦ | ೪ |
| ೫. | ಅನುದಾನ ರಹಿತ | ೭ | ೧,೬೯೯ | ೨೬೪ | ೧೩ | ೨ | ೪೬ | ೨ |
| | **ಒಟ್ಟು:** | **೬೪** | **೧೬,೬೭೭** | **೩,೧೫೧** | **೨೪೯** | **೧೫** | **೩೪೯** | **೨೩** |

ಆಧಾರ: ೧೯೬೮ರ ಕೋಲಾರ ಜಿಲ್ಲಾ ಗ್ಯಾಸೆಟಿಯರ್.

ಇದೇ ರೀತಿ ಹೆಣ್ಣು ಮಕ್ಕಳಿಗಾಗಿಯೇ ಮೀಸಲಾಗಿದ್ದ ಒಂಬತ್ತು ಶಾಲೆಗಳು ಜಿಲ್ಲೆಯ ಹಲವೆಡೆ ಕಾರ್ಯನಿರ್ವಹಿಸುತ್ತಿದ್ದು, ಅವುಗಳ ವಿವರ ಇಂತಿದ್ದಿತು.

**ಕೋಷ್ಟಕ: ೧೩.೨೬**

| ಕ್ರ. ಸಂ | ಸಂಸ್ಥೆಗಳ ಮಾದರಿ | ಸಂಖ್ಯೆ | ಮಕ್ಕಳ ಸಂಖ್ಯೆ | ತರಬೇತಿ ಹೊಂದಿದ ಶಿಕ್ಷಕರ ಸಂಖ್ಯೆ | | ತರಬೇತಿ ಹೊಂದದ ಶಿಕ್ಷಕರ ಸಂಖ್ಯೆ | |
|---|---|---|---|---|---|---|---|
| | | | | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು |
| ೧. | ಸರಕಾರಿ | ೧ | ೨೮ | ೩ | ೫ | – | ೫ |
| ೨. | ಮುನಿಸಿಪಲ್ | ೨ | ೧,೦೯ | ೪ | ೨ | ೬ | ೯ |
| ೩. | ಅನುದಾನಿತ | ೪ | ೧,೬೯ | ೬ | ೫ | ೧ | ೨ |
| ೪. | ಅನುದಾನ ರಹಿತ | ೨ | ೧೧೦ | ೧ | – | ೬ | ೨ |
| | **ಒಟ್ಟು** | **೯** | **೩,೧೧೬** | **೧೪** | **೧೨** | **೧೩** | **೧೨** |

ಆಧಾರ: ೧೯೬೮ರ ಕೋಲಾರ ಜಿಲ್ಲಾ ಗ್ಯಾಸೆಟಿಯರ್.

೨೦೦೪ರ ಆಗಸ್ಟ್ ನಲ್ಲಿದ್ದಂತೆ ಜಿಲ್ಲೆಯ ಪ್ರೌಢ ಶಾಲೆಗಳ ವಿವರಗಳನ್ನು ಈ ಮುಂದೆ ನೀಡಲಾಗಿದೆ.

**ಕೋಷ್ಟಕ: ೧೩.೨೭**

| ಕ್ರಮ ಸಂಖ್ಯೆ | ತಾಲ್ಲೂಕು | ಒಟ್ಟು ಶಾಲೆಗಳ ಸಂಖ್ಯೆ | | | ಒಟ್ಟು ಮಕ್ಕಳ ಸಂಖ್ಯೆ | | ಒಟ್ಟು ಬೋಧಕ ಸಿಬ್ಬಂದಿ | |
|---|---|---|---|---|---|---|---|---|
| | | ಸರ್ಕಾರಿ | ಅನುದಾನಿತ | ಅನುದಾನ ರಹಿತ | ಗಂಡು | ಹೆಣ್ಣು | ಗಂಡು | ಹೆಣ್ಣು |
| ೧ | ಕೋಲಾರ | ೨೧ | ೯ | ೪ | ೭,೬೭೫ | ೭,೧೫೮ | ೨೫೬ | ೧೫೧ |
| ೨ | ಬಂಗಾರಪೇಟೆ | ೧೨ | ೧ | ೨೩ | ೪,೮೮೨ | ೪,೨೯೪ | ೯೮ | ೬೧ |
| ೩ | ಕೆ. ಜಿ. ಎಫ್ | ೬ | ೧೧ | ೧೦ | ೪,೮೬೮ | ೪,೭೬೧ | ೧೫೨ | ೧೪೯ |
| ೪ | ಮಾಲೂರು | ೧೫ | ೪ | ೧೦ | ೫,೧೯೨ | ೪,೭೨೦ | ೧೩೬ | ೩೬ |
| ೫ | ಮುಳಬಾಗಿಲು | ೧೦ | ೮ | ೧೬ | ೫,೧೫೨ | ೪,೫೩೮ | ೨೫೦ | ೫೬ |
| ೬ | ಶ್ರೀನಿವಾಸಪುರ | ೨೦ | ೧ | ೧೩ | ೪,೧೨೮ | ೩,೭೭೦ | ೧೬೩ | ೫೯ |
| | **ಒಟ್ಟು** | **೬೪** | **೩೪** | **೭೬** | **೩೧,೮೮೭** | **೨೯,೦೭೬** | **೧,೦೬೫** | **೪೭೨** |

ಆಧಾರ: ಡಿ.ಡಿ.ಪಿ.ಐ. ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕೋಲಾರ.

**ಕೋಷ್ಟಕ: ೧೩.೨೮**

| ಕ್ರಮ ಸಂಖ್ಯೆ | ತಾಲ್ಲೂಕು | ಒಟ್ಟು ಶಾಲೆಗಳ ಸಂಖ್ಯೆ | | | ಒಟ್ಟು ಮಕ್ಕಳ ಸಂಖ್ಯೆ | | ಒಟ್ಟು ಬೋಧಕ ಸಿಬ್ಬಂದಿ | |
|---|---|---|---|---|---|---|---|---|
| | | ಸರ್ಕಾರಿ | ಅನುದಾನಿತ | ಅನುದಾನ ರಹಿತ | ಗಂಡು | ಹೆಣ್ಣು | ಗಂಡು | ಹೆಣ್ಣು |
| ೧ | ಚಿಕ್ಕಬಳ್ಳಾಪುರ | ೮ | ೪ | ೧೬ | ೪,೭೨೫ | ೪,೦೭೩ | ೨೦ | ೪೦ |
| ೨ | ಬಾಗೇಪಲ್ಲಿ | ೧೫ | ೧ | ೯ | ೨,೪೩೪ | ೨,೪೦೫ | ೧೬೯ | ೩೨ |
| ೩ | ಚಿಂತಾಮಣಿ | ೧೯ | ೬ | ೨೧ | ೬,೫೦೩ | ೫,೧೮೬ | ೧೪೬ | ೪೮ |
| ೪ | ಗೌರಿಬಿದನೂರು | ೧೮ | ೧೦ | ೧೭ | ೫,೫೯೪ | ೪,೮೭೧ | ೬೮ | ೫೨ |
| ೫ | ಶಿಡ್ಲಘಟ್ಟ | ೧೦ | ೫ | ೧೦ | ೪,೦೪೬ | ೩,೭೨೫ | ೧೪೩ | ೬೨ |
| ೬ | ಗುಡಿಬಂಡೆ | ೮ | – | ೧ | ೧,೩೦೭ | ೧,೨೯೯ | ೫೫ | ೨೧ |
| | **ಒಟ್ಟು** | **೭೮** | **೨೬** | **೭೪** | **೨೪,೬೦೯** | **೨೧,೫೫೯** | **೬೦೧** | **೨೫೫** |

ಆಧಾರ: ಡಿ.ಡಿ.ಪಿ.ಐ. ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕೋಲಾರ.

ಜಿಲ್ಲೆಯ ಮೇಲ್ಕಂಡ ಎಲ್ಲಾ ಶಾಲೆಗಳಿಂದ ೧೯೯೫–೯೬ರಿಂದ ೨೦೦೩–೦೪ನೇ ವರ್ಷದ ಮಾರ್ಚ್ ತಿಂಗಳಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಫಲಿತಾಂಶದ ವಿವರಗಳನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೧೩.೨೯**

| ವರ್ಷ | ಪರೀಕ್ಷೆಗೆ ಹಾಜರಾದವರು | | ಉತ್ತೀರ್ಣರಾದವರು | | ಶೇಕಡಾ ಫಲಿತಾಂಶ | |
|---|---|---|---|---|---|---|
| | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು |
| ೧೯೯೫–೯೬ | ೧೪೩೬೫ | ೯೩೦೩ | ೩೬೦೭ | ೨೭೬೨ | ೨೫.೧೦ | ೨೯.೬೮ |
| ೧೯೯೬–೯೭ | ೧೩೬೭೧ | ೯೮೭೭ | ೩೭೮೯ | ೨೯೧೪ | ೨೭.೬೮ | ೩೦.೦೨ |
| ೧೯೯೭–೯೮ | ೧೨೭೪೯ | ೯೦೮೭ | ೪೦೭೪ | ೩೦೪೪ | ೩೧.೯೫ | ೩೩.೪೯ |
| ೧೯೯೮–೯೯ | ೧೩೭೪೬ | ೧೦೦೩೧ | ೫೫೬೯ | ೪೩೬೨ | ೪೦.೫೧ | ೪೩.೪೮ |
| ೧೯೯೯–೨೦೦೦ | ೧೨೫೯೪ | ೯೨೧೭ | ೪೮೮೭ | ೩೮೯೬ | ೩೯.೧೯ | ೪೨.೨೬ |
| ೨೦೦೦–೦೧ | ೧೩೬೬೬ | ೧೦೫೪೬ | ೫೫೬೬ | ೪೪೧೯ | ೪೧.೪೩ | ೪೧.೧೦ |

ಆಡಳಿತಾನುಕೂಲಕ್ಕಾಗಿ ೨೦೦೨–೦೩ ಶೈಕ್ಷಣಿಕ ವರ್ಷದಿಂದ ನಾಲ್ಕು ತಾಲೂಕುಗಳನ್ನು ಸೇರಿದಂತೆ ಚಿಕ್ಕಬಳ್ಳಾಪುರವನ್ನು ಒಬ್ಬ ಪ್ರತ್ಯೇಕ ಡಿಡಿಪಿಐ ಆಡಳಿತಕ್ಕೊಳಪಡಿಸಲಾಗಿದೆ. ಆದ್ದರಿಂದ ಈ ಮುಂದೆ ಕೋಲಾರ ಹಾಗೂ ಚಿಕ್ಕಬಳ್ಳಾಪುರಗಳ ಫಲಿತಾಂಶವನ್ನು ಪ್ರತ್ಯೇಕವಾಗಿ ನೀಡಲಾಗಿದೆ.

| ವರ್ಷ | ಪರೀಕ್ಷೆಗೆ ಹಾಜರಾದವರು | | ಉತ್ತೀರ್ಣರಾದವರು | | ಶೇಕಡಾ ಫಲಿತಾಂಶ | |
|---|---|---|---|---|---|---|
| | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು |
| ೨೦೦೧–೦೨ | | | | | | |
| ಕೋಲಾರ | ೮೨೫೮ | ೭೩೨೩ | ೩೧೯೯ | ೩೦೬೫ | ೩೮.೮೪ | ೪೧.೮೫ |
| ಚಿಕ್ಕಬಳ್ಳಾಪುರ | ೬೨೯೧ | ೫೦೬೨ | ೨೫೫೧ | ೨೨೦೮ | ೪೦.೫೪ | ೪೩.೬೨ |
| ೨೦೦೩–೦೪ | | | | | | |
| ಕೋಲಾರ | ೧೫೮೫೩ | ೧೧೩೬೬ | ೫೬೭೮ | ೫೩೦೩ | ೩೫.೫೪ | ೪೬.೨೮ |
| ಚಿಕ್ಕಬಳ್ಳಾಪುರ | ೧೧೧೯೪ | ೭೨೫೮ | ೫೦೩೧ | ೩೨೫೮ | ೪೪.೯೪ | ೫೧.೨೮ |

ಆಧಾರ: ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ವರದಿ, ಬೆಂಗಳೂರು.

## ಪದವಿ ಪೂರ್ವ ಶಿಕ್ಷಣ

ರಾಜ್ಯ ಪುನರ್ಘಟನೆಯವರೆಗೆ ಅಸ್ತಿತ್ವದಲ್ಲಿದ್ದ ಎರಡು ವರ್ಷದ ಇಂಟರ್‌ಮೀಡಿಯಟ್ ಶಿಕ್ಷಣ ವ್ಯವಸ್ಥೆ ೧೯೫೬–೫೭ರ ಶೈಕ್ಷಣಿಕ ಸಾಲಿನಿಂದ ರದ್ದಾಗಿ, ಒಂದು ವರ್ಷದ ಪದವಿ ಪೂರ್ವ ಶಿಕ್ಷಣ ವ್ಯವಸ್ಥೆ ಜಾರಿಗೆ ಬಂದಿತು. ಜಿಲ್ಲೆಯ ಕೆಲವು ಆಯ್ದ ಪ್ರೌಢಶಾಲೆಗಳಲ್ಲಿ ಹನ್ನೊಂದನೇ ತರಗತಿಯನ್ನು ಪ್ರಾರಂಭಿಸಲಾಯಿತು. ಇಂತಹ ಶಾಲೆಗಳನ್ನು ಹೈಯರ್ ಸೆಕೆಂಡರಿ ಶಾಲೆಗಳೆಂದು ಕರೆಯಲಾಯಿತು. ಹಳೆಯ ಇಂಟರ್ ಮೀಡಿಯಟ್ ಕಾಲೇಜುಗಳಲ್ಲಿಯೂ ಕೆಲವು ಪ್ರಥಮ ದರ್ಜೆ ಕಾಲೇಜುಗಳಲ್ಲಿಯೂ ನಡೆಯುತ್ತಿದ್ದ ಈ ತರಗತಿಯ ಕೊನೆಗೆ ಪಬ್ಲಿಕ್ ಪರೀಕ್ಷೆ ನಡೆಯುತ್ತಿತ್ತು. ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ ಶಿಕ್ಷಣ ವ್ಯವಸ್ಥೆ ೧೦+೨+೩ ಆದಾಗ, ೧೯೭೧–೭೨ನೇ ಸಾಲಿನಿಂದ ಒಂದು ವರ್ಷದ ಪಿಯುಸಿ ರದ್ದಾಯಿತು ಹಾಗೂ ಎರಡು ವರ್ಷದ ಪಿಯುಸಿ ಆರಂಭವಾಯಿತು.

ಕೋಲಾರ ಜಿಲ್ಲೆಯಲ್ಲಿ ೨೦೦೪ರ ಆಗಸ್ಟ್‌ನಲ್ಲಿದ್ದಂತೆ ಒಟ್ಟು ೮೮ ಪದವಿ ಪೂರ್ವ ಕಾಲೇಜುಗಳಿದ್ದು, ಇವುಗಳಲ್ಲಿ ೩೭ ಸರ್ಕಾರಿ, ಎಂಟು ಅನುದಾನಿತ ಹಾಗೂ ೪೩ ಅನುದಾನ ರಹಿತ ಸಂಸ್ಥೆಗಳಾಗಿದ್ದು, ಮೂರು ಪದವಿ ಪೂರ್ವ ಕಾಲೇಜುಗಳು ಪ್ರಥಮ ದರ್ಜೆ ಕಾಲೇಜುಗಳಿಗೆ ಹೊಂದಿಕೊಂಡು ಕಾರ್ಯನಿರ್ವಹಿಸುತ್ತಿದ್ದವು. ಮೇಲ್ಕಂಡ ಎಲ್ಲಾ ಸಂಸ್ಥೆಗಳಲ್ಲಿ ಮೊದಲನೆ ವರ್ಷದ ಪಿಯುಸಿ ತರಗತಿಗಳಲ್ಲಿ ಒಟ್ಟು ೧೫,೬೩೮ ಮತ್ತು ದ್ವಿತೀಯ ವರ್ಷದಲ್ಲಿ ಒಟ್ಟು ೧೩,೮೪೦ ವಿದ್ಯಾರ್ಥಿ–ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದರು. ೨೦೦೪ರ ಏಪ್ರಿಲ್ ಪರೀಕ್ಷೆಗೆ ಜಿಲ್ಲೆಯಿಂದ ಒಟ್ಟು ೧೯,೪೦೪ ಮಂದಿ ಹಾಜರಾಗಿದ್ದು, ಇವರ ಪೈಕಿ ೧೨,೨೭೯ ಮಂದಿ ಹೊಸದಾಗಿಯೂ ೬,೫೬೬ ಮಂದಿ ಎರಡು ಅಥವಾ ಮೂರನೇ ಬಾರಿಗೂ ಮತ್ತು ೫೫೭ ಮಂದಿ ಖಾಸಗಿಯಾಗಿಯೂ ದಾಖಲಾಗಿದ್ದರು. ಹೊಸದಾಗಿ ಪರೀಕ್ಷೆ ಬರೆದವರಲ್ಲಿ ೬,೪೬೫ ಮಂದಿ, ಪುನರ್ ಪರೀಕ್ಷೆ ಬರೆದವರಲ್ಲಿ ೧,೬೫೧ ಮಂದಿ ಹಾಗೂ ಖಾಸಗಿಯಾಗಿ ದಾಖಲಾದವರಲ್ಲಿ ೧೭೧ ಮಂದಿ ಉತ್ತೀರ್ಣರಾದರು. ಇವರ ಶೇಕಡಾವಾರು ಫಲಿತಾಂಶ ಕ್ರಮವಾಗಿ ೫೨.೬೫; ೨೫.೧೪ ಹಾಗೂ ೩೦.೭೭ ಆಗಿದ್ದಿತು. ೧೯೮೮–೮೯ನೇ ಸಾಲಿನ ಎರಡನೇ ಪಿಯುಸಿ ಪರೀಕ್ಷೆಯಲ್ಲಿ ಗೌರಿಬಿದನೂರು ತಾ॥ ಮಂಚೇನಹಳ್ಳಿಯ ಪಿ.ವಿ. ಗಾಯತ್ರಿ ಕಲಾವಿಭಾಗದಲ್ಲಿ ಏಳನೇ ರ್‍ಯಾಂಕ್ ಗಳಿಸಿರುತ್ತಾರೆ. (ಇವರೇ ೨೦೦೨–೦೩ನೇ ಸಾಲಿನ ಬಿ.ಎಡ್. ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್ ಗಳಿಸಿರುತ್ತಾರೆ.)

## ವಾಣಿಜ್ಯ ಶಿಕ್ಷಣ

ವಾಣಿಜ್ಯ ಶಿಕ್ಷಣ ಸಾಮಾನ್ಯವಾಗಿ ಖಾಸಗಿ ಸಂಸ್ಥೆಗಳಿಂದ ನೀಡಲ್ಪಡುತ್ತದೆ. ಇವುಗಳ ಆಡಳಿತಾಧಿಕಾರವು ಶಿಕ್ಷಣ ಇಲಾಖೆಯ ಆಯುಕ್ತರಲ್ಲಿದೆ. ಅದಕ್ಕಾಗಿ ಈ ಸಂಸ್ಥೆಗಳು ಇಲಾಖೆಯ ಕಟ್ಟುಪಾಡುಗಳನ್ವಯ ನಡೆಯುತ್ತವೆ. ಕರ್ನಾಟಕ ಎಸ್ಸೆಸ್ಸೆಲ್ಸಿ ಪರೀಕ್ಷಾ ಮಂಡಳಿ ಈ ಸಂಸ್ಥೆಗಳ ಮೂಲಕ ಬೆರಳಚ್ಚು ಪ್ರಥಮ ದರ್ಜೆ, ಪ್ರೌಢ ದರ್ಜೆ, ಶೀಘ್ರಲಿಪಿ–ಪ್ರಥಮ ದರ್ಜೆ, ಪ್ರೌಢ ದರ್ಜೆ ಇತ್ಯಾದಿ ಪರೀಕ್ಷೆಗಳನ್ನು ದ್ವೈವಾರ್ಷಿಕವಾಗಿ ನಡೆಸುತ್ತದೆ. ಹತ್ತನೇ ತರಗತಿ ಉತ್ತೀರ್ಣರಾದ ಎಲ್ಲರೂ ಈ ಪರೀಕ್ಷೆಗಳಿಗೆ ಹಾಜರಾಗಬಹುದು.

೧೯೩೫ರಲ್ಲಿ ಕೆ.ಎಸ್. ಶಾಮಣ್ಣನವರಿಂದ ಕೋಲಾರದಲ್ಲಿ ಸ್ಥಾಪಿಸಲ್ಪಟ್ಟ ಶ್ರೀ ಶಾರದಾ ವಾಣಿಜ್ಯ ಶಿಕ್ಷಣ ಶಾಲೆ ಜಿಲ್ಲೆಯ ಪ್ರಥಮ ವಾಣಿಜ್ಯ ಶಿಕ್ಷಣ ಶಾಲೆಯಾಗಿದೆ. ೧೯೬೭–೬೮ನೇ ಸಾಲಿಗೆ ಜಿಲ್ಲೆಯಲ್ಲಿ ಒಟ್ಟು ೧೫ ವಾಣಿಜ್ಯ ಶಿಕ್ಷಣ ಶಾಲೆಗಳಿದ್ದು, ಇವುಗಳಲ್ಲಿ ಒಂದು ಸರಕಾರಿ ಸಂಸ್ಥೆಯಾಗಿದ್ದಿತು.

ಇದಲ್ಲದೆ ೧೯೬೫ಕ್ಕೆ ಮೊದಲು ಜಿಲ್ಲೆಯಲ್ಲಿ ಈ ಮುಂದೆ ನಮೂದಾಗಿರುವ ವಾಣಿಜ್ಯ ಶಿಕ್ಷಣ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದವು. ವಾಣಿವಿಲಾಸ್ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ರಾಬರ್ಟ್‌ಸನ್‌ಪೇಟೆ, ಕೆ.ಜಿ.ಎಫ್ (೧೯೫೧); ಗುರುದೇವ್ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್, ಕೆ.ಜಿ.ಎಫ್ (೧೯೫೪); ವಾಣಿವಿಲಾಸ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಛಾಂಪಿಯನ್ ರೀಫ್, ಕೆಜಿಎಫ್ (೧೯೫೬); ಶ್ರೀರಂಗನಾಥ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ರಾಬರ್ಟ್‌ಸನ್‌ಪೇಟೆ, ಕೆ.ಜಿ.ಎಫ್ (೧೯೫೮); ಶ್ರೀನಿವಾಸ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಕೋಲಾರ (೧೯೫೯); ದಿ ನಿಯೋ ಕಮರ್ಷಿಯಲ್ ಇನ್‌ಸ್ಟಿಟ್ಯೂಟ್, ಕೆಜಿಎಫ್ (೧೯೬೦); ಕಮರ್ಷಿಯಲ್ ಇನ್‌ಸ್ಟಿಟ್ಯೂಟ್, ಮಾರಿಕುಪ್ಪಂ, ಕೆ.ಜಿ.ಎಫ್.(ಫ್ರೆಂಡ್‌ಷಿಪ್ ಹೋಂಗೆ ಹೊಂದಿಕೊಂಡಿದ್ದು) (೧೯೬೧); ಶ್ರೀನಿವಾಸ ಇನ್‌ಸ್ಟಿಟ್ಯೂಟ್

ಆಫ್ ಕಾಮರ್ಸ್, ಚಿಕ್ಕಬಳ್ಳಾಪುರ (೧೯೬೧); ಅನಂತ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್, ಚಿಂತಾಮಣಿ (೧೯೬೨); ಶ್ರೀ ಕೃಷ್ಣ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್, ಚಿಕ್ಕಬಳ್ಳಾಪುರ (೧೯೬೨); ಭಾರತಿ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್, ಬಂಗಾರುಪೇಟೆ (೧೯೬೩); ವೆಂಕಟೇಶ್ವರ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್, ಬಾಗೇಪಲ್ಲಿ (೧೯೬೫) ಹಾಗೂ ಸರಕಾರಿ ಹೆಣ್ಣು ಮಕ್ಕಳ ವೃತ್ತಿ ಶಿಕ್ಷಣ ಸಂಸ್ಥೆ, ಗೌರಿಬಿದನೂರು.

ಕಂಪ್ಯೂಟರ್ ಶಿಕ್ಷಣ ಜನಪ್ರಿಯವಾಗುತ್ತಿರುವ ಈಚಿನ ದಿನಗಳಲ್ಲಿ ರಾಜ್ಯದ ಎಲ್ಲೆಡೆಯಂತೆ ಜಿಲ್ಲೆಯ ಹಲವಾರು ವಾಣಿಜ್ಯ ವಿದ್ಯಾಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣವನ್ನು ಬೋಧಿಸಲಾಗುತ್ತಿದೆ. ೨೦೦೪ರ ಡಿಸೆಂಬರ್‌ನಲ್ಲಿದ್ದಂತೆ ಜಿಲ್ಲೆಯಲ್ಲಿ ಒಟ್ಟು ೪೨ ವಾಣಿಜ್ಯ ವಿದ್ಯಾ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳ ತಾಲೂಕುವಾರು ಸಂಖ್ಯೆ ಹೀಗಿದ್ದಿತು – ಕೋಲಾರ–ಎಂಟು; ಮುಳಬಾಗಿಲು–ನಾಲ್ಕು; ಶ್ರೀನಿವಾಸಪುರ–ಎರಡು; ಚಿಂತಾಮಣಿ–ನಾಲ್ಕು; ಶಿಡ್ಲಘಟ್ಟ–ಒಂದು; ಚಿಕ್ಕಬಳ್ಳಾಪುರ–ಮೂರು; ಗೌರಿಬಿದನೂರು–ಎರಡು; ಮಾಲೂರು–ಒಂದು; ಬಂಗಾರುಪೇಟೆ–ಐದು ಮತ್ತು ಕೆ.ಜಿ.ಎಫ್–೧೨.

## ಉನ್ನತ ಶಿಕ್ಷಣ

ಮೈಸೂರು ವಿಶ್ವವಿದ್ಯಾಲಯವು ೧೯೧೬ರಲ್ಲಿಯೇ ಸ್ಥಾಪನೆಗೊಂಡಿದ್ದರೂ, ಕೋಲಾರ ಜಿಲ್ಲೆಯೂ ಸೇರಿದಂತೆ ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಮಹತ್ತರ ಪ್ರಗತಿ ಸಾಧನೆ ಆಗಿರಲಿಲ್ಲ. ಕೋಲಾರದಲ್ಲಿ ಮೊದಲಿಗೆ ಜಿಲ್ಲೆಯ ಕಾರಾಗೃಹ ನೆಲೆಗೊಂಡಿದ್ದ ಕಟ್ಟಡದಲ್ಲಿ ೧೯೪೮ರಲ್ಲಿ ಇಂಟರ್ ಮೀಡಿಯೇಟ್ ಕಾಲೇಜು ಸ್ಥಾಪನೆಯಾದದ್ದು ಈ ದಿಶೆಯಲ್ಲಿ ಮೊದಲ ಹೆಜ್ಜೆಯಾಯಿತು. ತದನಂತರದಲ್ಲಿ ಈ ಸಂಸ್ಥೆ ಪ್ರಥಮ ದರ್ಜೆ ಕಾಲೇಜಾಗಿ ಪರಿವರ್ತನೆಗೊಂಡಿತು. ೧೯೬೭ರ ವೇಳೆಗೆ ಜಿಲ್ಲೆಯಲ್ಲಿ ಈ ಮುಂದಿನ ನಾಲ್ಕು ಪ್ರಥಮ ದರ್ಜೆ ಕಾಲೇಜುಗಳು ಕಾರ್ಯ ನಿರ್ವಹಿಸುತ್ತಿದ್ದವು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕೆ.ಜಿ.ಎಫ್; ಮುನಿಸಿಪಲ್ ಪ್ರಥಮ ದರ್ಜೆ ಕಾಲೇಜು ಚಿಂತಾಮಣಿ; ನ್ಯಾಷನಲ್ ಕಾಲೇಜು, ಗೌರಿಬಿದನೂರು ಹಾಗೂ ಮುನಿಸಿಪಲ್ ಕಾಲೇಜು, ಚಿಕ್ಕಬಳ್ಳಾಪುರ.

ಕೋಲಾರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ೧೯೪೮ರಲ್ಲಿ ಇಂಟರ್ ಮೀಡಿಯೇಟ್ ಕಾಲೇಜು ಆಗಿ ಸ್ಥಾಪನೆಗೊಂಡಿತು. ೧೯೬೧ರಲ್ಲಿ ಈ ಸಂಸ್ಥೆ ಪ್ರಥಮ ದರ್ಜೆ ಕಾಲೇಜ್ ಆಗಿ ಪರಿವರ್ತನೆ ಹೊಂದಿದಾಗ, ಅದರಲ್ಲಿ ಒಟ್ಟು ೨೨೪ ವಿದ್ಯಾರ್ಥಿ/ವಿದ್ಯಾರ್ಥಿನಿಯರಿದ್ದರು. ಇಲ್ಲಿನ ಕಲಾ ವಿಭಾಗದಲ್ಲಿ ಇತಿಹಾಸ, ಅರ್ಥಶಾಸ್ತ್ರ ಮತ್ತು ತರ್ಕಶಾಸ್ತ್ರ (ಹೆಚ್.ಇ.ಎಲ್.) ಮತ್ತು ವಿಜ್ಞಾನ ವಿಭಾಗದಲ್ಲಿ ಭೌತಶಾಸ್ತ್ರ ರಾಸಾಯನಶಾಸ್ತ್ರ ಮತ್ತು ಗಣಿತಶಾಸ್ತ್ರ (ಪಿ.ಸಿ.ಎಮ್.)ಗಳೊಂದಿಗೆ ಸಂಸ್ಕೃತ, ಕನ್ನಡ, ಇಂಗ್ಲಿಷ್, ತೆಲುಗು, ತಮಿಳು, ಉರ್ದು ಮುಂತಾದ ಭಾಷೆಗಳನ್ನು ಬೋಧಿಸಲಾಗುತ್ತಿತ್ತು. ೧೯೫೭–೫೮ ರಿಂದ ಇಲ್ಲಿ ಪಿ.ಯು.ಸಿ ತರಗತಿಗಳು ಪ್ರಾರಂಭವಾದಾಗ, ಇತಿಹಾಸ, ಅರ್ಥಶಾಸ್ತ್ರ ಮತ್ತು ವಾಣಿಜ್ಯಶಾಸ್ತ್ರ ಹಾಗೂ ರಾಸಾಯನಶಾಸ್ತ್ರ ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ ಹೀಗೆ ಎರಡು ಐಚ್ಛಿಕ ವಿಭಾಗಗಳು ತೆರೆಯಲ್ಪಟ್ಟವು. ೧೯೬೦–೬೧ರ ವೇಳೆಗೆ ಇಲ್ಲಿ ಒಟ್ಟು ೩೭೦ ಬಾಲಕ ಬಾಲಕಿಯರಿದ್ದು, ಇವರಲ್ಲಿ ೯೦ ಮಂದಿ ಕಲಾವಿಭಾಗ ಹಾಗೂ ೨೮೦ ಮಂದಿ ವಿಜ್ಞಾನ ವಿಭಾಗದಲ್ಲಿ ವ್ಯಾಸಾಂಗ ಮಾಡುತ್ತಿದ್ದರು. ಆಗ ಬೋಧಕ ಸಿಬ್ಬಂದಿ ಸಂಖ್ಯೆ ೧೯ ಆಗಿದ್ದಿತು. ಈ ಸಂಸ್ಥೆಯಿಂದ ಮೈಸೂರು ವಿಶ್ವವಿದ್ಯಾಲಯದ ಬಿಎ., ಬಿಎಸ್ಸಿ ಪದವಿ ಪರೀಕ್ಷೆಗಳಿಗೆ ಪ್ರಥಮ ತಂಡ ೧೯೬೪ರಲ್ಲಿ ಹಾಜರಾಯಿತು. ೧೯೬೭ರ ವೇಳೆಗೆ ಈ ಸಂಸ್ಥೆಯಲ್ಲಿ ಒಟ್ಟು ೯೦೮ ವಿದ್ಯಾರ್ಥಿ/ವಿದ್ಯಾರ್ಥಿನಿಯರಿದ್ದು, ಅವರಲ್ಲಿ ೧೪೧ (೧೦೬ ಗಂ– ೩೫ಹೆ) ಪಿಯುಸಿ ಕಲಾ ವಿಭಾಗದಲ್ಲಿಯೂ, ೩೪೩ (೩೦೨ ಗಂ– ೪೧ಹೆ) ಪಿಯುಸಿ ವಿಜ್ಞಾನ ವಿಭಾಗದಲ್ಲಿಯೂ; ೯೪ (೭೫ ಗಂ–೧೯ ಹೆ) ಪದವಿ ಕಲಾ ವಿಭಾಗದಲ್ಲಿಯೂ ಹಾಗೂ ೩೩೦ (೨೮೩ಗಂ–೪೭ಹೆ) ಪದವಿ ವಿಜ್ಞಾನ ವಿಭಾಗದಲ್ಲಿಯೂ ವ್ಯಾಸಂಗ ಮಾಡುತ್ತಿದ್ದರು. ಬೋಧಕ ಸಿಬ್ಬಂದಿಯಲ್ಲಿ ಮೇಲ್ಕಂಡ ವರ್ಷದಲ್ಲಿ ಒಬ್ಬ ಪ್ರಿನ್ಸಿಪಾಲರಲ್ಲದೆ ೩೧ ಉಪನ್ಯಾಸಕರು, ನಾಲ್ಕು ಪ್ರಾತ್ಯಕ್ಷಿಕೆದಾರರು (ಡೆಮಾನ್ಸ್ಟ್ರೇಟರ್ಸ್) ಇದ್ದರು.

೧೯೮೪ರ ವರೆಗೆ ಇಲ್ಲಿ ಸಹ ಶಿಕ್ಷಣಕ್ಕೆ ಅವಕಾಶವಿದ್ದಿತು. ಈ ವರ್ಷ ಸಂಸ್ಥೆ ವಿಭಜಿಸಲ್ಪಟ್ಟು, ಕೋಲಾರದಲ್ಲಿಯೇ ಹೆಣ್ಣು ಮಕ್ಕಳಿಗಾಗಿ ಒಂದು ಪ್ರಥಮ ದರ್ಜೆ ಕಾಲೇಜಿನ ಸ್ಥಾಪನೆಯಾಯಿತು. ಈ ಸಂಸ್ಥೆಯಲ್ಲಿ ೧೯೫೦ರಲ್ಲಿ ಹೆಸರಾಂತ ಕನ್ನಡ ಕವಿ, ಕನ್ನಡದ ವಿದ್ವತ್ ಪ್ರಪಂಚದ ಅಸಾಮಾನ್ಯ ತಾರೆ, ಉತ್ತಮ ವಿಮರ್ಶಕ ಹಾಗೂ ವ್ಯಾಕರಣ ಪಂಡಿತರಾದ

ಶ್ರೀ ತೀ. ನಂ ಶ್ರೀಕಂಠಯ್ಯನವರು ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿರುತ್ತಾರೆ. ೨೦೦೪ರ ಆಗಸ್ಟ್ ವೇಳೆಗೆ ಈ ಸಂಸ್ಥೆಯಲ್ಲಿ ಒಟ್ಟು ೧೮೮೮ ಮಂದಿ ವ್ಯಾಸಂಗ ಮಾಡುತ್ತಿದ್ದರು.

ಬಾಗೇಪಲ್ಲಿ ಹಾಗೂ ಗೌರಿಬಿದನೂರು ಗಳನ್ನು ಹೊರತುಪಡಿಸಿ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಹಾಗೂ ಚಿಂತಾಮಣಿ ಮತ್ತು ಕೋಲಾರಗಳಲ್ಲಿ ಮಹಿಳೆಯರ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಉಳಿದಂತೆ ಎಲ್ಲೆಡೆ ಅನುದಾನಿತ ಹಾಗೂ ಅನುದಾನ ರಹಿತ ಪ್ರಥಮ ದರ್ಜೆ ಕಾಲೇಜುಗಳು ಶೈಕ್ಷಣಿಕ ರಂಗದಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿವೆ.

ಜಿಲ್ಲೆಯಲ್ಲಿ ೨೦೦೪ರ ಆಗಸ್ಟ್‌ನಲ್ಲಿದ್ದಂತೆ ೧೨ ಸರ್ಕಾರಿ ಐದು ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳಲ್ಲಿ ಕಲಾ ವಿಭಾಗದಲ್ಲಿ ಒಟ್ಟು ೬,೫೯೬, ವಾಣಿಜ್ಯ ವಿಭಾಗದಲ್ಲಿ ಒಟ್ಟು ೧,೨೮೬ ಹಾಗೂ ವಿಜ್ಞಾನ ವಿಭಾಗದಲ್ಲಿ ಒಟ್ಟು ೯೧೮ ವಿದ್ಯಾರ್ಥಿ–ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದರು.

**ಸರಕಾರಿ ಪ್ರಥಮ ದರ್ಜೆ ಕಾಲೇಜು, ಉರಗಾಂ:**

ಈ ಸಂಸ್ಥೆ ೧೯೭೨–೭೩ನೇ ಸಾಲಿನಲ್ಲಿ ಪಿಯುಸಿ ತರಗತಿಗಳೊಂದಿಗೆ ಪ್ರಾರಂಭವಾಗಿ, ಮರುವರ್ಷ ಪ್ರಥಮ ದರ್ಜೆ ಕಾಲೇಜಾಗಿ ಮಾರ್ಪಾಡಾಯಿತು. ಪಿಯುಸಿ ಕಲಾವಿಭಾಗದಲ್ಲಿ ೮೨ ಮತ್ತು ವಿಜ್ಞಾನ ವಿಭಾಗದಲ್ಲಿ ೧೫೫ ಹಾಗೂ ಪದವಿ ಕಲಾ ವಿಭಾಗದಲ್ಲಿ ೧೫೫ ಹಾಗೂ ಪದವಿ ಕಲಾ ವಿಭಾಗದಲ್ಲಿ ೨೪ ಮತ್ತು ವಿಜ್ಞಾನ ವಿಭಾಗದಲ್ಲಿ ೪೦ ಮಂದಿ ವ್ಯಾಸಂಗ ಮಾಡುತ್ತಿದ್ದರು. ಇಲ್ಲಿ ೧೯೭೬–೭೭ನೇ ಸಾಲಿನಲ್ಲಿ ವಾಣಿಜ್ಯ ವಿಭಾಗವು ೧೨ ಮಂದಿ ವಿದ್ಯಾರ್ಥಿಗಳೊಂದಿಗೆ ಪ್ರಾರಂಭವಾಯಿತು. ಪ್ರಾಂಶುಪಾಲರಲ್ಲದೆ ಇಲ್ಲಿ ೧೯೭೭ರ ವೇಳೆಗೆ ಐದು ಮಂದಿ ಪ್ರವಾಚಕರು, ೨೮ ಮಂದಿ ಉಪನ್ಯಾಸಕರು ಹಾಗೂ ಒಬ್ಬ ಪ್ರಾತ್ಯಕ್ಷಿಕೆದಾರರು ಕಾರ್ಯನಿರ್ವಹಿಸುತ್ತಿದ್ದರು. ಸಂಸ್ಥೆ ಸುಮಾರು ೬,೦೦೦ ಗ್ರಂಥಗಳ ಒಂದು ಉಪಯುಕ್ತ ಗ್ರಂಥಾಲಯವನ್ನು ಹೊಂದಿದ್ದಿತು.

**ನ್ಯಾಷನಲ್ ವಿದ್ಯಾಸಂಸ್ಥೆಯ ಶಾಲಾ ಕಾಲೇಜುಗಳು:**

ಬೆಂಗಳೂರಿನ ದಿ ನ್ಯಾಷನಲ್ ಎಜುಕೇಷನ್ ಸೊಸೈಟಿಯ ವತಿಯಂದ ಜಿಲ್ಲೆಯಲ್ಲಿ ಉತ್ತಮ ಶೈಕ್ಷಣಿಕ ಸುಧಾರಣೆಯಾಗಿದ್ದು, ಈ ಸಂಸ್ಥೆಯ ವತಿಯಿಂದ ನಡೆಸಲ್ಪಡುತ್ತಿರುವ ಶಾಲಾ ಕಾಲೇಜುಗಳು ಜನರ ಶೈಕ್ಷಣಿಕ ಆಶೋತ್ತರಗಳನ್ನು ಪೂರೈಸುತ್ತಿವೆ. ಗಾಂಧೀಜಿಯವರ ಶಿಷ್ಯರಾದ ಡಾ॥ ಹೆಚ್. ನರಸಿಂಹಯ್ಯನವರು ತಮ್ಮ ಹುಟ್ಟೂರಾದ ಗೌರಿಬಿದನೂರು ತಾಲೂಕಿನ ಹೊಸೂರಿನಲ್ಲಿ ೧೯೬೫ರಲ್ಲಿ ನ್ಯಾಷನಲ್ ಪ್ರೌಢಶಾಲೆಯನ್ನು ಸ್ಥಾಪಿಸಿದರು. ಮೇಲ್ಕಂಡ ಮಂಡಳಿಯು ಜಿಲ್ಲೆಯಲ್ಲಿ ಸ್ಥಾಪಿಸಿದ ಪ್ರಥಮ ಶಾಲೆ ಇದಾಯಿತು.

ತದನಂತರ ೧೯೬೪ರಲ್ಲಿ ಗೌರಿಬಿದನೂರಿನಲ್ಲಿ ಅಶ್ವತ್ಥಯ್ಯ ಇಸ್ತೂರಿ ಸಂಜೀವಮ್ಮ ನ್ಯಾಷನಲ್ ಕಾಲೇಜು ಸ್ಥಾಪನೆಗೊಂಡಿತು. ಜನರ ಒತ್ತಾಯದ ಮೇರೆಗೆ ಹಾಗೂ ಕೋರಿಕೆಯಂತೆ ಬಾಗೇಪಲ್ಲಿಯಲ್ಲಿ ಇದೇ ಆಡಳಿತ ಮಂಡಳಿ ೧೯೭೮ರಲ್ಲಿ ನ್ಯಾಷನಲ್ ಕಾಲೇಜನ್ನು ಸ್ಥಾಪಿಸಿತು. ಸುಮಾರು ೧೦ ಎಕರೆ ಪ್ರದೇಶದಲ್ಲಿ ಸ್ವಂತ ಕಟ್ಟಡ ಹೊಂದಿರುವ ಈ ಸಂಸ್ಥೆ ಗ್ರಾಮೀಣ ಜನರ ಶೈಕ್ಷಣಿಕ ಏಳಿಗೆಗೆ ಕಾರಣವಾಗಿದೆ. ಮೇಲ್ಕಂಡ ಆಡಳಿತ ಮಂಡಳಿ ೧೯೮೫ರಲ್ಲಿ ಮುಳಬಾಗಿಲು ತಾಲೂಕಿನ ಮುಡಿಯನೂರಿನಲ್ಲಿ ಮಹಾತ್ಮಾ ಗಾಂಧಿ ನ್ಯಾಷನಲ್ ಪ್ರೌಢ ಶಾಲೆ ಹಾಗೂ ಶ್ರೀನಿವಾಸಪುರ ತಾಲೂಕಿನ ಎಲ್ದೂರಿನಲ್ಲಿ ನ್ಯಾಷನಲ್ ಪ್ರೌಢಶಾಲೆಯನ್ನು ಪ್ರಾರಂಭಿಸಿದೆ.

**ಎಇಎಸ್ ನ್ಯಾಷನಲ್ ಕಾಲೇಜು ಗೌರಿಬಿದನೂರು:**

ಅಶ್ವತ್ಥಯ್ಯ ಎಸ್ತೂರಿ ಸಂಜೀವಮ್ಮ ನ್ಯಾಷನಲ್ ಕಾಲೇಜು, ಬೆಂಗಳೂರಿನ ದಿ ನ್ಯಾಷನಲ್ ಎಜುಕೇಷನ್ ಸೊಸೈಟಿ, ಮೈಸೂರು, ಇದರ ವತಿಯಿಂದ ೧೯೬೪ರಲ್ಲಿ ೮೮ ಮಕ್ಕಳೊಂದಿಗೆ ಪಿಯುಸಿ ವಿಜ್ಞಾನ ತರಗತಿಗಳನ್ನು ಪ್ರಾರಂಭಿಸಿತು. ೧೯೬೫–೬೬ನೇ ಸಾಲಿಗೆ ಇಲ್ಲಿ ವಿಜ್ಞಾನದಲ್ಲಿ ಪದವಿ ತರಗತಿಯು ೬೪ ವಿದ್ಯಾರ್ಥಿ/ವಿದ್ಯಾರ್ಥಿನಿಯರೊಂದಿಗೆ ಪ್ರಾರಂಭವಾಯಿತು. ವಿಜ್ಞಾನದ ವಿಷಯಗಳಿಗೆ ಉತ್ತಮ ಪ್ರಯೋಗಾಲಯ ಹೊಂದಿದ ಈ ಸಂಸ್ಥೆಯಲ್ಲಿ ೧೯೬೮ರ ವೇಳೆಗೆ ಒಟ್ಟು ೩೦೮ ಮಂದಿ

ವ್ಯಾಸಂಗ ಮಾಡುತ್ತಿದ್ದರು. ಸುತ್ತಮುತ್ತಲ ಗ್ರಾಮೀಣ ಮಕ್ಕಳೇ ಹೆಚ್ಚಾಗಿದ್ದುದ್ದರಿಂದ, ಇಲ್ಲಿ ಅವರಿಗೆ ವಿದ್ಯಾರ್ಥಿ ನಿಲಯದ ಸೌಲಭ್ಯವೂ ಇದ್ದಿತು.

**ಮುನಿಸಿಪಲ್ ಪ್ರಥಮ ದರ್ಜೆ ಕಾಲೇಜು, ಚಿಂತಾಮಣಿ:**

ಚಿಂತಾಮಣಿಯ ಟೌನ್ ಮುನಿಸಿಪಾಲಿಟಿ ವತಿಯಿಂದ ೧೯೬೫–೬೬ರಲ್ಲಿ ಪ್ರಾರಂಭವಾದ ಪ್ರಥಮ ದರ್ಜೆ ಕಾಲೇಜು ಕಲೆ ಮತ್ತು ವಿಜ್ಞಾನ ವಿಷಯಗಳಲ್ಲಿ ಪಿಯುಸಿ ಹಾಗೂ ಪದವಿ ಶಿಕ್ಷಣ ನೀಡುವ ಉದ್ದೇಶ ಹೊಂದಿದ್ದಿತು. ೧೯೬೬–೬೭ನೇ ಸಾಲಿನಲ್ಲಿ ಪಿಯುಸಿ ಕಲಾ ವಿಭಾಗದಲ್ಲಿ ೨೪, ವಿಜ್ಞಾನ ವಿಭಾಗದಲ್ಲಿ ೨೧೭, ಪದವಿ (ಬಿಎಸ್ಸಿ) ವಿಭಾಗದಲ್ಲಿ ಒಟ್ಟು ೬೦ ಮಂದಿ ವ್ಯಾಸಂಗ ಮಾಡುತ್ತಿದ್ದರು. ಬೋಧಕ ಸಿಬ್ಬಂದಿಯಲ್ಲಿ ಒಬ್ಬ ಪ್ರಾಂಶುಪಾಲ, ಒಬ್ಬ ಪ್ರಾಧ್ಯಾಪಕ, ಎಂಟು ಮಂದಿ ಉಪನ್ಯಾಸಕರು, ಮೂರು ಮಂದಿ ಪ್ರಾತ್ಯಕ್ಷಿಕೆದಾರರು ಹಾಗೂ ಒಬ್ಬ ಟ್ಯೂಟರ್ ಇದ್ದರು. ವಿದ್ಯಾರ್ಥಿನಿಲಯ ಹೊಂದಿದ್ದ ಈ ಸಂಸ್ಥೆಯಲ್ಲಿ ಸುಮಾರು ೨,೦೦೦ ಪುಸ್ತಕಗಳ ಗ್ರಂಥಾಲಯವೂ ಇದ್ದಿತು.

## ತಾಂತ್ರಿಕ ಶಿಕ್ಷಣ

ಎರಡನೇ ಪಂಚವಾರ್ಷಿಕ ಯೋಜನೆಯಡಿ ತಾಂತ್ರಿಕ ವಿದ್ಯಾಭಿವೃದ್ಧಿಗಾಗಿ ಸರ್ಕಾರದಿಂದ ಜಿಲ್ಲೆಯಲ್ಲಿ ಪ್ರಾರಂಭಗೊಂಡ ಎರಡು ಪ್ರಮುಖ ತಾಂತ್ರಿಕ ವಿದ್ಯಾ ಸಂಸ್ಥೆಗಳೆಂದರೆ, ಚಿಂತಾಮಣಿಯ ಪಾಲಿಟೆಕ್ನಿಕ್ ಹಾಗೂ ಕೆಜಿಎಫ್‌ನ 'ಸ್ಕೂಲ್ ಆಫ್ ಮೈನ್ಸ್'. ಮೊದಲ ಸಂಸ್ಥೆಯಾದ ಚಿಂತಾಮಣಿ ಪಾಲಿಟೆಕ್ನಿಕ್‌ನಲ್ಲಿ ೧೯೫೭–೫೮ರ ವರೆಗೆ ಸಿವಿಲ್ ಹಾಗೂ ಎಲೆಕ್ಟ್ರಿಕಲ್ ಇಂಜನೀಯರಿಂಗ್‌ನಲ್ಲಿ ಮಾತ್ರ ಡಿಪ್ಲೊಮಾ ನೀಡಲಾಗುತ್ತಿತ್ತು. ಅವುಗಳಿಗೆ ಕ್ರಮವಾಗಿ ೨೪ ಹಾಗೂ ೩೦ ಮಕ್ಕಳಿಗೆ ಪ್ರವೇಶಾವಕಾಶವಿದ್ದಿತು. ೧೯೫೮ರಲ್ಲಿ ಇದನ್ನು ಸಂಪೂರ್ಣ ಪಾಲಿಟೆಕ್ನಿಕ್ ಸಂಸ್ಥೆಯಾಗಿ ಮಾರ್ಪಡಿಸಿ, ಮೆಕ್ಯಾನಿಕಲ್ ವಿಭಾಗವನ್ನು ಪ್ರಾರಂಭಿಸಿ, ಸಿವಿಲ್ ವಿಭಾಗಕ್ಕೆ ೨೫ ಹಾಗೂ ಎಲೆಕ್ಟ್ರಿಕಲ್ ಮತ್ತು ಮೆಕ್ಯಾನಿಕಲ್ ವಿಭಾಗಗಳಿಗೆ ತಲಾ ೩೦ ಮಕ್ಕಳಿಗೆ ಪ್ರವೇಶಾವಕಾಶ ಕಲ್ಪಿಸಲಾಯಿತು. ಸಂಸ್ಥೆಯ ಅಭಿವೃದ್ಧಿಯ ದೃಷ್ಟಿಯಿಂದ ಕೇಂದ್ರ ಹಾಗೂ ರಾಜ್ಯ ಸರಕಾರಗಳು ೫೦:೫೦ ಅನುಪಾತದಲ್ಲಿ ಒಟ್ಟು ಏಳು ಲಕ್ಷ ೮೫ ಸಾವಿರ ರೂ.ಗಳನ್ನು ಮಂಜೂರು ಮಾಡಿತು. ೧೯೬೩–೬೪ ರಿಂದ ಎಲ್ಲಾ ವಿಭಾಗಗಳಲ್ಲಿ ವಾರ್ಷಿಕ ಪ್ರವೇಶಾವಕಾಶ ೪೦ಕ್ಕೆ ಹೆಚ್ಚಿಸಲಾಯಿತು. ಈ ಸಂಸ್ಥೆಯಲ್ಲಿ ನೀಡಲ್ಪಡುವ ತರಬೇತಿಯ ಮಟ್ಟವನ್ನು ನ್ಯಾಷನಲ್ ಸರ್ಟಿಫಿಕೇಟ್ ಮಟ್ಟಕ್ಕೆ ಏರಿಸುವ ಉದ್ದೇಶದಿಂದ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯ ಸಮಿತಿ ಇಲ್ಲಿಗೆ ಭೇಟಿ ನೀಡಿ, ಈ ಸಂಸ್ಥೆಯ ಸರ್ವತೋಮುಖ ಅಭಿವೃದ್ಧಿಗೆ ಶಿಫಾರಸ್ಸು ಮಾಡಿತು. ಇದರಂತೆ ರೂ. ೦.೯೪ ಲಕ್ಷ ಸಲಕರಣೆಗಳ ಮೇಲೆ ಹಾಗೂ ೧.೨೫ ಲಕ್ಷ ಕಟ್ಟಡದ ಮೇಲೆ ಉಂಟಾದ ಖರ್ಚಿನ ಅರ್ಧ ಭಾಗವನ್ನು ಕೇಂದ್ರ ಸರಕಾರಿ ಭರಿಸಿತು. ೧೯೬೭ರಲ್ಲಿ ಇಲ್ಲಿ ಒಟ್ಟು ೩೨೫ ಮಂದಿ ವ್ಯಾಸಂಗ ಮಾಡುತ್ತಿದ್ದರು. ಬೋಧಕ ಸಿಬ್ಬಂದಿ ಸಂಖ್ಯೆ ೨೬ ಆಗಿದ್ದು, ಹಾಸ್ಟೆಲ್ ಸೌಲಭ್ಯವೂ ಇದ್ದಿತು. ೨೦೦೪–೦೫ನೇ ಸಾಲಿಗೆ ಸಂಸ್ಥೆಯಲ್ಲಿ ಒಟ್ಟು ದಾಖಲಾತಿ ೭೩೬ ಆಗಿದ್ದು, ಇದರಲ್ಲಿ ೧೩೩ ಹೆಣ್ಣುಮಕ್ಕಳು ಸೇರಿದ್ದರು. ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಸಂಖ್ಯೆ ೭೯ ಆಗಿದ್ದಿತು.

**ಸ್ಕೂಲ್ ಆಫ್ ಮೈನ್ಸ್, ಕೆ.ಜಿ.ಎಫ್**

ಕೇಂದ್ರ ಸರಕಾರದ ಆದೇಶದಂತೆ ಗಣಿ ತಾಂತ್ರಿಕತೆಯಲ್ಲಿ ತರಬೇತಿ ನೀಡುವ ಉದ್ದೇಶದಿಂದ ಕೆ.ಜಿ.ಎಫ್.ನ ಉರಗಾಂನಲ್ಲಿ ೧೯೫೭ರಲ್ಲಿ ಸ್ಕೂಲ್ ಆಫ್ ಮೈನ್ಸ್ ಪಾಲಿಟೆಕ್ನಿಕ್ ಸಂಸ್ಥೆ ಪ್ರಾರಂಭವಾಯಿತು. ನಂತರ ಇದು ಕೋರಮಂಡಲ್‌ಗೆ ಸ್ಥಳಾಂತರಗೊಂಡಿತು. ಇಲ್ಲಿ ಮೂರು ವರ್ಷದ ಮೈನಿಂಗ್ ಮತ್ತು ಮೈನ್ಸ್ ಸರ್ವೆಯಿಂಗ್ ಕೋರ್ಸ್‌ನಲ್ಲಿ ಡಿಪ್ಲೊಮಾ ನೀಡಲಾಗುತ್ತಿತ್ತು. ಯೋಜನೆಗೆ ಒಟ್ಟು ಒಂಬತ್ತು ಲಕ್ಷ ೭೦ ಸಾವಿರದ ವೆಚ್ಚವಿದ್ದು, ಇದರಲ್ಲಿ ಪ್ರಾರಂಭದಲ್ಲಿ ೪೦ ಮಂದಿಗೆ ಪ್ರವೇಶಾವಕಾಶವಿದ್ದಿತು. ೧೯೫೭–೫೮ರ ವರೆಗೆ ಆವರ್ತಕ ವೆಚ್ಚದ ಮೂರನೇ ಎರಡು ಭಾಗವನ್ನು ಅನಾವರ್ತಕ ವೆಚ್ಚದ ನಾಲ್ಕನೇ ಮೂರು ಭಾಗವನ್ನು ಕೇಂದ್ರ ಸರಕಾರ ಭರಿಸುತ್ತಿತ್ತು. ತದನಂತರ ಐದು ವರ್ಷಗಳವರೆಗೆ ಇಡೀ ವೆಚ್ಚವನ್ನು ಸಂಪೂರ್ಣವಾಗಿ ಭರಿಸಿತು.

ಬೆಂಗಳೂರಿನ ಶ್ರೀ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್‌ನಲ್ಲಿಯೂ ನಡೆಯುತ್ತಿದ್ದ ಗಣಿ ತಾಂತ್ರಿಕತೆಯ ತರಗತಿಗಳು ರದ್ದಾದ ನಂತರ ೧೯೬೭–೬೮ ರಿಂದ ಈ ಸಂಸ್ಥೆಯ ಪ್ರವೇಶಾವಕಾಶವನ್ನು ೪೦ ರಿಂದ ೬೦ಕ್ಕೆ ಏರಿಸಲಾಯಿತು. ಈ ವರ್ಷಕ್ಕೆ ಬೋಧಕ ಸಿಬ್ಬಂದಿಯಲ್ಲಿ ಒಬ್ಬ ಪ್ರಾಂಶುಪಾಲರಲ್ಲದೆ, ೧೧ ಉಪನ್ಯಾಸಕರು ಹಾಗೂ ಒಬ್ಬ ಸಹಾಯಕ ಉಪನ್ಯಾಸಕರಿದ್ದರು. ೧೨೦ ಮಂದಿಗೆ ಅವಕಾಶವುಳ್ಳ, ಸುಮಾರು ಮೂರು ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಿತವಾದ ಎರಡು ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಾಣವಾದ ಸಿಬ್ಬಂದಿ ವಸತಿಗೃಹಗಳನ್ನು ಹೊಂದಿದ್ದ ಈ ಸಂಸ್ಥೆಯಲ್ಲಿ ದವಾಖಾನೆ ಹಾಗೂ ಉಪಹಾರಗೃಹಗಳಿಗಾಗಿ ವಾರ್ಷಿಕ ೧೫,೦೦೦ ರೂ. ವೆಚ್ಚವಾಗುತ್ತಿತ್ತು. ಇಲ್ಲಿ ೧೯೬೭ರಲ್ಲಿ ಒಟ್ಟು ೪೭ ಮಂದಿ ವ್ಯಾಸಂಗ ಮಾಡುತ್ತಿದ್ದರು. ಮೈನಿಂಗ್ ಕೋರ್ಸ್‌ಗೆ ಬೇಡಿಕೆ ಕಡಿಮೆಯಾದ್ದರಿಂದ ಇಲ್ಲಿ ೧೯೯೬ರಲ್ಲಿ ಕೇಂದ್ರ ಸರಕಾರದ ಮಾನವ ಸಂಪನ್ಮೂಲ ಸಚಿವಾಲಯ ವತಿಯಿಂದ ಸಮುದಾಯ ಪಾಲಿಟೆಕ್ನಿಕ್ ಅನ್ನೂ ಪ್ರಾರಂಭಿಸಲಾಗಿದೆ. ಇಲ್ಲಿ ಹೊಲಿಗೆ, ಕಸೂತಿ, ಕನ್ನಡ ಬೆರಳಚ್ಚು, ವೈರಿಂಗ್, ಮೋಟಾರ್ ರೀ–ವೈಂಡಿಂಗ್ ಮತ್ತು ಅಗರಬತ್ತಿ ತಯಾರಿಕೆಯ ವಿಷಯಗಳನ್ನು ಬೋಧಿಸಲಾಗುತ್ತಿದೆ. ಮೇಲ್ಕಾಣಿಸಿದ ವಿಷಯಗಳೇ ಅಲ್ಲದೆ ಮೆಕ್ಯಾನಿಕಲ್ ಮತ್ತು ಕಂಪ್ಯೂಟರ್ ಸೈನ್ಸ್ ವಿಷಯಗಳಲ್ಲಿ ಎರಡು ವರ್ಷ ಅವಧಿಯ ಸ್ನಾತಕೋತ್ತರ ಡಿಪ್ಲೊಮಾ ನೀಡಲಾಗುತ್ತಿದೆ. ೨೦೦೪–೦೫ರಲ್ಲಿ ಮೈನಿಂಗ್ ತರಗತಿಯಲ್ಲಿ ೪೦, ಮೆಕ್ಯಾನಿಕಲ್ ಹಾಗೂ ಕಂಪ್ಯೂಟರ್ ತರಗತಿಗಳಲ್ಲಿ ತಲಾ ೬೦ ಮಂದಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು. ಸಂಸ್ಥೆ ನಡೆಸುತ್ತಿರುವ ವಿದ್ಯಾರ್ಥಿ ನಿಲಯದಲ್ಲಿ ವಾರ್ಷಿಕ ೧೨೦ ಮಂದಿಗೆ ಪ್ರವೇಶಾವಕಾಶವಿದೆ.

ಇದಲ್ಲದೆ ಜಿಲ್ಲೆಯ ಮತ್ತೊಂದು ಸರಕಾರಿ ಪಾಲಿಟೆಕ್ನಿಕ್ ಸಂಸ್ಥೆ ಬಾಗೇಪಲ್ಲಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಚಿಕ್ಕಬಳ್ಳಾಪುರದಲ್ಲಿ ಕೆವಿಟಿ ಪಾಲಿಟೆಕ್ನಿಕ್ ಅನುದಾನಿತ ಸಂಸ್ಥೆಯಾಗಿದೆ. ಜಿಲ್ಲೆಯ ಇತರ ಅನುದಾನ ರಹಿತ ಪಾಲಿಟೆಕ್ನಿಕ್ ಗಳೆಂದರೆ, ಪವನ್ ಪಾಲಿಟೆಕ್ನಿಕ್ ಕೋಲಾರ, ರಾಮಕೃಷ್ಣ ಪಾಲಿಟೆಕ್ನಿಕ್, ಶ್ರೀನಿವಾಸಪುರ ಎಸ್.ವಿ.ಐ.ಟಿ. ಪಾಲಿಟೆಕ್ನಿಕ್ ಮುಳಬಾಗಿಲು, ಆನಂದಮಾರ್ಗ ಪಾಲಿಟೆಕ್ನಿಕ್ ಮಾಲೂರು ಹಾಗೂ ಭಾರತ್ ಪಾಲಿಟೆಕ್ನಿಕ್ ಬಂಗಾರಪೇಟೆ. ಜಿಲ್ಲೆಯ ವಿದ್ಯಾರ್ಥಿಗಳಿಗೆ ಉನ್ನತ ತಾಂತ್ರಿಕ ಶಿಕ್ಷಣದ ಕೊರತೆ ನೀಗಿಸಲು ಈ ಮುಂದೆ ಎರಡು ಇಂಜನೀಯರಿಂಗ್ ಕಾಲೇಜುಗಳೂ ಕಾರ್ಯನಿರ್ವಹಿಸುತ್ತಿವೆ.

**ಗೋಲ್ಡನ್ ವ್ಯಾಲಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ**

ಈ ಸಂಸ್ಥೆಯು ಕೆ.ಜಿ.ಎಫ್. ನಲ್ಲಿ ೧೯೮೬ರಲ್ಲಿ ಗೋಲ್ಡನ್ ವ್ಯಾಲಿ ಎಜುಕೇಷನಲ್ ಟ್ರಸ್ಟ್ ವತಿಯಿಂದ ಸ್ಥಾಪಿಸಲ್ಪಟ್ಟಿತು. ಸುಮಾರು ೨೫ ಎಕರೆ ಪ್ರದೇಶದಲ್ಲಿ ತನ್ನ ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಸಂಸ್ಥೆಯಲ್ಲಿ ಜಾಗತಿಕ ಜಗತ್ತಿನ ಸಕಲ ಶೈಕ್ಷಣಿಕ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ೨೦೦೪–೦೫ನೇ ಸಾಲಿಗೆ ಮೆಕ್ಯಾನಿಕಲ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್, ಮೈನಿಂಗ್ ಇಂಜನೀಯರಿಂಗ್, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಷನ್, ಕಂಪ್ಯೂಟರ್ ಸೈನ್ಸ್ ಮುಂತಾದ ವಿಷಯಗಳಲ್ಲಿ ಬಿ.ಇ. ಪದವಿಗಾಗಿ ಇಲ್ಲಿ ಸುಮಾರು ೧೩೦೦ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಸುಮಾರು ೩೦ ಮಂದಿ ಬೋಧಕ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದರು. ಹೆಣ್ಣು ಹಾಗೂ ಗಂಡು ಮಕ್ಕಳಿಗೆ ಪ್ರತ್ಯೇಕ ಹಾಸ್ಟೆಲ್ ವ್ಯವಸ್ಥೆ ಇರುತ್ತದೆ.

**ಎಸ್.ಜೆ.ಸಿ. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ:**

ಚಿಕ್ಕಬಳ್ಳಾಪುರ ಬೆಂಗಳೂರು ರಸ್ತೆಯಲ್ಲಿ ೫೩ ಎಕರೆ ಪ್ರದೇಶದಲ್ಲಿ ೧೯೮೬ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ವತಿಯಿಂದ ಪ್ರಾರಂಭಿಸಲ್ಪಟ್ಟ ಈ ಸಂಸ್ಥೆ ಪ್ರಸ್ತುತ ಆರು ಪದವಿ ಹಾಗೂ ನಾಲ್ಕು ಸ್ನಾತಕೋತ್ತರ ವಿಷಯಗಳಲ್ಲಿ ತಾಂತ್ರಿಕ ಶಿಕ್ಷಣ ನೀಡುತ್ತಿದ್ದು, ೨೦೦೪ರ ಡಿಸೆಂಬರ್ ವೇಳೆಗೆ ಸುಮಾರು ೨,೦೦೦ ವಿದ್ಯಾರ್ಥಿಗಳನ್ನು ಹಾಗೂ ೯೦ ಮಂದಿ ಬೋಧಕ ಸಿಬ್ಬಂದಿ ಹೊಂದಿದ್ದಿತು.

**ಐಟಿಐ ಸಂಸ್ಥೆಗಳು:** ಜಿಲ್ಲೆಯ ಪ್ರಥಮ ಐಟಿಐ ಸಂಸ್ಥೆ ೧೯೫೮ರಲ್ಲಿ ಕೆ.ಜಿ.ಎಫ್.ನ ಬೆಮಲ್ ನಗರದಲ್ಲಿ ಸ್ಥಾಪಿಸಲ್ಪಟ್ಟಿತು. ಉದ್ಯೋಗ ವಿನಿಮಯ ಹಾಗೂ ತರಬೇತಿ ಇಲಾಖೆಯ ಆಡಳಿತಕ್ಕೊಳಪಡುವ ಒಟ್ಟು ೨೬ ಐಟಿಐ ಸಂಸ್ಥೆಗಳು ಜಿಲ್ಲೆಯಲ್ಲಿ ೨೦೦೪–೦೫ನೇ ಸಾಲಿನಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅವುಗಳಲ್ಲಿ ೨೨ ರಾಜ್ಯ ಸೆಕ್ಟರಿಗೂ, ನಾಲ್ಕು ಜಿಲ್ಲಾ ಸೆಕ್ಟರಿಗೂ ಸೇರಿದ್ದವು. ಇವುಗಳಲ್ಲಿ ಐದು ಸರಕಾರಿ, ಏಳು ಖಾಸಗಿ ಅನುದಾನಿತ ಹಾಗೂ ೧೪ ಖಾಸಗಿ ಅನುದಾನ ರಹಿತ ಸಂಸ್ಥೆಗಳಾಗಿದ್ದವು.

### ಶಿಕ್ಷಕರ ತರಬೇತಿ

ಶಿಕ್ಷಕರ ತರಬೇತಿಗಾಗಿ ಜಿಲ್ಲೆಯಲ್ಲಿ ಎರಡು ರೀತಿಯ ಪ್ರಶಿಕ್ಷಣ ತರಗತಿಗಳು ಕಾರ್ಯನಿರ್ವಹಿಸುತ್ತಿದ್ದವು. ಮೊದಲ ರೀತಿಯ ತರಗತಿಯನ್ನು ಟೀಚರ್ಸ್ ಟ್ರೈನಿಂಗ್ ಲೋಯರ್ (ಟಿ.ಸಿ.ಎಲ್) ಎಂದು ಕರೆಯಲಾಗುತ್ತಿದ್ದು, ಇದು ಎರಡು ವರ್ಷಗಳ ಕಾಲಾವಧಿ ಹೊಂದಿದ್ದಿತು. ಎರಡನೇ ರೀತಿಯ ತರಗತಿ ಒಂದು ವರ್ಷದ ಕಾಲಾವಧಿ ಹೊಂದಿದ್ದು, ಇದನ್ನು ಟೀಚರ್ಸ್ ಟ್ರೈನಿಂಗ್ ಹೈಯರ್ (ಟಿ.ಸಿ.ಎಚ್.) ಎಂದು ಕರೆಯಲಾಗುತ್ತಿತ್ತು. ಟಿಸಿಎಲ್ ಸೇರಲು ೧೬ ಹಾಗೂ ಟಿಸಿಎಚ್ ಸೇರಲು ೧೭ ವರ್ಷ ವಯೋಮಿತಿ ಇದ್ದು, ಈ ತರಗತಿಗಳಲ್ಲಿ ಮೂಲ ಶಿಕ್ಷಣ, ಶಾಲಾ ಆಡಳಿತ, ಸಂಗೀತ, ಮನಃಶಾಸ್ತ್ರ ಕೈತೋಟಗಾರಿಕೆ, ಹಾಗೂ ದೈಹಿಕ ಶಿಕ್ಷಣಗಳನ್ನು ಬೋಧಿಸಲಾಗುತ್ತಿತ್ತು. ಈ ಎರಡೂ ಕೋರ್ಸುಗಳ ಕೊನೆಗೆ ನಡೆಸಲ್ಪಡುತ್ತಿದ್ದ ಪಬ್ಲಿಕ್ ಪರೀಕ್ಷೆ ಹಾಗೂ ಪ್ರಯೋಗ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರು ಪ್ರೈಮರಿ ಶಾಲೆಗಳಲ್ಲಿ ಬೋಧಕ ಸಿಬ್ಬಂದಿಯಾಗಿ ಸೇರುವ ಅವಕಾಶವಿದ್ದಿತು.

೧೯೬೭ರ ವೇಳೆಗೆ ಜಿಲ್ಲೆಯಲ್ಲಿ ಎರಡು ಪ್ರಶಿಕ್ಷಣ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳಲ್ಲಿ ಒಂದು ಸರಕಾರಿ ಸಂಸ್ಥೆಯಾಗಿದ್ದಿತು. ಇದು ೧೯೫೫ರಲ್ಲಿ ಕೋಲಾರದಲ್ಲಿ ಸ್ಥಾಪನೆಗೊಂಡಿದ್ದು, ಟೀಚರ್ಸ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್, ಕೋಲಾರ ಎಂಬ ಹೆಸರನ್ನು ಹೊಂದಿದ್ದಿತು. ೧೪ ಮಂದಿ ಬೋಧಕ ಸಿಬ್ಬಂದಿ ಇದ್ದ ಇಲ್ಲಿ ಹೈಯರ್ ಮತ್ತು ಲೋಯರ್ ಎರಡೂ ಮಟ್ಟಗಳ ತರಬೇತಿ ನೀಡಲ್ಪಡುತ್ತಿದ್ದು, ವಾರ್ಷಿಕವಾಗಿ ಪ್ರತೀ ಮಟ್ಟದಲ್ಲಿ ನೂರು ಮಂದಿಗೆ ಪ್ರವೇಶಾವಕಾಶವಿದ್ದಿತು. ಎರಡನೇ ಪ್ರಶಿಕ್ಷಣ ಸಂಸ್ಥೆಯಾದ ಬಂಗಾರುಪೇಟೆಯ ಲಕ್ಷ್ಮಿ ವಿದ್ಯಾಲಯ ಟಿ.ಸಿ.ಎಚ್. ಕಾಲೇಜು ೧೯೬೫ರಲ್ಲಿ ಸ್ಥಾಪನೆಗೊಂಡು ಹೈಯರ್ ತರಗತಿಗೆ ಮಾತ್ರ ವಾರ್ಷಿಕ ೧೦೦ ಮಂದಿಗೆ ಪ್ರವೇಶ ನೀಡುತ್ತಿತ್ತು. ೧೯೬೭ರಲ್ಲಿ ಇಲ್ಲಿ ಹತ್ತು ಮಂದಿ ಸಿಬ್ಬಂದಿ ಒಟ್ಟು ೭೩ ಮಂದಿಗೆ (೬೬ ಗಂ– ೦೭ ಹೆ) ಬೋಧನೆ ಮಾಡುತ್ತಿದ್ದರು. ೨೦೦೪–೦೫ನೇ ಸಾಲಿಗೆ ಜಿಲ್ಲೆಯಲ್ಲಿ ಒಟ್ಟು ೧೬ ಪ್ರಶಿಕ್ಷಣ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿದ್ದು, ಇವುಗಳಲ್ಲಿ ಒಂದು ಸರಕಾರಿ, ಒಂದು ಖಾಸಗಿ ಅನುದಾನಿತ ಮತ್ತು ೧೪ ಖಾಸಗಿ ಅನುದಾನಿತ ಸಂಸ್ಥೆಗಳಾಗಿದ್ದವು. ಸಹಶಿಕ್ಷಣದ ಈ ಎಲ್ಲ ಸಂಸ್ಥೆಗಳಲ್ಲಿ ಒಟ್ಟು ೧,೧೦೦ ಮಂದಿ ವ್ಯಾಸಂಗ ಮಾಡುತ್ತಿದ್ದರು.

**ನೂತನ ನಾಮಕರಣ:** ಪ್ರಾಥಮಿಕ ಹಂತದ ಶಿಕ್ಷಣದ ಸರ್ವತೋಮುಖ ಅಭಿವೃದ್ಧಿಗಾಗಿ ೨೦೦೩–೦೪ನೇ ಶೈಕ್ಷಣಿಕ ವರ್ಷದಿಂದ ಟೀಚರ್ ಟ್ರೈನಿಂಗ್ ಹೈಯರ್ (ಟಿಸಿಎಚ್) ಶಿಕ್ಷಣವನ್ನು ಡಿಪ್ಲೊಮಾ ಇನ್ ಎಜುಕೇಷನ್ (ಡಿ.ಎಡ್) ಎಂದು ಪುನರ್ನಾಮಕರಣ ಮಾಡಲಾಯಿತು. ಇದಕ್ಕೆ ಪ್ರವೇಶಾವಕಾಶ ಪಡೆಯಲು ಕನಿಷ್ಠ ಶೇ. ೫೦ರಷ್ಟು ಅಂಕಗಳೊಡನೆ ಪಿಯುಸಿ ಪಾಸಾಗಿರಬೇಕೆಂದು ನಿಗದಿ ಪಡಿಸಲಾಯಿತು.

### ವಯಸ್ಕರ ಶಿಕ್ಷಣ

ರಾಜ್ಯ ಸರಕಾರವು ೧೯೧೧ರಷ್ಟು ಮೊದಲೇ ವಯಸ್ಕರ ಶಿಕ್ಷಣದ ಪ್ರಾಮುಖ್ಯತೆಯನ್ನು ಮನಗಂಡು ವಯಸ್ಕರ ಶಿಕ್ಷಣ ಶಾಲೆಗಳನ್ನು ಪ್ರಾರಂಭಿಸಿತು. ಪ್ರಾಥಮಿಕ ಶಿಕ್ಷಕರಿಂದ ನಡೆಸಲ್ಪಡುತ್ತಿದ್ದ ಈ ಶಾಲೆಗಳು ರಾತ್ರಿಯ ವೇಳೆ ನಡೆಯುತ್ತಿದ್ದು, ಇಲ್ಲಿ ಕೃಷಿಕರು, ಕುಶಲಕರ್ಮಿಗಳು, ಮುಂತಾದ ೧೫ ವರ್ಷ ವಯೋಮಾನ ಮೀರಿದವರಿಗೆ ಶಿಕ್ಷಣ ನೀಡಲಾಗುತ್ತಿತ್ತು. ಇದಕ್ಕಾಗಿ ಇಲ್ಲಿನ ಪ್ರತೀ ಬೋಧಕ ಸಿಬ್ಬಂದಿಗೆ ಮಾಸಿಕ ಐದು ರೂಪಾಯಿಗಳ ಅನುದಾನ ದೊರೆಯುತ್ತಿತ್ತು. ಇಂತಹ ಶಾಲೆಗಳು ಜನಪ್ರಿಯಗೊಂಡಂತೆ, ಸರಕಾರ ಪ್ರತೀ ವರ್ಷ ಇವುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ರಾಜ್ಯದ ಎಲ್ಲೆಡೆ ಪ್ರಾರಂಭಿಸಿತು. ಆದರೆ, ಇಲ್ಲಿನ ಸಾಹಿತ್ಯಪೂರ್ಣ ಪಠ್ಯಕ್ರಮ ಮತ್ತು ಮೂರು ವರ್ಷಗಳ ದೀರ್ಘ ಕಾಲಾವಧಿಯಿಂದ ೧೯೩೯–೪೦ರ ಅವಧಿಯಲ್ಲಿ ಇಂತಹ ಹಲವಾರು ಶಾಲೆಗಳು ಮುಚ್ಚಲ್ಪಟ್ಟವು. ಆದರೆ ೧೯೪೦ರ ನಂತರ ಮೇಲ್ಕಂಡ ನ್ಯೂನತೆಗಳನ್ನು ಸರಿಪಡಿಸಿ, ಸರಕಾರ ಅಕ್ಷರಸ್ಥರ ಆಂದೋಲನಗಳನ್ನು ನಡೆಸುವುದರ ಮೂಲಕ ವಯಸ್ಕರ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿತು. ೧೯೪೭ರ ಜನವರಿ ಒಂದರಂದು ಪ್ರಾರಂಭವಾದ ರಾಜ್ಯ ಸಾಕ್ಷರತಾ ಸಮಿತಿ (ಸ್ಟೇಟ್ ಲಿಟರರಿ ಕೌನ್ಸಿಲ್) ವಯಸ್ಕರ ಶಿಕ್ಷಣಕ್ಕೆ ಒಂದು ವೈಜ್ಞಾನಿಕ ಆಯಾಮ ನೀಡಿದ್ದೇ ಅಲ್ಲದೆ, ಅದನ್ನು ಒಂದು ವ್ಯವಸ್ಥಿತ ಚಳವಳಿಯನ್ನಾಗಿಸಿತು. ಪ್ರಾರಂಭದಲ್ಲಿ ರಾತ್ರಿ ತರಗತಿಗಳನ್ನು ಮಾತ್ರ ನಡೆಸುತ್ತಿದ್ದ ಸಮಿತಿಯು ೧೯೪೫ರ

ನಂತರ ಗ್ರಂಥಾಲಯಗಳನ್ನು ಪ್ರಾರಂಭಿಸಿ ಸಾಂಸ್ಕೃತಿಕ ಹಾಗೂ ಸಾಮಾಜಿಕ ಚಟುವಟಿಕೆಗಳನ್ನು ಹಮ್ಮಿಕೊಂಡಿತು. ಸಾಕ್ಷರತೆಯೇ ಪರಮಗುರಿಯಾದರೂ, ಅದು ತನ್ನ ಉನ್ನತವಾದ ಸಾಮಾಜಿಕ ಶಿಕ್ಷಣದ ಪರಿಧಿಯ ಭಾಗವಾಗಿ, ಸಮುದಾಯದ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿದು, ಸಾಮಾಜಿಕ ಶಿಕ್ಷಣದ ಸಮಗ್ರತೆಯಲ್ಲಿ ಸ್ಥಾನ ಕಂಡುಕೊಂಡಿತು. ಸಾಕ್ಷರತೆಯ ಜೊತೆ ಜೊತೆಗೆ, ಸುಖ ಸಾಂಸಾರಿಕ ಜೀವನ ಮಾರ್ಗ, ಆರ್ಥಿಕ ಚಟುವಟಿಕೆ ಹಾಗೂ ಪ್ರಜಾಸತ್ತಾತ್ಮಕ ತರಬೇತಿ ಮುಂತಾದವೂ ಸಾಕ್ಷರತಾ ಆಂದೋಳನಕ್ಕೆ ಪೂರಕ ವಿಷಯಗಳಾದವು. ಇದರ ಮೂಲಕ ಜನತೆ ಸಮಾಜದ ಬಗ್ಗೆ ತಮ್ಮ ಜವಾಬ್ದಾರಿ ಹಾಗೂ ಕರ್ತವ್ಯಗಳನ್ನು ಅರಿಯಲು ಅಥವಾ ವಯಸ್ಕರ ಶಿಕ್ಷಣ ಕಾರಣವಾಯಿತು.

**ಜಿಲ್ಲಾ ಸಾಕ್ಷಾರತಾ ಸಮಿತಿ:** ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣವಂಚಿತರಾದವರಿಗೆ ಓದು, ಬರಹ, ಲೆಕ್ಕ ಕಲಿಸುವ, ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಿಸಲು ಉತ್ತಮ ವಾತಾವರಣ ನಿರ್ಮಾಣಮಾಡುವ, ಶಾಲೆ ಬಿಟ್ಟ ಮಕ್ಕಳು ಮತ್ತು ಅರೆ ಸಾಕ್ಷರರಿಗೆ ಕಲಿಕೆಯ ಅವಕಾಶ ಕಲ್ಪಿಸುವ, ಗ್ರಂಥಾಲಯಗಳನ್ನು ಪ್ರಾರಂಭಿಸುವ ಮೂಲಕ ಜನರಲ್ಲಿ ನಿರಂತರ ಓದುವ ಹವ್ಯಾಸ ಬೆಳೆಸುವ ಹಾಗೂ ರಾಷ್ಟ್ರೀಯ ಮೌಲ್ಯಗಳನ್ನು ಮಾಡಿಸಿ, ೨೦೦೫ರ ವೇಳೆಗೆ ಜಿಲ್ಲೆಯಲ್ಲಿ ಶೇ. ೮೦ ಸಾಕ್ಷರತಾ ಪ್ರಮಾಣ ಉಂಟು ಮಾಡುವ ಧ್ಯೇಯಗಳನ್ನು ಹೊಂದಿ, ಜಿಲ್ಲಾ ಸಂಪೂರ್ಣ ಸಾಕ್ಷರತಾ ಆಂದೋಲನವು ೨೬.೧.೧೯೯೪ರಲ್ಲಿ ಜಿಲ್ಲೆಯಲ್ಲಿ ಪ್ರಾರಂಭವಾಯಿತು. ಸಾಕ್ಷರತೆ ಹಾಗೂ ಪ್ರಾಥಮಿಕ ಶಿಕ್ಷಣದ ಚೌಕಟ್ಟಿನಿಂದ ಹೊರಗಿರುವ ಎಲ್ಲರಿಗೂ ಅವರ ಅವಶ್ಯಕತೆಗನುಸಾರ ಕಲಿಕೆಗೆ ಮುಕ್ತ ಅವಕಾಶ ನೀಡುವ ವ್ಯಾಪಕ ಶೈಕ್ಷಣಿಕ ಕಾರ್ಯಕ್ರಮ ಇದಾಗಿದೆ. ಎರಡು ವರ್ಷಗಳಲ್ಲಿ ವಿವಿಧ ಕಲಿಕಾ ಕೇಂದ್ರಗಳಲ್ಲಿ ಕಲಿಕಾ ಪ್ರಕ್ರಿಯೆಗಳು ನಡೆದು, ೧೯೯೭–೯೮ರ 'ಕನ್ನಡ ನಾಡು ಸಾಕ್ಷರ ನಾಡು' ಕಾರ್ಯಕ್ರಮದಡಿ ೮೨ ಸಾವಿರ ಅರೆಸಾಕ್ಷರರು ಹಾಗೂ ಅನಕ್ಷರಸ್ಥರು ಕಲಿಕೆಪೂರ್ಣಗೊಳಿಸಿ ನವಸಾಕ್ಷರರಾದರು. ೧೯೯೯–೨೦೦೦ ಸಾಲಿನಲ್ಲಿ ಜಿಲ್ಲೆಯಾದ್ಯಂತ ನಡೆದ ಸಾಕ್ಷರೋತ್ತರ ಕಾರ್ಯಕ್ರಮದಡಿ, ೩,೨೦೦ ಮವವಿಕಾಸ ಕೇಂದ್ರಗಳಲದಲಿ ೮೭,೫೮೭ ಮಂದಿ ತಮ್ಮ ಓದು, ಬರಹದ ಸಾಮರ್ಥ್ಯ ಹೆಚ್ಚಿಸಿಕೊಂಡರು.

ಪ್ರಸ್ತುತ ೨,೦೦೦ ದಿಂದ ೨,೫೦೦ ಜನ ವಸತಿಗೆ ಒಂದರಂತೆ ಮುಂದುವರಿದ ಶಿಕ್ಷಣ ಕೇಂದ್ರಗಳನ್ನು ೧೦–೧೫ ಮಂದಿಯ ಗ್ರಾಮಾಭಿವೃದ್ಧಿ ಸಮಿತಿಯಡಿ ಸ್ಥಾಪನೆ ಮಾಡಲಾಗಿದೆ. ಇದರ ಅನುಷ್ಠಾನ ಹಾಗೂ ನಿರ್ವಹಣೆಗಾಗಿ ಪ್ರೇರಕ ಹಾಗೂ ಉಪಪ್ರೇರಕರನ್ನು ನೇಮಿಸಲಾಗಿದ್ದು, ಇವರಿಗೆ ಮಾಸಿಕ ಕ್ರಮವಾಗಿ ರೂ. ೭೦೦/– ಹಾಗೂ ರೂ. ೫೦೦/– ಗೌರವಧನ ನೀಡಲಾಗುತ್ತಿದೆ. ಪ್ರೇರಕರಾಗಿ ನೇಮಕಗೊಳ್ಳಲು ಪಿ.ಯು.ಸಿ./ಎಸ್.ಎಸ್.ಎಲ್.ಸಿ. ಉತ್ತೀರ್ಣತೆ ಹಾಗೂ ಉಪ ಪ್ರೇರಕರಾಗಲು ಎಸ್.ಎಸ್.ಎಲ್.ಸಿ. ಉತ್ತೀರ್ಣತೆ ಕಡ್ಡಾಯ. ಪ್ರತೀ ೧೦ ಮುಂದುವರಿದ ಶಿಕ್ಷಣ ಕೇಂದ್ರಗಳ ಮೇಲ್ವಿಚಾರಣೆಗಾಗಿ ಒಂದು ನೋಡಲ್ ಕೇಂದ್ರವನ್ನು ಸ್ಥಾಪಿಸಲಾಗಿದೆ. ಇವುಗಳಿಗೂ ಪ್ರೇರಕ/ಉಪ ಪ್ರೇರಕ ಮೇಲ್ವಿಚಾರಕರಾಗಿರುತ್ತಾರೆ. ಇವರ ನೇಮಕಾತಿಗೆ ಕ್ರಮವಾಗಿ ಪದವಿ/ಪಿಯುಸಿ ಮತ್ತು ಪಿಯುಸಿ/ಎಸ್.ಎಸ್.ಎಲ್.ಸಿ. ಉತ್ತೀರ್ಣತೆ ಕಡ್ಡಾಯ.

ಮೇಲ್ಕಂಡ ಕೇಂದ್ರಗಳು ಕಲಿಕಾ ಕೇಂದ್ರ ಮಾತ್ರವಲ್ಲದೆ, ಗ್ರಂಥಾಲಯ, ವಾಚನಾಲಯ, ಚರ್ಚಾಕೇಂದ್ರ, ಸಾಂಸ್ಕೃತಿಕ ಮತ್ತು ಮನರಂಜನಾ ಕೇಂದ್ರ, ಕ್ರೀಡಾ ಸಾಹಸ ಕೇಂದ್ರ, ವೃತ್ತಿ ತರಬೇತಿ ಕೇಂದ್ರ, ಮಾಹಿತಿ ಕೇಂದ್ರ ಹಾಗೂ ಸಮೂದಾಯ ಸೇವಾ ಕೇಂದ್ರಗಳಾಗಿಯೂ ಕಾರ್ಯನಿರ್ವಹಿಸುತ್ತವೆ. ಕೋಲಾರ ಜಿಲ್ಲೆಯ ವಿಶೇಷ ಚಟುವಟಿಕೆಗಳಾದ ಅಂತರ್ಜಲ ಅಭಿವೃದ್ಧಿ, ಸಸಿ ನೆಡುವುದು, ಸಂತಾನೋತ್ಪತ್ತಿ ಮತ್ತು ಶಿಶು ಆರೋಗ್ಯ ಹಾಗೂ ಶಾಲೆಬಿಟ್ಟ ಮಕ್ಕಳನ್ನು ಮರಳಿ ಶಾಲೆಗೆ ಸೇರಿಸುವುದು ಮುಂತಾದವುಗಳನ್ನೂ ಹಮ್ಮಿಕೊಂಡಿದೆ. ೨೦೦೫–೦೬ಕ್ಕೆ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕೇಂದ್ರಗಳ ತಾಲೂಕುವಾರು ವಿವರಗಳನ್ನು ಮುಂದೆ ನೀಡಲಾಗಿದೆ:

**ಕೋಷ್ಟಕ: ೧೩.೩೦**

| ಕ್ರ. ಸಂ. | ತಾಲೂಕು | ಮುಂ. ಶಿ. ಕೇಂದ್ರಗಳು ನಗರ | ಮುಂ. ಶಿ. ಕೇಂದ್ರಗಳು ಗ್ರಾಮಾಂತರ | ಮುಂ. ಶಿ. ಕೇಂದ್ರಗಳು ಒಟ್ಟು | ನೋಡಲ್ ಮು.ಶಿ. ಕೇಂದ್ರಗಳು |
|---|---|---|---|---|---|
| ೧. | ಬಾಗೇಪಲ್ಲಿ | ೩ | ೭೦ | ೭೩ | ೭೧ |
| ೨. | ಬಂ.ಪೇಟೆ | ೬ | ೭೪ | ೮೦ | ೯ |
| ೩. | ಕೆಜಿಎಫ್ | ೨೪ | – | ೨೪ | ೨ |
| ೪. | ಚಿ.ಬ.ಪುರ | ೮ | ೫೩ | ೬೧ | ೬ |
| ೫. | ಚಿಂತಾಮಣಿ | ೮ | ೬೭ | ೭೫ | ೮ |
| ೬ | ಗೌರಿಬಿದನೂರು | ೪ | ೭೧ | ೭೫ | ೮ |
| ೭ | ಗುಡಿಬಂಡೆ | ೨ | ೨೬ | ೨೮ | ೩ |
| ೮. | ಕೋಲಾರ (ಗ್ರಾ) | – | ೭೯ | ೭೯ | ೮ |
| ೯. | ಕೋಲಾರ ನಗರ | ೨೫ | – | ೨೫ | ೬ |
| ೧೦. | ಮಾಲೂರು | ೪ | ೫೮ | ೬೨ | ೬ |
| ೧೧. | ಮುಳಬಾಗಿಲು | ೬ | ೬೮ | ೭೪ | ೭ |
| ೧೨. | ಶಿಡ್ಲಘಟ್ಟ | ೭ | ೬೨ | ೬೯ | ೭ |
| ೧೩. | ಶ್ರೀನಿವಾಸಪುರ | ೪ | ೬೨ | ೬೬ | ೭ |

### ನ್ಯಾಷನಲ್ ಕೆಡೆಟ್ ಕೋರ್ (ಎನ್.ಸಿ.ಸಿ.)

ಜಿಲ್ಲೆಯ ಎನ್.ಸಿ.ಸಿ. ದಳ ಪ್ರಥಮವಾಗಿ ೧೯೫೨ರಲ್ಲಿ 'ಒಂದನೇ ಮೈಸೂರ್ ಬೆಟ್ಯಾಲಿಯನ್ ಎನ್.ಸಿ.ಸಿ.' ಎಂಬ ಪದನಾಮದೊಂದಿಗೆ ಬೆಂಗಳೂರಿನ ಗ್ರೂಪ್ ಹೆಡ್‌ಕ್ವಾರ್ಟರ್ಸ್‌ನಲ್ಲಿ ಪ್ರಾರಂಭವಾಯಿತು. ಇದನ್ನು '೨೭ನೇ ಮೈಸೂರು ಬೆಟ್ಯಾಲಿಯನ್' ಎಂದು ಹೆಸರಿಸಿ ೧೯೬೪ರ ಜುಲೈನಲ್ಲಿ ಕೋಲಾರಕ್ಕೆ ಸ್ಥಳಾಂತರಿಸಲಾಯಿತು. ೧೯೭೮ರ ಜನವರಿಯಿಂದ ಇದರ ಪದನಾಮ '೧೦ನೇ ಕರ್ನಾಟಕ ಬೆಟ್ಯಾಲಿಯನ್' ಎಂದು ಬದಲಾಯಿಸಿಲ್ಪಟ್ಟಿತು. ಪ್ರಸ್ತುತ ಜಿಲ್ಲೆಯಲ್ಲಿ ಭೂಸೇನೆಯ ವಿಭಾಗದಲ್ಲಿ ವಿವಿಧ ಶಾಲಾ ಕಾಲೇಜುಗಳ ಜೂನಿಯರ್ ಹಾಗೂ ಸೀನಿಯರ್ ಡಿವಿಷನ್‌ನ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ತರಬೇತಿ ನೀಡುತ್ತಿರುವ ಈ ಸಂಸ್ಥೆ ಇಲ್ಲಿಯತನಕ ಹಲವಾರು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಪ್ರಶಸ್ತಿ ವಿಜೇತ ಕೆಡೆಟ್‌ಗಳನ್ನು ತರಬೇತುಗೊಳಿಸಿ, ಅವರಲ್ಲಿ ಬಹಳಷ್ಟು ಮಂದಿ ರಾಷ್ಟ್ರದ ಸೇನೆಯಲ್ಲಿ ಉನ್ನತ ಸ್ಥಾನಗಳನ್ನು ಪಡೆಯಲು ಕಾರಣವಾಗಿದೆ.

೨೦೦೪ರ ಡಿಸೆಂಬರ್‌ನಲ್ಲಿದ್ದಂತೆ ಒಬ್ಬ ಕರ್ನಲ್ ದರ್ಜೆಯ ಅಧಿಕಾರಿ ಕಮ್ಯಾಂಡಿಂಗ್ ಆಫೀಸರ್, ಅವರ ಸಹಾಯಕ್ಕಾಗಿ ಒಬ್ಬ ಸುಬೇದಾರ್ ಮೇಜರ್, ಆರು ಮಂದಿ ಜ್ಯೂನಿಯರ್ ಕಮಿಷನ್ಡ್ ಅಧಿಕಾರಿಗಳು ಮತ್ತು ೧೩ ಮಂದಿ ನಾನ್–ಕಮಿಷನ್ಡ್ ಅಧಿಕಾರಿಗಳನ್ನು ಹೊಂದಿದ್ದ ಈ ದಳ ಜಿಲ್ಲೆಯ ವಿವಿಧ ಶಾಲಾ ಕಾಲೇಜುಗಳಲ್ಲಿ ಈ ಮುಂದೆ ನೀಡಿರುವಂತೆ ಕೆಡಿಟ್‌ಗಳನ್ನು ತರಬೇತುಗೊಳಿಸುತ್ತದೆ.

**ಕೋಷ್ಟಕ: ೧೩.೩೧: ಸೀನಿಯರ್ ಡಿವಿಷನ್**

| | ಸಂಸ್ಥೆಯ ಹೆಸರು | ಕೆಡೆಟ್‌ಗಳ ಸಂಖ್ಯೆ | ಅಧಿಕಾರಿಗಳ ಸಂಖ್ಯೆ |
|---|---|---|---|
| ೧ | ೨ | ೩ | ೪ |
| ೧) | ಸರಕಾರಿ ಪ್ರಥಮ ದರ್ಜೆ ಕಾಲೇಜು ಕೋಲಾರ | ೧೦೦ | ೦೧ |
| ೨) | ಪ್ರಥಮ ದರ್ಜೆ ಕಾಲೇಜು ಕೆ.ಜಿ.ಎಫ್ | ೧೦೨ | ೦೧ |
| ೩) | ಸರಕಾರಿ ಮಹಿಳೆಯರ ಪ್ರಥಮ ದರ್ಜೆ ಕಾಲೇಜು ಕೋಲಾರ | ೫೦ | ೦೧ |

| ೧ | ೨ | ೩ | ೪ |
|---|---|---|---|
| ೪) | **ಸರಕಾರಿ ಪ್ರಥಮ ದರ್ಜೆ ಕಾಲೇಜು ಚಿಂತಾಮಣಿ** (೨೫ ಮಹಿಳಾ ಕೆಡೆಟ್ ಗಳು, ೧೩೫ ಪುರುಷ ಕೆಡೆಟ್‌ಗಳು) | ೧೬೦ | ೧೧ |
| ೫) | **ಸರಕಾರಿ ಪ್ರಥಮ ದರ್ಜೆ ಕಾಲೇಜು ಮುಳಬಾಗಿಲು** (೨೫ ಮಹಿಳಾ ಕೆಡೆಟ್‌ಗಳು, ೧೩೫ ಪುರುಷ ಕೆಡೆಟ್‌ಗಳು) | ೧೬೦ | ೧೧ |
| ೬) | **ಸರಕಾರಿ ಪಾಲಿಟೆಕ್ನಿಕ್ ಚಿಂತಾಮಣಿ** (೪೫ ಮಹಿಳಾ ಕೆಡೆಟ್‌ಗಳು, ೬೧ ಪುರುಷ ಕೆಡೆಟ್‌ಗಳು) | ೧೦೬ | ೧೧ |
| ೭) | ಪ್ರಥಮ ದರ್ಜೆ ಕಾಲೇಜು ಕೆ.ಜಿ.ಎಫ್. | ೬೫ (ಮಹಿಳಾ ಕೆಡೆಟ್‌ಗಳು) | ೧೧ |
| | **ಜೂನಿಯರ್ ಡಿವಿಷನ್** | | |
| ೧) | **ಹೆಣ್ಣು ಮಕ್ಕಳ ಪ್ರೌಢಶಾಲೆ ಕೆ.ಜಿ.ಎಫ್** | ೧೦೦ | ೧೧ |
| ೨) | **ಅಂಬೇಡ್ಕರ್ ಪ್ರೌಢಶಾಲೆ ಕೆ.ಜಿ.ಎಫ್** | ೧೦೦ | ೧೧ |
| ೩) | **ಸರಕಾರಿ ಪ್ರೌಢಶಾಲೆ ಮುಳಬಾಗಿಲು** | ೧೧೫ | ೧೧ |
| ೪) | **ಸರಕಾರಿ ಪ್ರೌಢಶಾಲೆ ಚಿಂತಾಮಣಿ** | ೧೦೦ | ೧೧ |
| ೫) | **ಸರಕಾರಿ ಪದವಿಪೂರ್ವ ಕಾಲೇಜು ಮಾಲೂರು** | ೧೦೦ | ೧೧ |
| ೬) | **ಸೇಂಟ್ ಜೋಸೆಫ್ ಹೆಣ್ಣುಮಕ್ಕಳ ಪ್ರೌಢಶಾಲೆ ಕೆ.ಜಿ.ಎಫ್** | ೫೦ | ೧೧ |
| ೭) | **ಬಿ.ಇ.ಎಂ.ಎಲ್. ಪ್ರೌಢಶಾಲೆ ಕೆ.ಜಿ.ಎಫ್** | ೧೦೦ | ೧೧ |

ಆಧಾರ: ಜಿಲ್ಲಾ ಎನ್.ಸಿ.ಸಿ.ದಳದ ಕಮಾಂಡಿಂಗ್ ಆಫೀಸರ್ ಕಛೇರಿ, ಕೋಲಾರ.

ಪ್ರಾರಂಭದಿಂದ ಈವರೆಗೆ ಜಿಲ್ಲೆಯ ಎನ್.ಸಿ.ಸಿ. ದಳದ ೫೨ ಮಂದಿ ಪ್ರತಿಭಾನ್ವಿತ ಕೆಡೆಟ್‌ಗಳು ದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವ ಪೆರೇಡ್‌ನಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದು, ಅವರಲ್ಲಿ ಹಲವರು ರಾಷ್ಟ್ರಪತಿಯವರ ಸ್ವರ್ಣಪದಕದಂತಹ ಪ್ರಶಸ್ತಿಗಳನ್ನು ಪಡೆದಿರುತ್ತಾರೆ. ಇದೇ ಆಧಾರದ ಮೇಲೆ ಎನ್.ಸಿ.ಸಿ. ಮೀಸಲಾತಿಯ ಸೌಲಭ್ಯವನ್ನು ಪಡೆದು, ವೃತ್ತಿ ಶಿಕ್ಷಣ ಪ್ರವೇಶವನ್ನು ಪಡೆದಿರುತ್ತಾರೆ.

## ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್

ಸ್ಕೌಟ್ಸ್ ಚಳವಳಿ ೧೯೦೭ರಲ್ಲಿ ಮೊಟ್ಟಮೊದಲ ಬಾರಿಗೆ ಇಂಗ್ಲೆಂಡಿನಲ್ಲಿ ಪ್ರಾರಂಭವಾಯಿತು. ಅಲ್ಲಿನ ಬ್ರೌನ್‌ಸೀ ದ್ವೀಪದಲ್ಲಿ ಇದನ್ನು ಸ್ಕೌಟ್ ಜನಕ ಲಾರ್ಡ್ ಬೆಡನ್ ಪೊವೆಲ್, ಕಿರಿವಯಸ್ಸಿನ ಸಮುದಾಯದ ಶಕ್ತಿ ಸಾಮರ್ಥ್ಯಗಳಿಗೆ ಸಂಘಟನೆ ಹಾಗೂ ಸೇವಾ ಸ್ವರೂಪ ನೀಡುವ ಉದ್ದೇಶದಿಂದ ಪ್ರಾರಂಭಿಸಿದರು. ಪ್ರಸ್ತುತ ವಿಶ್ವದ ೨೧೬ ರಾಷ್ಟ್ರಗಳ ೨೮ ದಶಲಕ್ಷಕ್ಕೂ ಮಿಗಿಲಾಗಿ ಜನ ಸ್ಕೌಟ್ ಮತ್ತು ಗೈಡ್ ಚಳವಳಿಯ ವಾಹಿನಿಗೆ ಸೇರಿದ್ದಾರೆ. ಸ್ತ್ರೀ/ಪುರುಷ ಭೇದವಿಲ್ಲದ ಈ ಸಂಸ್ಥೆ ಜಗತ್ತಿನ ೧೫೧ ದೇಶಗಳಲ್ಲಿ ಅಂತಾರಾಷ್ಟ್ರೀಯ ಮನ್ನಣೆ ಪಡೆದಿದೆ.

ಭಾರತದಲ್ಲಿ ಈ ಚಳವಳಿ ೧೯೦೯ರಲ್ಲಿ ಬೆಂಗಳೂರಿನ ಬಿಷಪ್ ಕಾಟನ್ ಶಾಲೆಯಲ್ಲಿ ನಿವೃತ್ತ ಸೈನ್ಯಾಧಿಕಾರಿ ಕ್ಯಾಟಿ.ಹೆಚ್. ಬೇಕರ್‌ರಿಂದ ಪ್ರಾರಂಭವಾಯಿತು. ಆದರೆ ಅದು ಸುವ್ಯವಸ್ಥಿತ ರೂಪ ಪಡೆದದ್ದು, ೧೯೧೭ರ ಮಾರ್ಚ್ ೨೧ರಂದು. ಬಾಲಕರಿಗೆ ಸ್ಕೌಟ್ಸ್ ಇದ್ದಂತೆ ಬಾಲಕಿಯರಿಗೆ ಗೈಡ್ಸ್ ಸಂಸ್ಥೆ ಪ್ರಾರಂಭಗೊಂಡಿತು. ಭಾರತ ೧೯೪೭ರಲ್ಲಿ ಸ್ವಾತಂತ್ರ್ಯಗೊಂಡ ನಂತರ ಇವೆರಡೂ ಒಂದುಗೂಡಿ ೧೯೫೦ರ ನವೆಂಬರ್ ೨೭ರಂದು 'ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಮಹಾಸಂಸ್ಥೆ' ರೂಪುಗೊಂಡಿತು. ಈ ಚಳವಳಿ ಕರ್ನಾಟಕದಲ್ಲಿ ೧೯೧೭ರಲ್ಲಿ ಅಂದಿನ ಮಹಾರಾಜರಾಗಿದ್ದ ಶ್ರೀ ಕೃಷ್ಣರಾಜ ಒಡೆಯರ್ ಅವರ ರಾಜಾಶ್ರಯದಲ್ಲಿ

'ದಿ ಬಾಯ್ಸ್ ಸ್ಕೌಟ್ಸ್ ಆಫ್ ಮೈಸೂರ್' ಎಂಬ ಹೆಸರಿನಲ್ಲಿ ಪ್ರಾರಂಭಗೊಂಡಿತು. ಇದಕ್ಕೆ ಮಹಾರಾಜರೇ ಪೋಷಕರಾಗಿದ್ದರು. ಅವರ ಸಹೋದರರಾದ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಅವರು ಸಂಸ್ಥೆಯ ರಾಜ್ಯ ಮುಖ್ಯಸ್ಥರಾಗಿದ್ದರು. ಮಹಾರಾಜರು ೧೯೧೭ರ ಅಕ್ಟೋಬರ್ ಮೂರರಂದು ಒಂದು ರಾಜಾಜ್ಞೆ ಹೊರಡಿಸಿ, ರಾಜ್ಯದ ಎಲ್ಲಾ ಜಿಲ್ಲೆಗಳ ಶಾಲೆಗಳಲ್ಲಿ ಸ್ಕೌಟ್ ಚಳವಳಿ ಪ್ರಾರಂಭಿಸಬೇಕೆಂದು ಸೂಚಿಸಿದರು. ಇದಾದ ನಂತರ ೧೯೨೭ರಲ್ಲಿ ಇದರ ಸೋದರ ಸಂಸ್ಥೆಯಾದ 'ದಿ ಗರ್ಲ್ ಗೈಡ್ಸ್ ಆಫ್ ಮೈಸೂರ್' ರೂಪುಗೊಂಡು ಇದಕ್ಕೆ ಯುವರಾಣಿಯವರೇ ಮುಖ್ಯ ಗೈಡ್ ಆಗಿದ್ದರು. ೧೯೫೧ರವರೆಗೆ ಪ್ರತ್ಯೇಕವಾಗಿ ಕಾರ್ಯನಿರ್ವಹಿಸಿದ ಈ ಸಂಘಟನೆ, ಆ ವರ್ಷ 'ಭಾರತ ಸ್ಕೌಟ್ಸ್ ಮತ್ತು ಗೈಡ್ಸ್'ನಲ್ಲಿ ವಿಲೀನಗೊಂಡಿವೆ.

ಕರ್ನಾಟಕದಲ್ಲಿ ಸಂಖ್ಯಾ ದೃಷ್ಟಿಯಿಂದಲೂ ಸತ್ವದ ದೃಷ್ಟಿಯಿಂದಲೂ ಈ ಸಂಸ್ಥೆ ಗಣನೀಯ ಪ್ರಗತಿ ಸಾಧಿಸಿದೆ. ೨೦೦೩–೦೪ನೇ ಸಾಲಿಗೆ ಮೇಲಿನ ಎರಡೂ ವಿಭಾಗಗಳಲ್ಲಿ ಸುಮಾರು ೨.೫೦ ಲಕ್ಷ ಮಕ್ಕಳು ನೋಂದಣಿಗೊಂಡಿದ್ದರು. ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುವ ಐದರಿಂದ ಹತ್ತು ವರ್ಷ ವಯಸ್ಸಿನ ಬಾಲಕ–ಬಾಲಕಿಯರನ್ನು ಕಬ್ಸ್ ಮತ್ತು ಬುಲ್‌ಬುಲ್‌ಗಳೆಂದೂ, ೧೦ ರಿಂದ ೧೭ ವರ್ಷದವರನ್ನು ಸ್ಕೌಟ್ಸ್ ಮತ್ತು ಗೈಡ್ಸ್ ಎಂದೂ ೧೮ ರಿಂದ ೨೫ ವರ್ಷದ ಯುವಕ–ಯುವತಿಯರನ್ನು ರೋವರ್ಸ್ ಮತ್ತು ರೇಂಜರ್ಸ್‌ಗಳೆಂದೂ ಕರೆಯಲಾಗುವುದು.

## ವೃತ್ತಿ ಶಿಕ್ಷಣ

ಎಸ್. ಎಸ್. ಎಲ್.ಸಿ.ಯ ನಂತರದ, ಎರಡು ವರ್ಷ ಅವಧಿಯ, ಪಿಯುಸಿ ಹಂತದ ಶಿಕ್ಷಣಕ್ಕೆ ಪರ್ಯಾಯವಾದ ವೃತ್ತಿ ಶಿಕ್ಷಣ ಇಡೀ ದೇಶದಲ್ಲಿ ಮೊದಲ ಬಾರಿಗೆ ಕರ್ನಾಟಕ ರಾಜ್ಯದಲ್ಲಿ ೧೯೭೭–೭೮ರಲ್ಲಿ ಪ್ರಾರಂಭವಾಯಿತು. ಉನ್ನತ ಶಿಕ್ಷಣಕ್ಕೆ ಇರುವ ಅಧಿಕ ಒತ್ತಡವನ್ನು ನಿವಾರಿಸುವುದು, ವಿದ್ಯಾರ್ಥಿ/ವಿದ್ಯಾರ್ಥಿನಿಯರಲ್ಲಿ ಸುಪ್ತವಾಗಿರುವ ವೈಯಕ್ತಿಕ ನೈಪುಣ್ಯತೆಗೆ ಸೂಕ್ತ ತರಬೇತಿ ನೀಡಿ, ಅದನ್ನು ಪ್ರಕಾಶಗೊಳಿಸುವುದು, ಹಾಗೂ ಅವರು ಸ್ವಾವಲಂಬಿಗಳಾಗಿ ಆತ್ಮವಿಶ್ವಾಸದಿಂದ ಸ್ವ–ಉದ್ಯೋಗ ಕೈಗೊಳ್ಳಲು ತಕ್ಕ ಮಾರ್ಗದರ್ಶನ ನೀಡಿ ಅದಕ್ಕೆ ವೇದಿಕೆ ಸಿದ್ಧಗೊಳಿಸುವ ಉನ್ನತ ಧ್ಯೇಯೋದ್ದೇಶಗಳನ್ನು ಹೊಂದಿರುವ ಈ ಹಂತದ ಶಿಕ್ಷಣ, ಗ್ರಾಮೀಣಾಭಿವೃದ್ಧಿ ಹಾಗೂ ನಿರುದ್ಯೋಗ ನಿವಾರಣೆಯಲ್ಲಿ ರಾಷ್ಟ್ರದ ಪ್ರಗತಿಗೆ ಪೂರಕವಾಗಿದೆ.

೨೦೦೩–೦೪ರ ಜೂನ್ ನಲ್ಲಿದ್ದಂತೆ ಜಿಲ್ಲೆಯಲ್ಲಿ ಒಟ್ಟು ೨೪ ಪದವಿಪೂರ್ವ ಕಾಲೇಜುಗಳಲ್ಲಿ ವೃತ್ತಿ ಶಿಕ್ಷಣದಡಿ ರೇಷ್ಮೆ ಕೃಷಿ, ವಾಣಿಜ್ಯ ಉಡುಪು ವಿನ್ಯಾಸ ಮತ್ತು ತಯಾರಿಕೆ, ಗೃಹೋಪಯೋಗಿ ವಿದ್ಯುತ್ ಸಲಕರಣೆಗಳ ನಿರ್ವಹಣೆ ಹಾಗೂ ದುರಸ್ತಿ, ಸರ್ವೆ, ದೃಶ್ಯ ಶ್ರವಣ ತಾಂತ್ರಿಕತೆ, ಕಂಪ್ಯೂಟರ್ ತಾಂತ್ರಕತೆ, ಮೆಕ್ಯಾನಿಕಲ್ ಸರ್ವಿಸಿಂಗ್, ತೋಟಗಾರಿಕೆ ಮುಂತಾದ ವಿವಿಧ ವಿಷಯಗಳು ಬೋಧಿಸಲ್ಪಡುತ್ತಿದ್ದವು.

೧೯೯೯–೨೦೦೦ ದಿಂದ ೨೦೦೩–೦೪ರ ವರೆಗೆ ಮೇಲ್ಕಂಡ ಸಂಸ್ಥೆಗಳಿಂದ ವಿವಿಧ ಪರೀಕ್ಷೆಗಳಿಗೆ ಹಾಜರಾದ ವಿದ್ಯಾರ್ಥಿ/ ವಿದ್ಯಾರ್ಥಿನಿಯರ ವಿವರಗಳನ್ನು ಈ ಮುಂದೆ ನೀಡಲಾಗಿದೆ.

**ಕೋಷ್ಟಕ: ೧೩.೩೨**

| ವರ್ಷ | ಹಾಜರಾದವರು | | | ಉತ್ತೀರ್ಣರಾದವರು | | | ಶೇಕಡಾ |
|---|---|---|---|---|---|---|---|
| | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಫಲಿತಾಂಶ |
| | | | ಪ್ರಥಮ ವರ್ಷ | | | | |
| ೧೯೯೯–೨೦೦೦ | ೮೯೭ | ೧೬೮ | ೧೦೬೫ | ೫೨೭ | ೧೨೧ | ೬೪೮ | ೬೦.೮೫% |
| ೨೦೦೦–೨೦೦೧ | ೯೫೫ | ೧೯೫ | ೧೧೫೦ | ೫೨೬ | ೧೯೪ | ೭೨೦ | ೬೨.೬೧% |
| ೨೦೦೧–೨೦೦೨ | ೧೨೮೦ | ೨೪೫ | ೧೫೨೫ | ೯೫೮ | ೧೬೬ | ೧೧೨೪ | ೭೩.೭% |
| ೨೦೦೨–೨೦೦೩ | ೧೨೪೫ | ೨೩೦ | ೧೪೭೫ | ೧೦೧೭ | ೧೯೫ | ೧೨೧೨ | ೮೨.೧% |
| ೨೦೦೩–೨೦೦೪ | ೧೨೯೬ | ೩೦೩ | ೧೫೯೯ | ೮೧೭ | ೨೩೧ | ೧೦೪೮ | ೬೫.೫೪% |

| ವರ್ಷ | ಹಾಜರಾದವರು | | | ಉತ್ತೀರ್ಣರಾದವರು | | | ಶೇಕಡಾ |
|---|---|---|---|---|---|---|---|
| | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಫಲಿತಾಂಶ |
| | | | ದ್ವಿತೀಯ ವರ್ಷ | | | | |
| ೧೯೯೯–೨೦೦೦ | ೬೩೧ | ೧೧೧ | ೭೪೨ | ೪೨೪ | ೮೬ | ೫೧೦ | ೬೮.೭೩% |
| ೨೦೦೦–೨೦೦೧ | ೫೯೦ | ೯೩ | ೬೮೩ | ೪೦೨ | ೬೭ | ೪೬೯ | ೬೮.೬೭% |
| ೨೦೦೧–೨೦೦೨ | ೭೧೮ | ೧೫೦ | ೮೬೮ | ೫೮೭ | ೧೩೨ | ೭೧೯ | ೮೨.೮% |
| ೨೦೦೨–೨೦೦೩ | ೮೭೭ | ೧೫೭ | ೧೦೩೪ | ೬೯೬ | ೧೩೮ | ೮೩೪ | ೮೦.೬೬% |
| ೨೦೦೩–೨೦೦೪ | ೧೦೦೫ | ೧೪೯ | ೧೧೫೪ | ೭೨೫ | ೧೧೭ | ೭೬೪ | ೭೨.೯೬% |

ಆಧಾರ: ವೃತ್ತಿ ಶಿಕ್ಷಣ ಇಲಾಖೆಯ ನಿರ್ದೇಶಕರ ಕಛೇರಿ, ಬೆಂಗಳೂರು.

**ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ಸಂಸ್ಥೆಗಳು:**

ಸರಕಾರಿ ಶೈಕ್ಷಣಿಕ ಸಂಸ್ಥೆಗಳೊಂದಿಗೆ ಆರೋಗ್ಯಕರ ಪೈಪೋಟಿ ನಡೆಸುತ್ತ, ಈ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸುತ್ತಿರುವ ಅನೇಕ ಖಾಸಗಿ ಸಂಸ್ಥೆಗಳು ಜಿಲ್ಲೆಯಲ್ಲಿ ಕಾರ್ಯನಿರತವಾಗಿವೆ. ಅಂತಹ ಪ್ರಮುಖ ಸಂಸ್ಥೆಗಳನ್ನು ಈ ಮುಂದೆ ಚರ್ಚಿಸಲಾಗಿದೆ.

**ಶ್ರೀ ಸತ್ಯ ಸಾಯಿ ಲೋಕಸೇವಾ ಸಂಸ್ಥೆ, ಮುದ್ದೇನಹಳ್ಳಿ**

ದಕ್ಷಿಣ ಕನ್ನಡ ಜಿಲ್ಲೆಯ ಅಳಿಕೆಯಲ್ಲಿ ೧೯೬೦ರಲ್ಲಿ ಸಂಸ್ಥಾಪಕ ಅಧ್ಯಕ್ಷ ಮಡಿಯಾಳ ನಾರಾಯಣ ಭಟ್ ಅವರ ಮನೆಯಲ್ಲಿ ಪ್ರಾರಂಭವಾದ ಈ ಸಂಸ್ಥೆ, ಕೋಲಾರ ಜಿಲ್ಲೆಯಲ್ಲಿ ತನ್ನ ಶೈಕ್ಷಣಿಕ ಚಟುವಟಿಕೆಗಳನ್ನು ೧೯೭೩ ರಿಂದ ಗುರುಕುಲ ಮಾದರಿಯಲ್ಲಿ ನಡೆಸುತ್ತ ಬಂದಿದೆ. ಚಿಕ್ಕಬಳ್ಳಾಪುರದ ಬಳಿಯ ಮುದ್ದೇನಹಳ್ಳಿಯಲ್ಲಿ ಪ್ರಸ್ತುತ ಈ ಸಂಸ್ಥೆ ಸುತ್ತಲ ಎಂಟು ಹಳ್ಳಿಗಳ ವಿದ್ಯಾರ್ಥಿಗಳ ಶೈಕ್ಷಣಿಕ ಅವಶ್ಯಕತೆಗಳನ್ನು ವಸತಿ ಸಹಿತ ಉಚಿತವಾಗಿ ಪೂರೈಸುತ್ತಿದೆ. ಸ್ಥಳೀಯ ಮಕ್ಕಳಿಗೆ ಇಲ್ಲಿ ವರ್ಷಕ್ಕೆರಡು ಬಾರಿ ಉಚಿತ ಸಮವಸ್ತ್ರವನ್ನು ನೀಡಲಾಗುತ್ತದೆ. ಮೇಲ್ಕಂಡ ಸಂಸ್ಥೆ ನಡೆಸುತ್ತಿರುವ ವಿವಿಧ ಶಾಲೆಗಳ ವಿವರ ಇಂತಿದೆ:–

**೧) ಶ್ರೀ ಸತ್ಯ ಸಾಯಿ ಲೋಕಸೇವಾ ಸಂಯುಕ್ತ ಪ.ಪೂ.ಕಾ:–** ೧೯೭೩ ರಲ್ಲಿ ಪ್ರೌಢಶಾಲೆಯಾಗಿ ಪ್ರಾರಂಭವಾದ ಈ ಸಂಸ್ಥೆ ೧೯೮೨ರಲ್ಲಿ ಸಂಯುಕ್ತ ಪದವಿಪೂರ್ವ ಕಾಲೇಜಾಗಿ ಪಿಯುಸಿ ತನಕ ಸುಮಾರು ೫೦೦ ಮಂದಿ ವಿದ್ಯಾರ್ಥಿಗಳು ೧೫ ಮಂದಿ ಬೋಧಕರ ಮಾರ್ಗದರ್ಶನದಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

**೨) ಶ್ರೀ ಸತ್ಯ ಸಾಯಿ ಲೋಕಸೇವಾ ಹಿರಿಯ ಪ್ರೈಮರಿ ಶಾಲೆ:–** ೧೯೭೩ ರಲ್ಲಿ ಐದನೇ ತರಗತಿ, ತದನಂತ್ರದಲ್ಲಿ ಆರು ಹಾಗೂ ಏಳನೇ ತರಗತಿಗಳೂ ಪ್ರಾರಂಭಗೊಂಡವು. ಈ ಸಂಸ್ಥೆಯಲ್ಲಿ ೨೦೦೪ರ ಮಾಚ ವೇಳೆಗೆ ೧೫೨ ಮಂದಿ ಮಕ್ಕಳು ಮೂರು ಮಂದಿ ಅಧ್ಯಾಪಕರು ಬಳಿ ವ್ಯಾಸಂಗ ಮಾಡುತ್ತಿದ್ದಾರೆ. ೧೯೮೦ರಲ್ಲಿ ಇಲ್ಲಿ ಸಿಬಿಎಸ್ಇ ತರಗತಿಗಳನ್ನೂ ಪ್ರಾರಂಭಿಸಲಾಯಿತು. ಇದರಡಿ ಆರರಿಂದ ಹತ್ತರ ತನಕ ಒಟ್ಟು ೨೦೦ ಮಂದಿ ವಿದ್ಯಾರ್ಥಿಗಳು ೯ ಮಂದಿ ಬೋಧಕ ಸಿಬ್ಬಂದಿಯಡಿ ವ್ಯಾಸಂಗ ಮಾಡುತ್ತಿದ್ದಾರೆ.

**೩) ಶ್ರೀ ಸತ್ಯ ಸಾಯಿ ವಿದ್ಯಾರ್ಥಿ ನಿಲಯ:–** ಕರ್ನಾಟಕದ ವಿವಿಧ ಭಾಗಗಳೇ ಸಲ್ಲದೆ ರಾಜ್ಯದ ಇತರೆಡೆಗಳಿಂದಲೂ, ವಿವಿಧ ಜಾತಿ, ಮತ, ಧರ್ಮಗಳ ಸುಮಾರು ೭೨೦ ವಿದ್ಯಾರ್ಥಿಗಳು ಭೇದಭಾವವಿಲ್ಲದೆ ಇಲ್ಲಿ ಭಾವೈಕ್ಯದಿಂದ ಜೀವಿಸುತ್ತಿದ್ದಾರೆ.

ಸಂಸ್ಥೆಯ ಆವರಣದಲ್ಲಿ ಶ್ರೀ ಗಣೇಶ ದೇವಾಲಯ, ಗಾಯತ್ರಿ, ನವಗ್ರಹ ಗುಡಿ, ಧನ್ವಂತರಿ ವನಗಳೇ ಅಲ್ಲದೆ ಒಂದು ಗೋಶಾಲೆ ಹಾಗೂ ಸುಂದರ ಉದ್ಯಾನಗಳಿವೆ. ಇದೇ ಪರಿಸರದಲ್ಲಿರುವ ಚಿಕಿತ್ಸಾಲಯ ೧೯೭೭ರಿಂದ ಇಲ್ಲಿನ ನಿವಾಸಿಗಳ ಮತ್ತು ಸುತ್ತಲಿನ ಹಳ್ಳಿಗಳ ಜನರಿಗೆ ಉಚಿತ ಚಿಕಿತ್ಸೆ ನೀಡುತ್ತದೆ.

**ಕೆ.ವಿ. ಮತ್ತು ಪಂಚಗಿರಿ ದತ್ತಿ (ರಿ):**

ಚಿಕ್ಕಬಳ್ಳಾಪುರದ ಶಾಸಕರಾಗಿದ್ದ ಕೆ. ವಿ. ವೆಂಕಟರಾಯಪ್ಪನವರು ೧೯೭೪ರಲ್ಲಿ 'ಚಿಕ್ಕಬಳ್ಳಾಪುರ ಶಿಕ್ಷಣ ದತ್ತಿ' (ಪ್ರಸ್ತುತ ಪಂಚಗಿರಿ ಶಿಕ್ಷಣ ದತ್ತಿ)ಯನ್ನು ೧೯೭೮ರಲ್ಲಿ 'ವೆಂಕಟಪತೆಪ್ಪ ಶಿಕ್ಷಣ ದತ್ತಿ' ಎಂಬ ಹೆಸರಿನಲ್ಲಿ ಪ್ರಾರಂಭಿಸಿದರು. ಚಿಕ್ಕಬಳ್ಳಾಪುರ ಬೆಂಗಳೂರು ರಸ್ತೆಯಲ್ಲಿ ನಾಲ್ಕು ಕಿ.ಮೀ. ದೂರದಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಸಂಸ್ಥೆಗಳು ಒಂದು ಫಾರ್ಮಸಿ ಕಾಲೇಜು, ಒಂದು ಪದವಿಪೂರ್ವ ಕಾಲೇಜು, ಒಂದು ಪ್ರಾಥಮಿಕ ಶಿಕ್ಷಣ ಸಂಸ್ಥೆ, ಎರಡು ಪ್ರೌಢಶಾಲೆಗಳು, ಮೂರು ಪ್ರಾಥಮಿಕ ಶಾಲೆಗಳು ಮತ್ತು ಒಂದು ಬಡಮಕ್ಕಳ ಅನಾಥಲಯ ಶಿಕ್ಷಕರ ಪ್ರಶಿಕ್ಷಣ ಸಂಸ್ಥೆ, ದೈಹಿಕ ಶಿಕ್ಷಣ ಕಾಲೇಜು, ಒಂದು ಪಾಲಿಟೆಕ್ನಿಕ್ ಹಾಗೂ ಹೆಣ್ಣು ಮತ್ತು ಗಂಡು ಮಕ್ಕಳಿಗಾಗಿ ಪ್ರತ್ಯೇಕ ಹಾಸ್ಟೆಲುಗಳನ್ನು ನಡೆಸುತ್ತಿವೆ.

**ಗೋಲ್ಡನ್ ವ್ಯಾಲಿ ಎಜುಕೇಷನ್ ಟ್ರಸ್ಟ್:**

ಕೆ.ಜಿ.ಎಫ್. ನಲ್ಲಿ ೧೯೮೬ರಲ್ಲಿ ಸ್ಥಾಪಿಸಲ್ಪಟ್ಟ ಮೇಲ್ಕಂಡ ದತ್ತಿ ಜಿಲ್ಲೆಯ ಪ್ರಮುಖ ತಾಂತ್ರಿಕ ಶಿಕ್ಷಣ ಸಂಸ್ಥೆಯಲ್ಲದೆ, ಕೆ.ಜಿ.ಎಫ್. ಪ್ರಥಮ ದರ್ಜೆ ಕಾಲೇಜು, ಕೆ.ಜಿ.ಎಫ್. ಕಾನೂನು ಕಾಲೇಜು ಹಾಗೂ ಕೆ.ಜಿ.ಎಫ್. ಪದವಿಪೂರ್ವ ಕಾಲೇಜುಗಳನ್ನು ನಡೆಸುತ್ತಿದೆ.

**ಸಬರಮತಿ ವಿದ್ಯಾ ಸಂಸ್ಥೆ,** ಪ್ರಗತಿ ವಿದ್ಯಾಸಂಸ್ಥೆ ಮುಂತಾದ ಇತರ ಖಾಸಗಿ ಆಡಳಿತ ಮಂಡಳಿಗಳು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿವೆ.

ಭಾಷಾ ಅಲ್ಪಸಂಖ್ಯಾತ ಕ್ರಿಶ್ಚಿಯನ್ ಪ್ರಮುಖ ಶಿಕ್ಷಣ ಸಂಸ್ಥೆಗಳಾದ ಶತಮಾನೋತ್ಸವ ಆಚರಿಸಿದ ಸೇಂಟ್ ಜೋಸೆಫ್ ಕಾನ್ವೆಂಟ್, ಸೇಂಟ್ ತೆರೆಸಾ, ಸೇಂಟ್ ಮೇರಿ, ವಿಲಿಯಂ ರಿಚರ್ಡ್, ಪಾರ್ಕಿನ್‌ಸನ್ ಮೆಮೋರಿಯಲ್, ಲಿಂಡ್ಸೆ ಮೆಮೋರಿಯಲ್, ಸೇಂಟ್ ವಿಕ್ಟರಿ, ಸೇಂಟ್ ಮೆಹೆರಾ ಮುಂತಾದವು ಕೆಜಿಎಫ್ ಪ್ರಾಂತ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ಇದೇ ರೀತಿ ಮುಸ್ಲಿಂ ಸಂಸ್ಥೆಗಳಾದ ನೂರಿ ಶಿಕ್ಷಣ ಸಂಸ್ಥೆ ಹಾಗೂ ನಿಜಾಮಿಯಾ ಶಿಕ್ಷಣ ಸಂಸ್ಥೆಗಳೂ ಪ್ರಮುಖವಾಗಿವೆ.

## ಕೃಷಿ ಶಿಕ್ಷಣ

**ರೇಷ್ಮೆ ಕೃಷಿ ಕಾಲೇಜು**

ರೇಷ್ಮೆ ಬೇಸಾಯದ ಬಗ್ಗೆ ವ್ಯವಸ್ಥಿತ ಶೈಕ್ಷಣಿಕ ಪದವಿ ನೀಡುವ ಉದ್ದೇಶದಿಂದ ಜಿಲ್ಲೆಯ ಚಿಂತಾಮಣಿ ಬಳಿ ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ವತಿಯಿಂದ ಈ ಸಂಸ್ಥೆಯು ೧೯೯೫ರ ಅಕ್ಟೋಬರ್‌ನಲ್ಲಿ ಸ್ಥಾಪಿಸಲ್ಪಟ್ಟಿತು. ಇದಕ್ಕೆ ಮೊದಲು ರೇಷ್ಮೆ ಬೇಸಾಯವನ್ನು ಕೃಷಿ ಹಾಗೂ ಸ್ನಾತಕೋತ್ತರ ಮಟ್ಟದಲ್ಲಿ ಒಂದು ವಿಷಯವನ್ನಾಗಿ ಬೋಧಿಸಲಾಗುತ್ತಿತ್ತು.

ಈ ಸಂಸ್ಥೆಯಲ್ಲಿ ೨೦೦೪–೦೫ ಸಾಲಿನಲ್ಲಿ

೧) ಸಿಲ್ಕ್ ವರ್ಮ್ ಹೋಸ್ಟ್ ಪ್ಲಾಂಟ್ ಜೆನೆಟಿಕ್ಸ್ ಮತ್ತು ಬ್ರೀಡಿಂಗ್ (ಹಿಪ್ಪು ನೇರಳೆ ತಳಿ ಅಭಿವೃದ್ಧಿ)
೨) ಸಿಲ್ಕ್ ವರ್ಮ್ ಹೋಸ್ಟ್ ಆಗ್ರಾನಮಿ (ಬೇಸಾಯ ಶಾಸ್ತ್ರ)
೩) ಸಿಲ್ಕ್ ವರ್ಮ್ ಜೆನೆಟಿಕ್ಸ್ ಮತ್ತು ಬ್ರೀಡಿಂಗ್ (ರೇಷ್ಮೆ ಹುಳು ತಳಿ ಅಭಿವೃದ್ಧಿ)
೪) ಸಿಲ್ಕ್ ವರ್ಮ್ ಎಗ್ ಪ್ರೊಡಕ್ಷನ್ ಟೆಕ್ನಾಲಜಿ (ರೇಷ್ಮೆ ಮೊಟ್ಟೆ ಉತ್ಪಾದನಾ ತಾಂತ್ರಿಕತೆ)
೫) ಸಿಲ್ಕ್ ವರ್ಮ್ ರೇರಿಂಗ್ ಟೆಕ್ನಾಲಜಿ (ರೇಷ್ಮೆ ಹುಳು ಸಾಕಣೆ)
೬) ಸಿಲ್ಕ್ ರೀಲಿಂಗ್ ಟೆಕ್ನಾಲಜಿ (ರೇಷ್ಮೆ ನೂಲು ಬಿಚ್ಚುವಿಕೆ)
೭) ಸಿಲ್ಕ್ ವರ್ಮ್ ಪ್ಯಾಥಾಲಜಿ ಹಾಗೂ (ರೇಷ್ಮೆ ಹುಳುಗಳ ರೋಗ ನಿಯಂತ್ರಣ ತಾಂತ್ರಿಕತೆ)
೮) ಸಿಲ್ಕ್ ಪೋಸ್ಟ್ ರೀಲಿಂಗ್ ಟೆಕ್ನಾಲಜಿ ಎಂಬ ಎಂಟು ಮುಖ್ಯ ವಿಭಾಗಗಳು ಕಾರ್ಯನಿರತವಾಗಿದ್ದವು. ಅಲ್ಲದೆ ಕೃಷಿ ಸಂಬಂಧಿತ ವಿಷಯಗಳಾದ ಬೇಸಾಯಶಾಸ್ತ್ರ ಅಗ್ರಾನಮಿ, ಕೃಷಿ ಅರ್ಥಶಾಸ್ತ್ರ ಕೃಷಿ ವಿಸ್ತರಣೆ, ಕೃಷಿ ಅಣುಜೀವಿಶಾಸ್ತ್ರ

ಪಶುವಿಜ್ಞಾನ, ಬಯೋ ಟೆಕ್ನಾಲಜಿ (ಜೈವಿಕ ತಂತ್ರಜ್ಞಾನ) ಕ್ರಾಪ್ ಫಿಜಿಯಾಲಜಿ, ಫಾರೆಸ್ಟ್ರಿ ಜೆನೆಟಿಕ್ಸ್ ಹಾಗೂ ಪ್ಲಾಂಟ್ ಬ್ರೀಡಿಂಗ್, ತೋಟಗಾರಿಕೆ, ಪ್ಲಾಂಟ್ ಪೆಥಾಲಜಿ, (ಬೆಳೆ ರೋಗಶಾಸ್ತ್ರ) ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನಶಾಸ್ತ್ರ, ಫುಡ್ ನ್ಯೂಟ್ರಿಷನ್ ಹಾಗೂ ಸ್ಟಾಟಿಸ್ಟಿಕ್ಸ್ (ಸಂಖ್ಯಾಶಾಸ್ತ್ರ) ಮತ್ತು ಕಂಪ್ಯೂಟರ್ ಸೈನ್ಸ್ ವಿಷಯಗಳನ್ನು ಬೋಧಿಸಲಾಗುತ್ತಿತ್ತು. ಎಂಟು ಸೆಮಿಸ್ಟರ್‌ಗಳ ನಾಲ್ಕು ವರ್ಷದ ಕಲಿಕಾವಧಿಯಲ್ಲಿ ವಿದ್ಯಾರ್ಥಿಗಳು ರೇಷ್ಮೆ ಹಾಗೂ ಸಂಬಂಧಿತ ವಿಷಯಗಳಲ್ಲಿ ತರಗತಿಯಲ್ಲಿ ಮಾತ್ರವಲ್ಲದೆ ಸಂಸ್ಥೆಯ ಆವರಣದ ೧.೦೪ ಹೆಕ್ಟೇರ್ ಪ್ರದೇಶದ ಹಿಪ್ಪನೇರಳೆ ತೋಟಗಳಲ್ಲಿ ಪ್ರಾಯೋಗಿಕ ಅನುಭವವನ್ನು ಪಡೆಯುತ್ತಾರೆ. ಸಂಸ್ಥೆಯಲ್ಲಿ ೨೦ ಜೆನೋಟೈಪ್ ಗಳ 'ಮಲ್ಬರಿ ಜೆರ್ಮ್ ಪ್ಲಾಸಂ' ಸಹ ಇದೆ. ಸುಮಾರು ೪,೦೦೦ ಉತ್ತಮ ಪುಸ್ತಕಗಳ ಗ್ರಂಥಾಲಯ, ಕಂಪ್ಯೂಟರ್ ವಿಭಾಗ, ಒಂದು ಅತಿಥಿಗೃಹ, ಹೆಣ್ಣು ಹಾಗೂ ಗಂಡು ಮಕ್ಕಳ ಪ್ರತ್ಯೇಕ ಹಾಸ್ಟಲುಗಳು, ಮುಂತಾದ ಅನುಕೂಲಗಳನ್ನು ಹೊಂದಿರುವ ಈ ಸಂಸ್ಥೆಯಲ್ಲಿ ಪ್ರವೇಶ ಪಡೆಯಲು ಪಿಸಿಎಂಬಿ ವಿಷಯಗಳ ಪಿಯುಸಿ ತೇರ್ಗಡೆ ಅವಶ್ಯಕ. ವರ್ಷಂಪ್ರತಿ ೨೫ ಮಂದಿಗೆ ಪ್ರವೇಶಾವಕಾಶವಿದ್ದು, ೨೦೦೪–೦೫ಕ್ಕೆ ಇಲ್ಲಿ ಒಟ್ಟು ೮೪ ಮಂದಿ ವಿದ್ಯಾರ್ಥಿಗಳು ೧೬ ಮಂದಿ ಬೋಧಕ ಸಿಬ್ಬಂದಿಯ ಮಾರ್ಗದರ್ಶನದಲ್ಲಿ ವ್ಯಾಸಂಗ ಮಾಡುತ್ತಿದ್ದರು.

## ವೈದ್ಯಕೀಯ ಶಿಕ್ಷಣ

### ದೇವರಾಜ ಅರಸ ಮೆಡಿಕಲ್ ಕಾಲೇಜು, ಕೋಲಾರ

ಕೋಲಾರದಿಂದ ಐದು ಕಿ.ಮೀ. ದೂರದ ಟಮಕದಲ್ಲಿ ೮೫ ಎಕರೆ ಪ್ರದೇಶದಲ್ಲಿ ೧೯೮೬ರಲ್ಲಿ ಆರ್.ಎಲ್. ಜಾಲಪ್ಪನವರಿಂದ ಸ್ಥಾಪನೆಗೊಂಡ ಈ ಸಂಸ್ಥೆ ಭಾರತೀಯ ವೈದ್ಯಕೀಯ ಸಮಿತಿಯಿಂದ ಮಾನ್ಯತೆ ಪಡೆಸಿದ್ದು, ರಾಜೀವ್‌ಗಾಂಧಿ ವೈದ್ಯ ವಿಜ್ಞಾನ ವಿಶ್ವವಿದ್ಯಾಲಯದ ಸಂಲಗ್ನತೆ ಹೊಂದಿದೆ. ಐದೂವರೆ ವರ್ಷದ ಎಂಬಿಬಿಎಸ್ ತರಗತಿಗೆ ವರ್ಷಂಪ್ರತಿ ಇಲ್ಲಿ ೧೫೦ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ. ಈ ಸಂಸ್ಥೆಯಲ್ಲಿ ಕ್ಲಿನಿಕಲ್ ವಿಷಯದಲ್ಲಿ ಮೂರುವರ್ಷ ಅವಧಿಯ ಸ್ನಾತಕೋತ್ತರ ತರಗತಿ ೧೯೯೭ರಲ್ಲಿ ಪ್ರಾರಂಭಗೊಂಡಿತು. ನಂತರದಲ್ಲಿ ಸ್ನಾತಕೋತ್ತರ ತರಗತಿಗಳು ಜನರಲ್ ಮೆಡಿಸನ್, ಜನರಲ್ ಸರ್ಜರಿ, ಪೀಡಿಯಾಟ್ರಿಕ್ಸ್, ಇಎನ್‌ಟಿ, ಆಬ್‌ಸ್ಟೆಟ್ರಿಕ್ಸ್ ಮತ್ತು ಗೈನಕಾಲಜಿ, ಅರ್ಥೋಪೆಡಿಕ್ಸ್, ಆಪ್ತಲ್ಮಾಲಜಿ, ಡರ್ಮಿಟಾಲಜಿ, ವೆನೆರಿಯಾಲಜಿ ಮತ್ತು ಲೆಪ್ರಸಿ, ಅನಿಸ್ತೀಷಿಯಾ ಹಾಗೂ ರೇಡಿಯೋ ಡಯಾಗ್ನೋಸಿಸ್ ವಿಷಯಗಳಲ್ಲಿಯೂ ಪ್ರಾರಂಭಗೊಂಡವು. ಇದಲ್ಲದೆ, ಅನಿಸ್ತೀಷಿಯಾ, ಅರ್ಥೋಪೆಡಿಕ್ಸ್, ಅಬ್‌ಟೆಟ್ರಿಕ್ಸ್ ಮತ್ತು ಗೈನಕಾಲಜಿ, ಆಪ್ತಲ್ಮಾಲಜಿ, ಮೆಡಿಕಲ್ ರೇಡಿಯೋ ಡಯಾಗ್ನೋಸಿಸ್ ಹಾಗೂ ಇ. ಎನ್. ಟಿ. ವಿಷಯಗಳಲ್ಲಿ ಎರಡು ವರ್ಷ ಅವಧಿಯ ಸ್ನಾತಕೋತ್ತರ ಡಿಪ್ಲೊಮಾ ಪದವಿಯನ್ನು ಪ್ರಾರಂಭಿಸಲಾಯಿತು. ಇಲ್ಲಿನ ವಿದ್ಯಾರ್ಥಿಗಳ ಪಠ್ಯಾನುಕೂಲಕ್ಕಾಗಿ ಕಾಲೇಜಿಗೆ ಹೊಂದಿಕೊಂಡಂತೆ ೫೫೦ ಹಾಸುಗೆಗಳ ಆರ್. ಎಲ್. ಜಾಲಪ್ಪ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ೩೩೦ ಹಾಸುಗೆಗಳ ನರಸಿಂಹರಾಜ ಆಸ್ಪತ್ರೆ ಮತ್ತು ೭೫ ಹಾಸುಗೆಗಳ ಕಮಲ ನೆಹರು ಕ್ಷಯ ಮತ್ತು ಹೃದ್ರೋಗ ಆಸ್ಪತ್ರೆಗಳೂ ಕಾರ್ಯನಿರ್ವಹಿಸುತ್ತಿವೆ. ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾದ ಗ್ರಂಥಾಲಯಗಳೂ, ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಹಾಸ್ಟಲುಗಳೂ ಬ್ಯಾಂಕ್, ಅಂಗಡಿ, ಉಪಹಾರಗೃಹ, ಬೇಕರಿ ಮತ್ತು ಪೊಲೀಸ್ ಹೊರಠಾಣೆಗಳನ್ನು ಈ ಸಂಸ್ಥೆ ಹೊಂದಿರುತ್ತದೆ.

### ಸಂಬರಂ ದಂತ ವೈದ್ಯ ಶಿಕ್ಷಣ ಸಂಸ್ಥೆ:

ಈ ಸಂಸ್ಥೆಯು ಕೆ. ಜಿ. ಎಫ್ ನಲ್ಲಿ ಕಾರ್ಯನಿರ್ವಹಿಸುತ್ತಿದ್ದು, ನಾಲ್ಕುವರೆ ವರ್ಷದ ಬಿ.ಡಿ.ಎಸ್. ಪದವಿಯನ್ನು ನೀಡುತ್ತದೆ.

### ಸ್ನಾತಕೋತ್ತರ ಕೇಂದ್ರ ಕೋಲಾರ:

ಈ ಕೇಂದ್ರವು ಪ್ರಾಣಿಶಾಸ್ತ್ರ ಕನ್ನಡ, ಅರ್ಥಶಾಸ್ತ್ರ ಹಾಗೂ ವಾಣಿಜ್ಯ ಶಾಸ್ತ್ರಗಳ ಸ್ನಾತಕೋತ್ತರ ವಿಷಯಗಳನ್ನೊಳಗೊಂಡು ೧೯೯೪ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಆಡಳಿತದಡಿ ಪ್ರಾರಂಭವಾಯಿತು. ಪ್ರಾಣಿಶಾಸ್ತ್ರ ವಿಭಾಗಕ್ಕೆ ಒಟ್ಟು ೨೫ ಮಂದಿಗೆ (ಐದು ಪೇಮೆಂಟ್ ಸೀಟುಗಳು) ಹಾಗೂ ವಾಣಿಜ್ಯ ವಿಭಾಗಕ್ಕೆ ಒಟ್ಟು ೩೫ (ಐದು ಪೇ. ಸೀ.) ಲಭ್ಯವಿರುತ್ತದೆಯಲ್ಲದೆ ಕನ್ನಡ ಹಾಗೂ

ಅರ್ಥಶಾಸ್ತ್ರ ವಿಭಾಗಗಳು ಕಾರ್ಯನಿರ್ವಹಿಸುತ್ತಿವೆ. ಮೇಲಿನ ಎಲ್ಲಾ ವಿಷಯಗಳ ಅವಧಿ ಎರಡು ಆರು ತಿಂಗಳ ಅವಧಿಯ ನಾಲ್ಕು ಸೆಮಿಸ್ಟರ್‌ಗಳಾಗಿರುತ್ತದೆ. ರಾಜ್ಯ ಸರಕಾರದ ನಿಯಮಾವಳಿಯಂತೆ, ಇಲ್ಲಿ ಸೀಟುಗಳನ್ನು ವಿವಿಧ ಜಾತಿ, ಪಂಗಡಗಳಿಗೆ ಕಾದಿರಿಸಲಾಗಿದೆ.

## ಕಾನೂನು ಶಿಕ್ಷಣ

ರಾಜ್ಯದ ಏಕೈಕ ಸರಕಾರಿ ಕಾನೂನು ಶಿಕ್ಷಣ ಕಾಲೇಜು ಕೋಲಾರದಲ್ಲಿ ೧೯೬೭ರಲ್ಲಿ ಸ್ಥಾಪನೆಗೊಂಡಿತು. ಕಾಲೇಜು ಶಿಕ್ಷಣ ನಿರ್ದೇಶನಾಲಯದಡಿ ಕಾರ್ಯನಿರ್ವಸುತ್ತಿರುವ ಈ ಸಂಸ್ಥೆ ಐದು ವರ್ಷ ಅವಧಿಯಲ್ಲಿ ಆರು ತಿಂಗಳ ಅವಧಿಯ ಹತ್ತು ಸೆಮಿಸ್ಟರ್‌ಗಳಲ್ಲಿ ಎಲ್‌ಎಲ್‌ಬಿ ಪದವಿ ನೀಡುತ್ತದೆ. ಪಿಯುಸಿ ಉತ್ತೀರ್ಣತೆ ಇಲ್ಲಿಗೆ ಪ್ರವೇಶಾವಕಾಶ ದೊರಕಿಸಿಕೊಡುತ್ತದೆ. ವರ್ಷಂಪ್ರತಿ ೧೦೦ ಮಂದಿ ಇಲ್ಲಿ ಪ್ರವೇಶ ಪಡೆಯಬಹುದಾಗಿದೆ. ೨೦೦೪–೦೫ನೇ ಶೈಕ್ಷಣಿಕ ವರ್ಷದಲ್ಲಿ ಈ ಸಂಸ್ಥೆಯಲ್ಲಿ ಸುಮಾರು ೫೦೦ ಮಂದಿ ವಿದ್ಯಾರ್ಥಿಗಳು ೨೬ ಮಂದಿ (ಮೂರು ಖಾಯಂ, ೨೩ ಸಂದರ್ಶಕ ಪ್ರಾಧ್ಯಾಪಕರು) ಬೋಧಕ ಸಿಬ್ಬಂದಿಯ ಮಾರ್ಗದರ್ಶನದಲ್ಲಿ ಅಧ್ಯಯನ ಮಾಡುತ್ತಿದ್ದರು.

ಜಿಲ್ಲೆಯ ಮತ್ತೊಂದು ಕಾನೂನು ಶಿಕ್ಷಣ ಸಂಸ್ಥೆ ಗೋಲ್ಡನ್ ವ್ಯಾಲಿ ಎಜುಕೇಷನಲ್ ಟ್ರಸ್ಟ್ ವತಿಯಿಂದ ಕೆಜಿಎಫ್ ನಲ್ಲಿ ೧೯೭೭ರಲ್ಲಿ ಪ್ರಾರಂಭಗೊಂಡಿದ್ದು, ಮೂರು ಹಾಗೂ ಐದು ವರ್ಷದ ಎಲ್‌ಎಲ್‌ಬಿ ತರಗತಿಗಳನ್ನು ನಡೆಸುತ್ತಿದೆ. ಮೊದಲ ಮಾದರಿ ತರಗತಿಗೆ ವರ್ಷಂಪ್ರತಿ ೧೬೦ ಮಂದಿಗೆ ಹಾಗೂ ಎರಡನೇ ಮಾದರಿ ತರಗತಿಗೆ ೮೦ ಮಂದಿಗೆ ಪ್ರವೇಶಾವಕಾಶವಿರುತ್ತದೆ. ೨೦೦೪–೦೫ನೇ ಸಾಲಿಗೆ ಇಲ್ಲಿ ಒಟ್ಟು ೧೨ ಮಂದಿ (ಮೂರು ಖಾಯಂ ಒಂಬತ್ತು ಸಂದರ್ಶಕ) ಬೋಧಕ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದರು.

## ಸಂಸ್ಕೃತ ಶಿಕ್ಷಣ

ತಮಿಳುನಾಡು ಹಾಗೂ ಆಂಧ್ರಪ್ರದೇಶಗಳ ಗಡಿಗಳಿಗೆ ಹೊಂದಿಕೊಂಡಿರುವ ಜಿಲ್ಲೆಯ ಜನಕ್ಕೆ ಆಂಧ್ರ ಹಾಗೂ ಕನ್ನಡ, ತಮಿಳು ಹಾಗೂ ತೆಲುಗು ಭಾಷೆಗಳು ಪ್ರಾಂತೀಯ ಪ್ರಭಾವದಿಂದ ಸ್ವಾಭಾವಿಕವಾಗಿ ಪರಿಚಯವಿರುವುದು ಸಾಮಾನ್ಯದ ಸಂಗತಿಯಾದರೂ, ಮೊದಲಿನಿಂದಲೂ ಸಂಸ್ಕೃತ ಭಾಷೆಗೆ ಇಲ್ಲಿ ಪ್ರಾಮುಖ್ಯತೆ ದೊರೆತಿರುವುದೂ, ಇಂದಿಗೂ ಆ ಭಾಷೆಯ ಬಗ್ಗೆ ಜನಮನದಲ್ಲಿ ಒಲವು ಇರುವುದೂ, ಅದರ ಬೆಳವಣಿಗೆಗೆ ಹಲವಾರು ಸಂಘ ಸಂಸ್ಥೆಗಳು ದುಡಿಯುತ್ತಿರುವುದೂ ಸಂತಸದ ಸಂಗತಿ.

ಜಿಲ್ಲೆಯ ಪ್ರಥಮ ಸಂಸ್ಕೃತ ಪಾಠಶಾಲೆ ಶಿಡ್ಲಘಟ್ಟದಲ್ಲಿ ೧೮೮೮ರಲ್ಲಿ ಕೃಷ್ಣ ಘನಪಾಠಿಯರಿಂದ ಪ್ರಾರಂಭಿಸಲ್ಪಟ್ಟಿತು. ಪ್ರಸ್ತುತ ಇಬ್ಬರು ಶಿಕ್ಷಕರನ್ನು, ೯೦ ವಿದ್ಯಾರ್ಥಿಗಳನ್ನೊಳಗೊಂಡಿರುವ ಈ ಸಂಸ್ಥೆ ಸರಕಾರಿ ಅನುದಾನ ಪಡೆಯುತ್ತಿರುವ ಸ್ವಾಯತ್ತ ಸಂಸ್ಥೆಯಾಗಿದೆ. ತದನಂತರ ಗೌರಿಬಿದನೂರು ತಾಲೂಕಿನ ಹೊಸೂರಿನಲ್ಲಿ ೧೯೧೫ರಲ್ಲಿ ಸುಬ್ಬಾಶಾಸ್ತ್ರಿಗಳಿಂದ, ಇದೇ ತಾಲೂಕಿನ ದಾರಿನಾಯಕನ ಪಾಳ್ಯದಲ್ಲಿ ೧೯೨೬ರಲ್ಲಿ ರಾಮಕೃಷ್ಣಶಾಸ್ತ್ರಿಗಳಿಂದ, ಚಿಕ್ಕಬಳ್ಳಾಪುರದಲ್ಲಿ ೧೯೩೫ರಲ್ಲಿ ಲಕ್ಷ್ಮಣಾಚಾರ್‌ರಿಂದ ಪ್ರಾರಂಭಿಸಲ್ಪಟ್ಟ ಸತ್ಯನಾರಾಯಣ ಸಂಸ್ಕೃತ ಪಾಠಶಾಲೆ, ಚಿಂತಾಮಣಿ ತಾಲೂಕಿನ ಯಗವಕೋಟೆಯಲ್ಲಿ ೧೯೪೪ರಲ್ಲಿ ಪ್ರಾರಂಭಿಸಲಾದ ವೀರನಾರಾಯಣ ಕೃಪಾ ಸಂಸ್ಕೃತ ಪಾಠಶಾಲೆಗಳು ಹಾಗೂ ೧೯೭೨ ರಲ್ಲಿ ಗುಡಿಬಂಡೆ ತಾಲೂಕಿನ ಸೋಮೇನಹಳ್ಳಿಯಲ್ಲಿ ಪ್ರಾರಂಭಗೊಂಡ ಶ್ರೀ ಶಂಕರಭಾರತೀ ಹಾಗೂ ಸಂಸ್ಕೃತ ಪಾಠಶಾಲೆ ಹಾಗೂ ಮತ್ತೂರಿನ ಸಂಸ್ಕೃತ ಪಾಠಶಾಲೆಗಳಲ್ಲದೆ ಜಿಲ್ಲೆಯ ಎಲ್ಲೆಡೆ ಶಾಲಾ ಕಾಲೇಜುಗಳಲ್ಲಿ ಸಂಸ್ಕೃತ ಭಾಷೆಯನ್ನು ದ್ವಿತೀಯ ಭಾಷೆಯಾಗಿಯೂ, ಐಚ್ಛಿಕ ವಿಷಯವಾಗಿಯೂ ಬೋಧಿಸಲಾಗುತ್ತಿದೆ.

**ಗ್ರಂಥಾಲಯಗಳು:**

ಚಿಂತಾಮಣಿಯಲ್ಲಿ ೧೯೬೮ರಲ್ಲಿ ಪ್ರಾರಂಭವಾದ 'ಸ್ಟೂಡೆಂಟ್ ವೆಲ್‌ಫೇರ್ ಅಸೋಸಿಯೇಷನ್' ಸ್ಥಾಪಿತವಾದ ನಂತರ ಗ್ರಂಥಾಲಯಗಳು ಜಿಲ್ಲೆಯ ಹಲವೆಡೆ ಕಾರ್ಯನಿರ್ವಹಿಸುತ್ತಿದ್ದರೂ ಗ್ರಂಥಾಲಯ ಚಳವಳಿ ವ್ಯವಸ್ಥಿತರೂಪ ಪಡೆದದ್ದು, ಜಿಲ್ಲಾ

ಕೇಂದ್ರ ಗ್ರಂಥಾಲಯದ ಸ್ಥಾಪನೆಯ ನಂತರವೇ. ಮೇಲ್ಕಂಡ ಗ್ರಂಥಾಲಯವನ್ನು ಸರಕಾರ ೧೯೭೦ರಲ್ಲಿ ವಹಿಸಿಕೊಂಡು ೧೯೮೭ರವರೆವಿಗೂ ಅದನ್ನು ಚಿಂತಾಮಣಿಯಲ್ಲಿಯೇ ಇರಿಸಿತು. ಅದನ್ನು ಅದೇ ವರ್ಷ ಕೋಲಾರದ ಪ್ರಸ್ತುತದ ಕಟ್ಟಡಕ್ಕೆ ಸ್ಥಳಾಂತರಿಸಿತು. ಜಿಲ್ಲೆಯ ಕೇಂದ್ರ ಗ್ರಂಥಾಲಯದಡಿ ಎಲ್ಲಾ ತಾಲೂಕುಗಳಲ್ಲಿ ತಾಲೂಕು ಗ್ರಂಥಾಲಯಗಳು ಕಾರ್ಯನಿರ್ವಹಿಸುತ್ತಿದ್ದು, ಪ್ರತೀ ಶಾಖೆ ಒಬ್ಬ ಗ್ರಂಥಾಲಯ ಸಹಾಯಕ ಅಥವಾ ಸಹಾಯಕ ಗ್ರಂಥಾಧಿಕಾರಿಯ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತಿದೆ. ಮೇಲ್ಕಂಡ ಎಲ್ಲಾ ಗ್ರಂಥಾಲಯಗಳ ಒಟ್ಟು ಪುಸ್ತಕಗಳ ಸಂಖ್ಯೆ ಸುಮಾರು ೨,೬೫,೦೦೦ ಆಗಿರುತ್ತದೆ. ಜಿಲ್ಲೆಯ ಗ್ರಾಮೀಣ ಜನತೆಯ ಅನುಕೂಲಕ್ಕಾಗಿ ಗ್ರಾಮಪಂಚಾಯ್ತಿ ಗ್ರಂಥಾಲಯ ಯೋಜನೆಯಡಿ ೧೯೮೮ರಲ್ಲಿ ಜಿಲ್ಲೆಯ ೩೦೬ ಗ್ರಾಮ ಪಂಚಾಯ್ತಿಗಳ ಪೈಕಿ ೧೮೪ರಲ್ಲಿ ಗ್ರಂಥಾಲಯಗಳನ್ನುಸ್ಥಾಪಿಸಲಾಗಿದೆ. ಉಳಿದ ೧೨೨ ಗ್ರಾಮಪಂಚಾಯ್ತಿಗಳಲ್ಲಿ ಇವುಗಳ ಸ್ಥಾಪನೆಗೆ ಕ್ರಮಕೈಗೊಳ್ಳಲಾಗಿದೆ.

## ಕ್ರೀಡೆ *

"ಬರಗಾಲದ ಜಿಲ್ಲೆ" ಎಂದೇ ಹೆಸರು ಪಡೆದ ಕೋಲಾರ ಜಿಲ್ಲೆಯು ಶಿಕ್ಷಣ, ಸಾಹಿತ್ಯ, ಸಂಸ್ಕೃತಿ ಕಲಾ ಕ್ಷೇತ್ರಗಳೇ ಅಲ್ಲದೇ ಚಿನ್ನ, ಹಾಲು ರೇಷ್ಮೆ ಉತ್ಪನ್ನಗಳಲ್ಲಿ ದೇಶದಾದ್ಯಂತ ಜನಪ್ರಿಯವಾಗಿದೆ. ಜತೆಜತೆಗೆ ಕ್ರೀಡಾ ಚಟುವಟಿಕೆಗಳಲ್ಲಿಯೂ ದಾಪುಗಾಲು ಹಾಕುತ್ತ ಅಂತರ ರಾಷ್ಟ್ರೀಯ ಮಟ್ಟದ ಕ್ರೀಡಾ ಪಟುಗಳನ್ನೂ ದೇಶಕ್ಕೆ ನೀಡಿದೆ. ಕ್ರೀಡಾ ಕ್ಷೇತ್ರ ವ್ಯವಸ್ಥಿತವಾದ ರೀತಿಯಲ್ಲಿ ರೂಪುಗೊಳ್ಳುವ ಪೂರ್ವದಲ್ಲಿ ಜಿಲ್ಲೆಯಲ್ಲಿ ಜನಪದ ಗ್ರಾಮೀಣ ಕ್ರೀಡೆಗಳಾದ ಚಿನ್ನಿದಾಂಡು, ಮರಕೋತಿಯಾಟ, ಕಲ್ಲೋಮಣ್ಣೋ, ಕೋಳಿಪಂದ್ಯ, (ಹುಂಜಗಳ ಸ್ಪರ್ಧೆ) ಗೋಲಿಯಾಟ, ಲಗೋರಿ, ಗಾಳೀಪಟದಾಟ, ಘಟ್ಟಾಬಾರ (ಚೌಕಾಬಾರ), ಕುಂಟೆಬಿಲ್ಲೆ, ಗುಲ್ಲೋರಿಯೋ, ಸೂರುಚೆಂಡು, ಪಗಡೆ, ಪುಲಿಗೆತ್ತು, ಕಬಡ್ಡಿ, ಈಜು, ಸಂಕ್ರಾಂತಿ ಹಬ್ಬದ ಕಾಲದಲ್ಲಿ ಎತ್ತುಗಳನ್ನು ಓಡಿಸುವ ಸ್ಪರ್ಧೆ ಮುಂತಾದವು ಪ್ರಚಲಿತದಲ್ಲಿದ್ದವು. ಕೋಲಾರ ತಾಲೂಕಿನ ಅರಾಬಿಕ ಕೊತ್ತನೂರು ಹಾಗೂ ಟೇಕಲ್‌ಗಳಲ್ಲಿ ಚಿರತೆಗಳನ್ನು ಹಿಡಿದು ಕಟ್ಟಿಹಾಕಿ (ಪಾರುವೇಟ) ಇವುಗಳಿಂದ ಜನರಂಜನೆ ನೀಡಲಾಗುತ್ತಿತ್ತು. ಕಳೆದೆರಡು ದಶಕಗಳಿಂದ ಇದು ಕಾಣಬರುತ್ತಿಲ್ಲ. ಹಿಂದೂಮುಸ್ಲಿಂ ಐಕ್ಯತೆಯ ಸಂಕೇತವಾದ ಬಾಬಯ್ಯನ ಹಬ್ಬ (ಮೊಹರಂ)ವು ಜಿಲ್ಲೆಯಲ್ಲಿ ಜನಪ್ರಿಯವಾಗಿದೆ. ಇವುಗಳಲ್ಲಿ ಗಾಳೀಪಟ ಸ್ಪರ್ಧೆ, ಕಬಡ್ಡಿ, ಈಜು ಸ್ಪರ್ಧೆಗಳು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಜಾಗತಿಕ ಪ್ರಪಂಚದಲ್ಲಿಯೂ ಜನಪ್ರಿಯತೆ ಕಂಡಿದ್ದರೂ, ಮೇಲಿನ ಎಲ್ಲಾ ಕ್ರೀಡೆಗಳು ಜಿಲ್ಲೆಯಲ್ಲಿ ಈಗಲೂ ಜನಾನುರಾಗಿ ಕ್ರೀಡೆಗಳಾಗಿವೆ. ಶಿಕ್ಷಣ ಕ್ಷೇತ್ರದಲ್ಲಿ ಸುಧಾರಣೆಯಾಗಿ, ಗ್ರಾಮೀಣ ಪ್ರದೇಶಗಳಲ್ಲಿ ಶಾಲೆಗಳು ಪ್ರಾರಂಭವಾದಾಗಿನಿಂದ, ದೈನಂದಿನ ಕವಾಯತಿನೊಂದಿಗೆ ವಾರ್ಷಿಕೋತ್ಸವ ಸಮಾರಂಭಗಳಿಗಾಗಿ ಓಟದ ಉದ್ದ ಹಾಗೂ ಎತ್ತರ ಜಿಗಿತದ ಸ್ಪರ್ಧೆಗಳು ಏರ್ಪಾಡಾಗುತ್ತಿದ್ದವು. ಕ್ರೀಡಾಂಗಣಗಳ ಕೊರತೆಯಿಂದಾಗಿ ಇವುಗಳನ್ನು ಸಮರ್ಪಕವಾಗಿ ನಡೆಸಲಾಗುತ್ತಿರಲಿಲ್ಲ. ಈ ಕೊರತೆಯಿಂದಾಗಿಯೇ ಅನೇಕ ಶಾಲೆಗಳ ಚಟುವಟಿಕೆಗಳು ತರಗತಿಯೊಳಗಿನ ಪಾಠಪ್ರವಚನಗಳಿಗೆ ಸೀಮಿತಗೊಳ್ಳುತ್ತಿದ್ದವು. ಕ್ರೀಡಾಚಟುವಟಿಕೆಗಳು ಇಲ್ಲದಿರುವಿಕೆಗೆ ಮತ್ತೊಂದು ಮಹತ್ತರವಾದ ಕಾರಣವೆಂದರೆ, ಕ್ರೀಡೆಗಳಲ್ಲಿ ಭಾಗವಹಿಸಲು ತಾಯಿ ತಂದೆಗಳೂ ಮಕ್ಕಳ ಮೇಲೆ ಹೇರುತ್ತಿದ್ದ ನಿರ್ಬಂಧ. ಕ್ರೀಡೆಗಳಿಂದ ಗಂಡು ಮಕ್ಕಳ ಗಮನ ಪಠ್ಯಾಭ್ಯಾಸದೆಡೆ ಕಡಿಮೆಯಾಗುವುದೆಂಬ ಆತಂಕದೊಂದಿಗೆ ಹೆಣ್ಣುಮಕ್ಕಳು ದಾರಿ ತಪ್ಪಬಹುದೆಂಬ ಭಯವೂ ಅವರದಲ್ಲಿದ್ದಿತು. ಅದ್ದರಿಂದ ಮಕ್ಕಳಲ್ಲಿ ಕ್ರೀಡೆಗಳ ಬಗ್ಗೆ ಒಲವು ಕಡಿಮೆಯಾಗಿದ್ದಿರಬಹುದು.

ಕಾಲಕ್ರಮದಲ್ಲಿ ಜಿಲ್ಲೆಯಾದ್ಯಂತ ಪ್ರಾಥಮಿಕ ಶಾಲೆಗಳು ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಾಗಿ ಉನ್ನತೀಕರಿಸಲ್ಪಟ್ಟು ಹಲವೆಡೆ ಹೈಯರ್ ಸೆಕೆಂಡರಿ ಶಾಲೆಗಳೂ ಪ್ರಾರಂಭವಾದಾಗ, ಅವುಗಳ ಪಕ್ಕದ ಖಾಲಿ ನಿವೇಶನಗಳಲ್ಲಿ ಶಾಲಾ ಪ್ರಾರ್ಥನೆ, ಮಧ್ಯಾಹ್ನದ ಬಿಡುವಿನ ಸಮಯದಲ್ಲಿ ಕಬಡ್ಡಿಯಂತಹ ಖರ್ಚಿಲ್ಲದ ಆಟಗಳು ಪ್ರಾರಂಭಾದವು. ಶಿಕ್ಷಣ ಇಲಾಖೆಯೂ ಸಹ ಪಠ್ಯಕ್ರಮದ ಜೊತೆಗೆ ಪಠ್ಯೇತರ ಮತ್ತು ಆಟೋಟ ಚಟುವಟಿಕೆಗಳ ಪ್ರಾಮುಖ್ಯತೆಯನ್ನು ಮನಗಂಡಿತು. ಶಾಲೆಯ ದೈನಂದಿನ ವೇಳಾಪಟ್ಟಿಯಲ್ಲಿ ದೈಹಿಕ ಶಿಕ್ಷಣಕ್ಕೆ ನಿಗದಿತ ಸಮಯ ಮೀಸಲಿಡಲ್ಪಟ್ಟಿತು. ಆಟದ ಮೈದಾನಗಳಿಲ್ಲಿದ್ದ ಶಾಲೆಗಳಿಗೆ ಶಾಲಾ ಆವರಣದಲ್ಲಿಯೇ ದೈಹಿಕ ಶಿಕ್ಷಣ ಚಟುವಟಿಕೆಗಳನ್ನು ನಡೆಸಲಾಯಿತು. ಇದಕ್ಕಾಗಿಯೇ ದೈಹಿಕ ಶಿಕ್ಷಣ ಉಪಾಧ್ಯಾಯರು ನೇಮಕಗೊಂಡರು. ವರ್ಷಂಪ್ರತಿ ಶಾಲೆಗಳ ವಾರ್ಷಿಕೋತ್ಸವಗಳಂತೆ ಕ್ರೀಡಾದಿವಸಗಳೂ ಆಚರಣೆಗೆ ಬಂದವು. ಅಂತರ ಶಾಲೆಗಳ ಕ್ರೀಡಾ ಸ್ಪರ್ಧೆಗಳೂ ಪ್ರಾರಂಭಿಸಲ್ಪಟ್ಟು, ಅಂತರ ಜಿಲ್ಲಾ, ಅಂತರ ರಾಜ್ಯ ಮಟ್ಟಗಳವರೆಗೂ ಕ್ರೀಡಾಭಿಯಾನದ ಸ್ಪರ್ಧೆಗಳು ಆಯೋಜಿತವಾದವು.

* ಪೂರಕ ಮಾಹಿತಿ – ಶ್ರೀ ಎ.ಎಲ್. ರಾಮರಾವ್, ನಿವೃತ್ತ ಕ್ರೀಡಾಧಿಕಾರಿ, ಕೋಲಾರ–ಇವರ ಲೇಖನ.

ರಾಜ್ಯ ಸರ್ಕಾರವು ಪ್ರಾರಂಭಿಸಿದ "ಕರ್ನಾಟಕ ಸ್ಪೋರ್ಟ್ಸ್ ಅಸೋಷಿಯೇಷನ್" ಕ್ರೀಡಾರಂಗಕ್ಕೆ ವ್ಯವಸ್ಥಿತ ರೂಪು ನೀಡಿತು. ಇದರಿಂದ ಎಲ್ಲಾ ಕ್ರೀಡೆಗಳಿಗೂ ಏಕರೂಪ ಪ್ರೋತ್ಸಾಹ ದೊರಕಿತು. ವಿವಿಧ ಕ್ರೀಡೆಗಳಿಗೆ ತರಬೇತಿ ನೀಡಲೋಸುಗ ಹಾಗೂ ಗ್ರಾಮೀಣ ಯುವಕ ಯುವತಿರಲ್ಲಿನ ಸುಪ್ತ ಕ್ರೀಡಾ ಪ್ರತಿಭೆಯನ್ನು ಗುರುತಿಸಿ ಅದನ್ನು ಬೆಳಕಿಗೆ ತರಲೋಸುಗ ಜಿಲ್ಲಾ ಮಟ್ಟದಲ್ಲಿ ಪ್ರತ್ಯೇಕ ಕಛೇರಿಗಳನ್ನೇ ತೆರೆಯಲಾಯಿತು. ಅಂತರ ಜಿಲ್ಲಾ ಯುವಜನ ಮೇಳಗಳಲ್ಲಿ ಆಟೋಟ ಸ್ಪರ್ಧೆಗಳನ್ನೇರ್ಪಡಿಸಿ, ಗ್ರಾಮೀಣ ಕ್ರೀಡಾ ಪ್ರತಿಭೆಯ ಬೆಳವಣಿಗೆಗೆ ಕ್ರಮ ತೆಗೆದುಕೊಳ್ಳಲಾಯಿತು. ಪ್ರಾರಂಭದಲ್ಲಿ ಪ್ರತೀ ಜಿಲ್ಲೆಗೂ ಒಂದರಂತೆ ಕ್ರೀಡಾಂಗಣಗಳನ್ನು ಒದಗಿಸಿರುವ ಸರ್ಕಾರ ಪ್ರಸ್ತುತ ಈ ಸವಲತ್ತನ್ನು ಪ್ರತಿ ತಾಲೂಕಿಗೂ ವಿಸ್ತರಿಸಿದೆ.

ಜಿಲ್ಲೆಯಲ್ಲಿ ೧೯೭೬ರಲ್ಲಿ ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆ ಅಸ್ತಿತ್ವಕ್ಕೆ ಬರುವ ಮುನ್ನ ವಾಲಿಬಾಲ್, ಬಾಸ್ಕೆಟ್‌ಬಾಲ್ ಹಾಗೂ ಪುಟ್‌ಬಾಲ್ ಕ್ರೀಡೆಗಳು ಪ್ರಚಲಿತದಲ್ಲಿದ್ದವು. ಕೋಲಾರ, ಮಾಲೂರು, ಚಿಕ್ಕಬಳ್ಳಾಪುರಗಳಂತಹ ಹಲವು ತಾಲೂಕುಗಳಲ್ಲಿ ಕುಸ್ತಿ ಪಂದ್ಯಗಳು ನಡೆಯುತ್ತಿದ್ದವು. ಇವೆಲ್ಲ ಖಾಸಗಿ ವ್ಯಕ್ತಿ ಹಾಗೂ ಸಂಘಗಳ ವೈಯಕ್ತಿಕ ನಿರ್ವಹಣೆಯಲ್ಲಿ ನಡೆಯುತ್ತಿದ್ದವು. ಮೇಲ್ಕಂಡ ವರ್ಷ ಜಿಲ್ಲಾ ಯುವಜನ ಸೇವಾ ಕ್ರೀಡಾ ಇಲಾಖೆ ಕೋಲಾರ ಪಟ್ಟಣದ ಗಲ್‌ಪೇಟೆಯ ಖಾಸಗಿ ಕಟ್ಟಡದಲ್ಲಿ ಪ್ರಾರಂಭಿಸಲ್ಪಟ್ಟಿತು. ಜಿಲ್ಲೆಯ ಚಿಂತಾಮಣಿ ತಾಲೂಕಿನ ಎ. ಎಲ್. ರಾಮರಾಯರು ಜಿಲ್ಲಾ ಕ್ರೀಡಾಧಿಕಾರಿಯಾಗಿ ಜಿಲ್ಲೆಯ ಕ್ರೀಡಾಕ್ಷೇತ್ರದ ಸರ್ವಾಂಗೀಣ ಬೆಳವಣಿಗೆಗೆ ಶ್ರಮಿಸಿದರು. ಜಿಲ್ಲೆಯಲ್ಲಿ ಕಾರ್ಯನಿರ್ವಹಿಸಿದ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಜಿಲ್ಲೆಯ ಸಾರ್ವಜನಿಕರ, ಕ್ರೀಡಾಭಿಮಾನಿಗಳಾದ ದಾನಿಗಳ, ಹಲವಾರು ಸಂಘ ಸಂಸ್ಥೆಗಳ ಮತ್ತು ಜಿಲ್ಲಾ ಪತ್ರಕರ್ತರ ಸಹಕಾರದಿಂದ ಜಿಲ್ಲಾ ಕೇಂದ್ರದಲ್ಲಿ ವಿಶ್ವೇಶ್ವರಯ್ಯನವರ ಹೆಸರಿನ ಜಿಲ್ಲಾ ಕ್ರೀಡಾಂಗಣ, ಮಿನಿ ಕ್ರೀಡಾಂಗಣಗಳು ಹಾಗೂ ಯುವಜನ ಸೇವಾ ಕೇಂದ್ರಗಳನ್ನು ಸ್ಥಾಪಿಸಲಾಯಿತು. ೧೯೭೮ರಲ್ಲಿ ಕೋಲಾರದಲ್ಲಿ ಪ್ರಾರಂಭವಾದ ಯುವಜನ ಕೇಂದ್ರ ರಾಜ್ಯದಲ್ಲಿಯೇ ಪ್ರಥಮ ಎನ್ನಲಾಗಿದೆ. ಇಲ್ಲಿ ಎಲ್ಲಾ ರೀತಿಯ ಕ್ರೀಡೆಗಳನ್ನಾಡುವ ಅವಕಾಶ ಕಲ್ಪಿಸಲಾಗಿದೆ. ಇಲ್ಲಿ ಪ್ರತೀವರ್ಷ ಗ್ರಾಮೀಣ ಕ್ರೀಡಾಕೂಟಗಳನ್ನು ಏರ್ಪಡಿಸಲಾಯಿತು. ಪ್ರತೀ ಕ್ರೀಡೆಗೆ ನುರಿತ ತರಬೇತುದಾರರನ್ನು ಸರಕಾರ ನೇಮಿಸಿತು.

ಕೋಲಾರದಿಂದ ನಾಲ್ಕು ಕಿ.ಮೀ. ದೂರದ ವೀರಾಪುರದಲ್ಲಿ ಕೇಂದ್ರ ವಾಯುಪಡೆಯ ಆಡಳಿತದಲ್ಲಿರುವ ಹಾಗೂ ಎರಡನೇ ಮಹಾಯುದ್ಧದ ಕಾಲದಲ್ಲಿ ನಿರ್ಮಿತವಾದ ಒಂದು 'ಏರ್‌ಸ್ಟ್ರಿಪ್' ನಲ್ಲಿ ಇಂದಿಗೂ ಪ್ಯಾರಾಗ್ಲೈಡಿಂಗ್ ನಂತಹ ಹಲವಾರು ಕ್ರೀಡೆಗಳು ನಡೆಯುತ್ತಿವೆ. ಬೇತಮಂಗಲದಲ್ಲಿ ನೌಕಾವಿಹಾರಕ್ಕಾಗಿ ಒಂದು ಬೋಟಿಂಗ್ ಕ್ಲಬ್ ಕಾರ್ಯನಿರ್ವಹಿಸುತ್ತಿದೆ.

ರಾಜ್ಯದ ಎಲ್ಲೆಡೆಗಳಂತೆ ಜಿಲ್ಲೆಯಲ್ಲಿಯೂ ಸಹ ಇತ್ತೀಚೆಗೆ ಸಾಹಸ ಕ್ರೀಡೆಗಳು ಜನಪ್ರಿಯವಾಗುತ್ತಿವೆ. ರಾಕ್ ಕ್ಲೈಬಿಂಗ್ ಹಾಗೂ ಟ್ರೆಕಿಂಗ್ ತಂಡಗಳು ವಾರಾಂತ್ಯಗಳಲ್ಲಿ ಹಾಗೂ ರಜಾದಿನಗಳಲ್ಲಿ ಬೆಟ್ಟ ಹತ್ತುವ ಮತ್ತು ಬಂಡೆ ಹತ್ತುವ ಸಾಹಸ ಕ್ರೀಡೆಗಳಲ್ಲಿ ತೊಡಗುತ್ತವೆ. ಜಿಲ್ಲೆಯ 'ಅಗನಾಗ್' (ಅಂತರಗಂಗೋತ್ರಿ ಅಡ್ವೆಂಚರ್ಸ್ ಅಂಡ್ ನೇಚರ್ ಅವೇರ್‌ನೆಸ್ ಗ್ರೂಪ್) ಸಂಸ್ಥೆಯು ಯುವಕ–ಯುವತಿಯರನ್ನು ಈ ಕ್ರೀಡೆಯೆಡೆ ಆಕರ್ಷಿಸಿ, ರಾಜ್ಯಮಟ್ಟದಲ್ಲಿ ಟ್ರೆಕಿಂಗ್ ಕ್ಯಾಂಪ್‌ಗಳನ್ನು ನಡೆಸುತ್ತದೆ.

## ಜಿಲ್ಲೆಯ ಖ್ಯಾತಿವೆತ್ತ ಕ್ರೀಡಾಪಟುಗಳು

**ಗಿನ್ನಿಸ್ ದಾಖಲೆ:–** ೨೦೦೫ರ ಫೆಬ್ರವರಿಯಲ್ಲಿ ಬಂಗಾರಪೇಟೆ ತಾಲೂಕಿನ ತೊಪ್ಪನಹಳ್ಳಿಯ ಮಲ್ಲಿಕಾರ್ಜುನ ರೆಡ್ಡಿ ೬೬ ಮಿ.ಮೀ. ಉದ್ದದ, ಎರಡು ಮಿ.ಮೀ. ದಪ್ಪದ ಕಡ್ಡಿಯಲ್ಲಿ ಆರು ಗಂಟೆಗಳ ಸಮಯದಲ್ಲಿ ೨೮ ಕೊಂಡಿಗಳ ಸರಪಳಿಯನ್ನು ನಿರ್ಮಿಸಿ, ಗಿನ್ನಿಸ್ ದಾಖಲೆ ಮುರಿದಿದ್ದಾರೆ. ಅಮೆರಿಕದ ಬಾಬ್ ಶಾಯೆ ೧೭ ಕೊಂಡಿಗಳ ಸರಪಳಿ ನಿರ್ಮಿಸಿ, ೧೯೯೩ರಲ್ಲಿ ಗಿನ್ನಿಸ್ ದಾಖಲೆ ಸ್ಥಾಪಿಸಿದ್ದರು.

ಜಿಲ್ಲೆಯ ಹಲವಾರು ಕ್ರೀಡಾಪಟುಗಳು ರಾಜ್ಯ, ರಾಷ್ಟ್ರ ಹಾಗೂ ಅಂತರ ರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿ, ದೇಶದ ಹಿರಿಮೆಗೆ ಶ್ರಮಿಸಿ, ತನ್ಮೂಲಕ ಜಿಲ್ಲೆಗೆ ಕ್ರೀಡಾ ಕ್ಷೇತ್ರದಲ್ಲಿ ಉತ್ತಮ ಸ್ಥಾನ ಗಳಿಸಿಕೊಟ್ಟಿದ್ದಾರೆ. ಈ ಮುಂದೆ ಅಂತಹ ಹಲವಾರು ಕ್ರೀಡಾಪಟುಗಳ ಹೆಸರು ಹಾಗೂ ಸಾಧನೆಗಳ ವಿವರಗಳನ್ನು ನೀಡಲಾಗಿದೆ.

**ಫುಟ್‌ಬಾಲ್**: ಕೆಂಪಯ್ಯ, ಖಾಸಿಂ, ಕೋಲಾರ (ಒಲಂಪಿಕ್ಸ್‌ನಲ್ಲಿ ಭಾರತದ ಪ್ರತಿನಿಧಿಗಳು); ಕೆಂಪಯ್ಯ, ಮಾಲೂರು (ಪಶ್ಚಿಮ ಬಂಗಾಳದಲ್ಲಿ ರಾಜ್ಯದ ಪ್ರತಿನಿಧಿ)

**ವಾಲಿಬಾಲ್**: ಲಕ್ಷ್ಮಣ್, ನರಸಾಪುರ (ಅಂತರ ರಾಷ್ಟ್ರೀಯ ಮಟ್ಟದಲ್ಲಿ ವಿಶ್ವವಿದ್ಯಾಲಯ ಹಾಗೂ ರಾಜ್ಯದ ಪ್ರತಿನಿಧಿ, ರಾಜ್ಯ ತಂಡದ ನಾಯಕ, ರಾಜ್ಯ ಪ್ರಶಸ್ತಿ ವಿಜೇತ); ಕೆ. ಕೃಷ್ಣಪ್ಪ, ಕೈವಾರ (ಮೈಸೂರು ವಿಶ್ವವಿದ್ಯಾಲಯ ತಂಡದ ನಾಯಕ, ವಾಲಿಬಾಲ್ ಟೂರ್ನಿಗಳ ವ್ಯವಸ್ಥಾಪಕ); ಬಿ. ಗೋಪಾಲಪ್ಪ, ತಾಯಲೂರು (ರಾಜ್ಯಮಟ್ಟದ ಪಟು, ಬೆಂಗಳೂರು ವಿಶ್ವವಿದ್ಯಾಲಯದ ತಂಡದ ನಾಯಕ, ಕರ್ನಾಟಕ ತಂಡದ ನಾಯಕ, ಐಟಿಐ ತಂಡದ ನಾಯಕ, ರಾಜ್ಯ ತಂಡದ ತರಬೇತುದಾರ); ಎಸ್. ಓಬಳರೆಡ್ಡಿ, ನಂಗಲಿ (ರಾಷ್ಟ್ರೀಯ ಕ್ರೀಡಾ ಸಂಸ್ಥೆಯಲ್ಲಿ ತರಬೇತಿ ಪಡೆದವರು, ಅಂಚೆ ಮತ್ತು ತಂತಿ ಇಲಾಖೆ ವಾಲಿಬಾಲ್ ಪಟು ಹಾಗೂ ತರಬೇತಿದಾರ); ಟಿ.ಸಿ. ಶ್ರೀಶೇಖರ್, ಶಿಡ್ಲಘಟ್ಟ (ಭಾರತ ತಂಡದ ನಾಯಕರಾಗಿದ್ದರು); ತಮ್ಮಣ್ಣಗೌಡ, ಅನಿಲ್ ಮಳಗಿ, ಮುನಿಶಾಮಿ, ಸುಬ್ಬಾರೆಡ್ಡಿ, ಮಲ್ಲಿಕಾರ್ಜುನಯ್ಯ ಪ್ರಕಾಶ್ – ಎಲ್ಲಾ ಗೌರಿಬಿದನೂರು ತಾಲೂಕುನವರು ಹಾಗೂ ರಾಜ್ಯ ವಾಲಿಬಾಲ್ ತಂಡವನ್ನು ರಾಷ್ಟ್ರಮಟ್ಟದಲ್ಲಿ ಪ್ರತಿನಿಧಿಸಿದ್ದಾರೆ.

**ಬಾಸ್ಕೆಟ್‌ಬಾಲ್:** ಕನ್ನಡ ಯಂಗ್ ಛಾಲೆಂಜರ್ಸ್, ವೈ.ಎಫ್.ಬಿ.ಸಿ. ಕ್ಲಬ್ಬುಗಳ ಆಟಗಾರರು ರಾಜ್ಯವನ್ನು ಪ್ರತಿನಿಧಿಸಿದ್ದಾರೆ ಹಾಗೂ ಸಿ. ಎಂ. ನಾಗರಾಜ್, ಪೀಟರ್ ಬೆತೆಲೂ, ಬಿ. ಗೋಪಾಲ್ ದೇವಕುಮಾರ್, ಎಸ್. ಗೋವಿಂದರಾಜು, ಎನ್ ಸುಖದೇವ್, ಆದಿ ನಾರಾಯಣ, ಗೋಪಿ, ಚಿನ್ನರಾಜು, ವಿಜಯಕುಮಾರ್, ಜಿ. ರಾಮರಾಜು, ಪಿ. ಜಗನ್ನಾಥ್, ಪಿ. ಬಸವಪ್ಪರಾಜು, ಕೆ. ಎಸ್. ಆನಂದಗೋಪಾಲ್, ರವೀಂದ್ರಸಿಂಗ್, ವಿ. ಎಸ್. ವಿಶ್ವನಾಥ್, ಸಂಜೀವಯ್ಯ, ಪಿ. ಚಂದ್ರಪ್ರಕಾಶ್, ಕೆ. ಸುಂದರರಾಜ್ ಹಾಗೂ ಶ್ರೀನಿವಾಸರೆಡ್ಡಿ ಮುಂತಾದವರು ಉಲ್ಲೇಖನೀಯ ಆಟಗಾರರು.

**ಅಥ್ಲೆಟಿಕ್ಸ್:** ಕೋಲಾರ ತಾಲೂಕಿನ ಮೂರಾಂಡಹಳ್ಳಿಯ ಕೃಷಿಕ ವಿ. ಮಾರಪ್ಪ ತಮ್ಮ ಶಾಲಾದಿನಗಳಿಂದಲೂ ಕಬಡ್ಡಿ ಮತ್ತು ಎತ್ತರದ ಜಿಗಿತ ಕ್ರೀಡೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು, ಮುಂದೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತರಾದರು. ಈ ಎರಡು ಕ್ರೀಡೆಗಳಲ್ಲದೆ, ಉದ್ದ ಜಿಗಿತ ಮತ್ತು ಟ್ರಿಪಲ್ ಜಂಪ್‌ಗಳಲ್ಲಿಯೂ ಪರಿಶ್ರಮ ಹೊಂದಿ, 'ವೆಟರನ್' ಮಟ್ಟದ ಕ್ರೀಡಾಪಟು ಎನಿಸಿದರು. ೨೦೦೧ರಲ್ಲಿ ಚೈನಾ, ೨೦೦೨ರಲ್ಲಿ ಮಲೇಷಿಯಾ, ೨೦೦೩ರಲ್ಲಿ ಶ್ರೀಲಂಕಾ, ೨೦೦೪ರಲ್ಲಿ ಮಣಿಪುರ ಮತ್ತು ಹೈದ್ರಾಬಾದ್‌ಗಳಲ್ಲಿ ನಡೆದ ಅಂತರ ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸಿ, ಎಲ್ಲದರಲ್ಲಿಯೂ ಚಿನ್ನದ ಪದಕಗಳಿಸಿರುತ್ತಾರೆ. ಇವರಿಗಿಂತ ಮೊದಲು ಇದೇ ಊರಿನ ಕೆ. ನಾರಾಯಣಸ್ವಾಮಿ ಗುಡ್ಡಗಾಡು ಓಟದ ಸ್ಪರ್ಧೆಯಲ್ಲಿ ೨೧ ಕಿ.ಮೀ. ವಿಭಾಗದಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ೧೯೯೪–೯೫ರಲ್ಲಿ ಮೂರನೇ ಸ್ಥಾನ ಪಡೆದಿರುತ್ತಾರೆ.

ಹಲವಾರು ಪ್ರಶಸ್ತಿಗಳನ್ನು ಪಡೆದು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ದಾಖಲೆಗಳನ್ನು ಮಾಡಿದ ಉಳಿದ ಹಲವು ಅಥ್ಲೆಟಿಕ್ಸ್ ವಿಭಾಗದ ಪ್ರಮುಖರ ಹೆಸರುಗಳೆಂದರೆ: ಮೂರಾಂಡಹಳ್ಳಿಯ ಕೆ. ರಾಮಚಂದ್ರಪ್ಪ, ದೊಡ್ಡ ಹಸಾಳದ ವೆಂಕಟೇಶಪ್ಪ ಹಾಗೂ ಕೆ.ಜಿ.ಎಫ್‌ನ ಶರವಣಭವನ್; ಗುಡ್ಡಗಾಡು ಓಟದ ಸ್ಪರ್ಧೆಯಲ್ಲಿ ಎಸ್. ಟಿ. ಗೋವಿಂದಪ್ಪ, ನಾಗೇಂದ್ರ, ಸೆಲ್ವರಾಜ್, ಇ. ಗೋಪಾಲಪ್ಪ, ಕೆ. ಎಸ್. ತ್ಯಾಗರಾಜು, ಶರವಣನ್, ಕೆ. ಆರ್. ಉಷಾ, ಕೆ. ಆರ್. ಜಯಂತಿ, ಕೆ.ಜಿ. ಪಾರ್ವತಿ, ಕೆ. ಆರ್. ಗಾಯತ್ರಿ ಹಾಗೂ ಕೆ. ಜಿ. ಭಾರತಿ. ಲಕ್ಕೂರಿನ ಮಂಜುಳ ಕಿರಿಯರ ವಿಭಾಗದ ಗುಡ್ಡಗಾಡು ಓಟದ ಸ್ಪರ್ಧೆಯಲ್ಲಿ ರಾಜ್ಯ ಹಾಗೂ ರಾಷ್ಟ್ರವನ್ನು ಪ್ರತಿನಿಧಿಸಿದ್ದಾರೆ. ರೇಷ್ಮಾ ಅಪ್ಪಚ್ಚು ಮತ್ತು ಬರ್ಡಿ ಅಯ್ಯಪ್ಪ ಉತ್ತಮ ಅಥ್ಲೀಟ್‌ಗಳಾಗಿದ್ದರೆ, ಮೂರಾಂಹಳ್ಳಿಯ ಕೆ. ನಾರಾಯಣಸ್ವಾಮಿ 'ವಿಶ್ವ ಹಿರಿಯರ ಓಟದ ಸ್ಪರ್ಧೆ'ಯಲ್ಲಿ ದಾಖಲೆ ಸಮಯದಲ್ಲಿ ಓಡಿ ಐದನೇ ಸ್ಥಾನ ಪಡೆದಿರುತ್ತಾರೆ.

ಮಾಲೂರು ತಾಲೂಕು ಮಾಸ್ತಿ ಹೋಬಳಿ ತೊಳಕನಹಳ್ಳಿ ಗ್ರಾಮದ ಬಿ. ಮಂಜುನಾಥ ಭಾರತೀಯ ಪರ್ವತಾರೋಹಣ ಫೌಂಡೇಷನ್ನಿನ ನೋಂದಾಯಿತ ಸದಸ್ಯರಾಗಿರುವ 'ಎ' ದರ್ಜೆಯ ಪರ್ವತಾರೋಹಿ. ಇವರು ಉತ್ತರಾಂಚಲದ ನೆಹರು ಪರ್ವತಾರೋಹಣ ತರಬೇತಿ ಸಂಸ್ಥೆಯಲ್ಲಿ ತರಬೇತಿ ಹೊಂದಿ, ಇದೇ ಸಂಸ್ಥೆ ನಡೆಸುವ ಅಡ್ವಾನ್ಸ್ ಪರ್ವತಾರೋಹಣ ಶಿಬಿರಕ್ಕೆ ಜಿಲ್ಲೆಯಿಂದ ಆಯ್ಕೆ ಹೊಂದಿರುತ್ತಾರೆ. ಅಲ್ಲದೆ ಹಿಮಾಲಯ ಪರ್ವತಾರೋಹಣದಲ್ಲಿ ೧೮ ಸಾವಿರ ಅಡಿ ಏರಿದ ದಾಖಲೆ ಹೊಂದಿರುತ್ತಾರೆ. ಇದೇ ಊರಿನ ಪಾರ್ವತಿ, ಶಂಕರಪ್ಪ ಮುಂತಾದವರು ಜಿಲ್ಲಾ ಮಟ್ಟದ ಕ್ರೀಡಾ ಪ್ರತಿಭೆಗಳಾಗಿರುತ್ತಾರೆ.

ಕರ್ನಾಟಕ ಅಮೆಚೂರ್ ಅಥ್ಲೆಟಿಕ್ ಅಸೋಸಿಯೇಷನ್ ಹಾಗೂ ಜಿಲ್ಲಾ ಅಸೋಸಿಯೇಷನ್ನಿನ ಸಹಯೋಗದಲ್ಲಿ ೨೦೦೫ರ ಫೆಬ್ರವರಿ ಆರರಂದು ರಾಷ್ಟ್ರೀಯ ಗುಡ್ಡಗಾಡು ಓಟದ ಸ್ಪರ್ಧೆ ಕೋಲಾರದಲ್ಲಿ ನಡೆಯಿತು. ರಾಷ್ಟ್ರದ ಎಲ್ಲೆಡೆಗಳಿಂದ ಉತ್ಸಾಹೀ ಅಥ್ಲೀಟ್‌ಗಳು ಇದರಲ್ಲಿ ಪಾಲ್ಗೊಂಡಿದ್ದರು.

**ಗಾಲ್ಫ್ ಕ್ಲಬ್, ಕೆ.ಜಿ.ಎಫ್**

ದೇಶದ ನಾಲ್ಕು ಪುರಾತನ ಗಾಲ್ಫ್ ಕ್ಲಬ್‌ಗಳಲ್ಲಿ ನಾಲ್ಕನೇ ಸ್ಥಾನ ಪಡೆದ (ಕಲ್ಕತ್ತ, ಬೆಂಗಳೂರು ಹಾಗೂ ಮದರಾಸುಗಳ ನಂತರ) ಕೆ.ಜಿ.ಎಫ್. ಗಾಲ್ಫ್ ಕ್ಲಬ್ (೧೮೮೫)ರಲ್ಲಿ ಬ್ರಿಟಿಷರಿಂದ ಸ್ಥಾಪನೆಯಾಗಿದ್ದು, ಇದಕ್ಕೆ ೧೨೦ ವರ್ಷಗಳ ಇತಿಹಾಸವಿದೆ. ಇಂದಿಗೂ ಜಿಲ್ಲೆಯ ಕೆ.ಜಿ.ಎಫ್. ಪ್ರಾಂತದಲ್ಲಿ ಗಾಲ್ಫ್ ಒಂದು ಜನಪ್ರಿಯ ಕ್ರೀಡೆಯಾಗಿದೆ. ಹಲವಾರು ದಶಕಗಳಿಂದ ಅಂತರ ಕ್ಲಬ್‌ಗಳ ಗಾಲ್ಫ್ ಮ್ಯಾಚ್‌ಗಳು ನಡೆಯುತ್ತಿದ್ದು, ಅವು ಇಂದಿಗೂ ಈ ಕ್ಲಬ್ ವತಿಯಿಂದ ನಡೆಸಲ್ಪಡುತ್ತಿವೆ. ಈ ಕ್ಲಬ್ ಬೆಂಗಳೂರಿನ ಗಾಲ್ಫ್ ಕ್ಲಬ್ ನೊಡನೆ ತನ್ನ ಶತಮಾನೋತ್ಸವ ಅಂತರ ಕ್ಲಬ್ ಗಾಲ್ಫ್ ಟೂರ್ನಮೆಂಟ್ ನಡೆಸಿರುತ್ತದೆ.

**ಕ್ರಿಕೆಟ್**

ವಿಶ್ವದ ಖ್ಯಾತನಾಮ ಕ್ರಿಕೆಟಿಗರಾದ ರೋಜರ್ ಬಿನ್ನಿ ಹಾಗೂ ಸದಾನಂದ ವಿಶ್ವನಾಥ್ ಜಿಲ್ಲೆಯ ಕೆ.ಜಿ.ಎಫ್.ನವರು ಎಂಬುದು ಹೆಮ್ಮೆಯ ಸಂಗತಿ. ಇವರಲ್ಲದೆ ಕೋಲಾರದ ಎನ್.ಎಸ್. ನರಸಿಂಹಮೂರ್ತಿ ಉತ್ತಮ ಎಡಗೈ ಸ್ಪಿನ್ನರ್ ಹಾಗೂ ಬಂಗಾರುಪೇಟೆ ಪರಮೇಶ್ ಉತ್ತಮ ಸ್ಪಿನ್ನರ್‌ಗಳಾಗಿದ್ದರೆ, ಕೋಲಾರದ ನಾಜಿರಾಬೇಗಂ ಹಾಗೂ ಮುಳಬಾಗಿಲಿನ ಶೈಲಜಾ ರಾಜ್ಯ ಕ್ರಿಕೆಟ್ ತಂಡದ ಮಹಿಳಾ ಪ್ರತಿನಿಧಿಗಳಾಗಿದ್ದಾರೆ.

**ವ್ಯಾಯಾಮಶಾಲೆ, ಕೋಲಾರ**

ವ್ಯಾಯಾಮವು ಅನಾದಿಕಾಲದಿಂದಲೂ ಪ್ರಚಲಿತದಲ್ಲಿದ್ದ, ಪ್ರಸ್ತುತದಲ್ಲಿಯೂ ಅಭ್ಯಾಸದಲ್ಲಿರುವ ದೇಹದಾರ್ಢ್ಯ ಕಾಪಾಡಿಕೊಳ್ಳುವ ವ್ಯಕ್ತಿಗತ ಅಭ್ಯಾಸ. ಇದಕ್ಕೆ ಒಂದು ಸಾಮಾಜಿಕ, ಸಾರ್ವತ್ರಿಕ ನೂತನ ಆಯಾಮ ದೊರಕಿದೆ. ಜಿಲ್ಲೆಯ ಎಲ್ಲೆಡೆ ವ್ಯಾಯಾಮಶಾಲೆಗಳು ಮೊದಲಿನಿಂದಲೂ ಕಾರ್ಯನಿರತವಾಗಿದ್ದು, ಇವು ಮುಖ್ಯವಾಗಿ ಗ್ರಾಮೀಣ ಪ್ರದೇಶಗಳ ಮುಖ್ಯ ಕ್ರೀಡೆಯಾದ ಕುಸ್ತಿಪಂದ್ಯಗಳನ್ನೇರ್ಪಡಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದವು. ಇಂತಹ ವ್ಯಾಯಾಮ ಶಾಲೆಯೊಂದು ಕೋಲಾರ ನಗರದಲ್ಲಿ ೧೯೫೦ರ ಸೆಪ್ಟೆಂಬರ್ ೨೮ ರಂದು ರಾಜ್ಯದ ಪ್ರಥಮ ಮುಖ್ಯಮಂತ್ರಿಯಾದ ಕೆ.ಸಿ. ರೆಡ್ಡಿಯವರಿಂದ ಉದ್ಘಾಟಿಸಲ್ಪಟ್ಟಿತು. ಇಂದಿಗೂ ಸುಸ್ಥಿತಿಯಲ್ಲಿರುವ ಈ ವ್ಯಾಯಾಮ ಶಾಲೆಯ ಕಟ್ಟಡದ ಫಲಕದಲ್ಲಿ "ಗಾಂಧಿಶಕ ಮೂರನೇ ಸಂವತ್ಸರದ ಎಂಟನೇ ತಿಂಗಳು ಒಂದನೇ ದಿನಕ್ಕೆ ಸರಿಯಾದ" ಎಂಬ ಬರಹ ಗಮನ ಸೆಳೆಯುತ್ತದೆ. ಗರಡಿ ಸಾಮು, ಸೂರ್ಯನಮಸ್ಕಾರಗಳು ರಾಜ್ಯದ ಗ್ರಾಮೀಣ ಜನಪದರ ಸಾಮಾನ್ಯ ಕ್ರೀಡಾ ಪ್ರಕಾರಗಳಾಗಿದ್ದು, ಈಗಲೂ ಪ್ರಚಲಿತವಾಗಿದ್ದುಕೊಂಡು ಅವರ ಆರೋಗ್ಯವರ್ಧನೆಗೆ ಸಹಕಾರಿಯಾಗಿವೆ.

ಕೋಲಾರ ತಾಲೂಕಿನ ಕೆ. ಬಿ. ಗೋಪಾಲಕೃಷ್ಣ ಹಾಗೂ ಲಕ್ಷ್ಮೀಪತಿ (ವಿಶ್ವವಿದ್ಯಾಲಯ ಪ್ರತಿನಿಧಿಗಳು); ಕೋಲಾರದ ಅಂಚೆ ರಾಮಚಂದ್ರಪ್ಪ, ಚಿಕ್ಕಹನುಮಪ್ಪ, ದೊಡ್ಡ ಹನುಮಪ್ಪ, ಅಂಚೆ ಕೃಷ್ಣಪ್ಪ, ಮಾಲೂರಿನ ಗುರಪ್ಪ, ಹೂಹಳ್ಳಿ ಮುನಿಶಾಮಿ, ಚಿಕ್ಕಬಳ್ಳಾಪುರದ ಆಂಜನಪ್ಪ, ಪಿಳ್ಳಯ್ಯ, ಇವರೆಲ್ಲ ಜಿಲ್ಲೆಯ ಕುಸ್ತಿಪಟುಗಳು.

ಕೋಲಾರ ವ್ಯಾಯಾಮ ಶಾಲೆಯ ಎ. ಎ. ರವಿ ವಿಶ್ವ ದೇಹದಾರ್ಢ್ಯ ಸ್ಪರ್ಧೆಯಲ್ಲಿ ನಾಲ್ಕನೇ ಸ್ಥಾನ ಪಡೆದಿರುತ್ತಾರೆ. ಇವರಿಗೆ, 'ಕರ್ನಾಟಕ ಕಿಶೋರ', 'ಶ್ರೀ ಯೂನಿವರ್ಸಿಟಿ' ಮುಂತಾದ ಬಿರುದುಗಳು ಲಭಿಸಿರುತ್ತವೆ.

ಕೋಲಾರದ ಕೆ. ಆರ್. ರುಕ್ಮಿಣಿ ಸ್ಕೇಟಿಂಗ್‌ನಲ್ಲಿ ಹೆಸರುಗಳಿಸಿದ್ದರೆ, ಇದೇ ಸ್ಥಳದ ಸೋಮಶೇಖರ್ ಹಾಗೂ ರಂಗರಾಜನ್ ಬಾಸ್ಕೆಟ್‌ಬಾಲ್‌ನಲ್ಲಿ ರಾಷ್ಟ್ರಮಟ್ಟದ ಆಟಗಾರರಾಗಿರುತ್ತಾರೆ. ಡಿಸ್ಕಸ್‌ಥ್ರೋನಲ್ಲಿ ಕೆ. ಜಿ. ಎಫ್. ನ ಸೌಂದರ್ಯ ರಾಜನ್ ಹಾಗೂ ಜನಪ್ರಿಯರಾಗಿದ್ದರೆ, ಕೋಲಾರದ ಕೆ. ಟಿ. ಪ್ರಕಾಶ್ ಖೊಖೊದಲ್ಲಿ 'ವೀರಾಭಿಮನ್ಯು' ಪ್ರಶಸ್ತಿ ವಿಜೇತರಾಗಿರುತ್ತಾರೆ. ಇವರಲ್ಲದೆ ಈ

ಮುಂದೆ ಹೆಸರಿಸಿರುವವರು ಖೊಖೊ ಕ್ರೀಡೆಯಲ್ಲಿ ವಿ. ವಿ. ಹಾಗೂ ರಾಜ್ಯದ ತಂಡಗಳನ್ನು ಪ್ರತಿನಿಧಿಸಿರುತ್ತಾರೆ – ಎಂ. ಸ್ವರ್ಣಲತಾ, ಪಿ. ಶ್ರೀಧರ್, ಬಿ. ಎಸ್. ಜ್ಯೋತಿ, ಜೆ.ಇ. ಪ್ರಮಿಳಾ, ಸುಕನ್ಯಾ, ಎನ್. ಲಕ್ಷ್ಮಿದೇವಿ, ವರಲಕ್ಷ್ಮಿ, ಪಿ. ಸುರೇಶ್‌ಬಾಬು, ಜಿ. ರಾಣಿಬಾಯಿ, ಪದ್ಮ ಕಾಮತ್, ಕೆ. ಶ್ರೀನಿವಾಸಮೂರ್ತಿ, ಸಿ. ವಿ. ಲಕ್ಷ್ಮೀಪ್ರಸನ್ನ, ಬಿ. ಮಂಜುನಾಥ್, ಎ. ಲಕ್ಷ್ಮೀನಾರಾಯಣ ಹಾಗೂ ದರ್ಶನ್. ಪಿ. ಷಾ.

**ಯೋಗ ಶಾಲೆಗಳು**

ಇಂದಿನ ದಶಕಗಳಲ್ಲಿ ದೇಹದಾರ್ಢ್ಯತೆ, ದೈಹಿಕ ವ್ಯಾಯಾಮ, ಯೋಗ ಮುಂತಾದವುಗಳ ಬಗ್ಗೆ ಎಲ್ಲ ವಯೋಮಾನದ ಜನರು ಆಸಕ್ತಿ ತಳೆದಿದ್ದಾರೆ. ವಿಶ್ವವಿಖ್ಯಾತ ಯೋಗಪಟು ಶ್ರೀ ಬಿ.ಕೆ.ಎಸ್. ಐಯ್ಯಂಗಾರ್ ಅವರು ಕೋಲಾರ ತಾಲೂಕಿನ ಬೆಳ್ಳೂರಿನವರು. ಇವರ ಧರ್ಮಪತ್ನಿ ಶ್ರೀಮತಿ ರಮಾಮಣಿ ಐಯ್ಯಂಗಾರ್‌ರೊಡಗೂಡಿ, ದೇಶವಿದೇಶಗಳಲ್ಲಿ ಯೋಗ ಕಲಾ ಪ್ರದರ್ಶನಗಳನ್ನು, ಯೋಗ ತರಗತಿಗಳನ್ನು ನಡೆಸಿರುತ್ತಾರೆ. ಅಲ್ಲದೆ, ಮುಂಬೈಯಲ್ಲಿ ಒಂದು ಯೋಗಶಾಲೆಯನ್ನು ಬೆಂಗಳೂರಿನಲ್ಲಿ ಅದರ ಶಾಖಾ ಶಾಲೆಯನ್ನು ಸ್ಥಾಪಿಸಿರುತ್ತಾರೆ. ೨೦೦೪–೦೫ಕ್ಕೆ ತಮ್ಮ ಹುಟ್ಟೂರಿನಲ್ಲಿ ಒಂದು ಪ್ರೌಢಶಾಲೆಯನ್ನೂ ಪ್ರಾರಂಭಿಸಿದ್ದಾರೆ.

**ಕರಾಟೆ ಶಾಲೆಗಳು**

ದೈಹಿಕ ಸದೃಢತೆ ಹಾಗೂ ಮಾನಸಿಕ ಏಕಾಗ್ರತೆಗಳ ಸಾಧನೆಗಾಗಿ ಇತ್ತೀಚಿನ ದಿನಗಳಲ್ಲಿ ಜನಪ್ರಿಯವಾಗುತ್ತಿರುವ ಕರಾಟೆ ಕಲೆ ಮುಖ್ಯವಾಗಿ ಸ್ವರಕ್ಷಣೆಗಾಗಿ ಕಲಿಯುವ ದೈಹಿಕ ಶಿಕ್ಷಣವಾಗಿದೆ. ಈ ಕಲೆ ಹೆಚ್ಚಾಗಿ ಒಂದು ಕ್ರೀಡೆಯಾಗಿ ಜಿಲ್ಲೆಯ ಹಲವೆಡೆ ಕಲಿಯಲ್ಪಡುತ್ತದೆ. ಕೋಲಾರದ ಬ್ರೂಸ್ಲಿ ಕರಾಟೆ ಶಾಲೆ, ಕೆಂಕೋಕನ್ ಕರಾಟೆ ಶಾಲೆ, ಚಿಕ್ಕಬಳ್ಳಾಪುರ ಹಾಗೂ ಚಿಂತಾಮಣಿಗಳ ಒಕಿನೋವಾ ಕರಾಟೆ ಶಾಲೆಗಳು, ಮಾಲೂರಿನ ಬೆಸ್ಟ್ ಕರಾಟೆ ಶಾಲೆ, ಶ್ರೀನಿವಾಸಪುರ ಹಾಗೂ ವೇಮಗಲ್‌ನ ಬ್ರೂಸ್ಲಿ ಕರಾಟೆ ಶಾಲೆಗಳು ಐದು ವರ್ಷದಿಂದ ಮೊದಲುಗೊಂಡು ೪೦ ವರ್ಷದವರೆಗೆ ಲಿಂಗ ಭೇದವಿಲ್ಲದೆ ಜನರನ್ನಾಕರ್ಷಿಸುತ್ತಿವೆ.

**ಕ್ರೀಡಾಂಗಣಗಳು:** ಕ್ರೀಡಾ ಕ್ಷೇತ್ರದ ಅಭಿವೃದ್ಧಿಗಾಗಿ ಸರಕಾರ ಪ್ರತಿ ಜಿಲ್ಲೆಗೆ ಯುವಜನ ಸೇವೆ ಹಾಗೂ ಕ್ರೀಡಾ ಕೇಂದ್ರವನ್ನು ಒಬ್ಬ ಜಿಲ್ಲಾ ಕ್ರೀಡಾಧಿಕಾರಿಯ ಆಡಳಿತದಡಿ ಮಂಜೂರು ಮಾಡಿತು. ಕೋಲಾರದಲ್ಲಿ ೧೯೭೬ ರಿಂದ ಈ ಇಲಾಖೆ ಕಾರ್ಯಪ್ರವೃತ್ತರಾಗಿ ಕ್ರೀಡಾಂಗಣಗಳ ನಿರ್ಮಾಣಕ್ಕೆ ಪ್ರಾಮುಖ್ಯತೆ ನೀಡಿತು. ಇದರಿಂದ ಜಿಲ್ಲೆಯಲ್ಲಿ ಪ್ರಥಮವಾಗಿ ವಿಶ್ವೇಶ್ವರಯ್ಯ ಕ್ರೀಡಾಂಗಣ ೫,೦೦೦ ಮಂದಿ ಪ್ರೇಕ್ಷಕರ ಗ್ಯಾಲರಿಯೊಂದಿಗೆ ಸ್ಥಾಪನೆಯಾಯಿತು. ಇದಲ್ಲದೆ, ಕೋಲಾರದಲ್ಲಿ ಕಿರಿಯ ಕಾಲೇಜಿನ ಬಳಿ ಮಿನಿ ಕ್ರೀಡಾಂಗಣವೂ ಇರುತ್ತದೆ. ಜಿಲ್ಲೆಯ ಗುಡಿಬಂಡೆ ಹೊರತುಪಡಿಸಿ ಎಲ್ಲಾ ತಾಲೂಕುಗಳಲ್ಲಿಯೂ ಕ್ರೀಡಾಂಗಣಗಳು ವ್ಯವಸ್ಥೆಗೊಳ್ಳುತ್ತಿವೆ. ಶ್ರೀನಿವಾಸಪುರ ಹಾಗೂ ಗೌರಿಬಿದನೂರು ತಾಲೂಕುಗಳಲ್ಲಿ ಇದಕ್ಕಾಗಿ ಕಾಮಗಾರಿ ಪ್ರಾರಂಭಗೊಂಡಿದೆ. ಮಾಲೂರು, ಚಿಂತಾಮಣಿ, ಚಿಕ್ಕಬಳ್ಳಾಪುರ ಹಾಗೂ ಮುಳಬಾಗಿಲುಗಳಲ್ಲಿ ಪೆವಿಲಿಯನ್ ಈಗಾಗಲೇ ತಯಾರಾಗಿದೆ. ಬಾಗೇಪಲ್ಲಿ, ಬಂಗಾರುಪೇಟೆಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ. ಕೋಲಾರದಲ್ಲಿ ೧.೫೮ ಕೋಟಿ ರೂ. ವೆಚ್ಚದಲ್ಲಿ ಒಂದು ಇಂಡೋರ್ ಸ್ಟೇಡಿಯಂ ಸರ್ಕಾರದ ವತಿಯಿಂದ ಪ್ರಾರಂಭವಾಗಲಿದೆ.